# ಕೊಡಗು ಸಂಗಾತಿ

ಅಕ್ಟೋಬರ್ 16 ರಿಂದ 31, 2000 | ಪಾಕ್ಷಿಕ ಪತ್ರಿಕೆ | (ನಿರ್ಪಾಲ್ 30, ಬೊಂತಲ್ 1-15)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

KA/SK/MYS-88 | ಸಂಪುಟ : 4 | ಸಂಚಿಕೆ : 20 | ಪುಟಗಳು : 24 | ಬೆಲೆ ರೂ. : 6-00




ಲೇಖನ : ಒಳಪುಟಗಳಲ್ಲಿ

## ಸೇವೆಯಲ್ಲಿರುವ ಜನಾಂಗದ ಏಕೈಕ ಕರ್ನಲ್ :
## ಶ್ರೀ ಮೊಟ್ಟೇರ ನಂಜಪ್ಪ ಪುರುಷೋತ್ತಮ

ನಾಡಿನ ಜನತೆಗೆ ದೀಪಾವಳಿ ಹಬ್ಬದ ಶುಭಾಶಯಗಳು.

## ಮೈಸೂರಿನ ಕಲಾಮಂದಿರದಲ್ಲಿ 3-12-2000ರಂದು ಅರೆ ಭಾಷೆ ಗೌಡರ ಅದ್ದೂರಿ ಕಾರ್ಯಕ್ರಮ

ತಾರೀಖ್ 3-12-2000 ರ್‌ಲಿ ಮೈಸೂರ್‌ನ ಕಲಾಮಂದಿರಲಿ ಜನಾಂಗದ ಆದರ್ಶ ದಂಪತಿಗ ಮತ್ತು ಫ್ಯಾಷನ್ ಷೊ ನಡ್ದದೆ. ಜನಾಂಗ ಬಾಂದವು ಸಂಸಾರ ಸಮೇತ ಬಂದ್ ಕಾರ್ಯಕ್ರಮನ ಬಾರಿ ಲಾಯ್ಕಾಗಿ ನಡ್ಸಿ ಕೊಡೊಕುತ ಕೇಳಿ ಕಂಡವೆ. ಅಭಿಮಾನಿಗ ತಮ್ಮ ತನು ಮನ ಧನ ಸಹಕಾರನ ನೀಡಕು. ಹಂಗೆನೆ MO/DD ಸಹ ಮಾಡಕ್. ಸ್ಥಳೀಯ ಚೆಕ್‌ಗಳ್ನ ಸ್ವೀಕಾರ ಮಾಡ್ವೆ. ಅಷ್ಟೆ ಅಲ್ಲ ರೂ 100/- ಕ್ಕಿಂತ ಹೆಚ್ಚಿಗೆ ಕೊಟ್ಟವರ ಹೆಸ್‌ರ್ನ ಸಂಗಾತಿ ಪತ್ರಿಕೆಲಿ ಹಾಕುವೆ. ಆದರ್ಶ ದಂಪತಿ ಮತ್ತೆ ಫ್ಯಾಷನ್ನ್ ಷೋಗೆ ಆದಸ್ಟ್ ಬೇಗ ಹೆಸ್ರ್ ನೊಂದಾಯಿಸಕು. 5-11-2000 ದ ಒಳಗಡೆ ನೊಂದಾಯಿಸಿಕಣಿ. ನಂತ್ರ ಬಂದವ್‌ಗಳ್ನ ತಿರಸ್ಕರಿಸಿವೆ. ಕಾರ್ಯಕ್ರಮ ವಿಶಿಷ್ಠ ಸಂಪ್ರದಾಯದ ವಿಶಿಷ್ಠ ರೀತಿಲಿ ನಡ್ದದೆ. 60 ವರ್ಷಕ್ಕೆ ಮೇಲ್ಪಟ್ಟ ದಂಪತಿಗಸ ಭಾಗವಹಿಸಕ್.

ಹಣ ಕಳ್ಸವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮಾರ್ಕೆಟ್ ಬ್ರಾಂಚ್, ಮೈಸೂರು ಖಾತೆ ನಂಬರ್ **310482** ಕ್ಕೆ ನೇರವಾಗಿ ಕಳ್ಸಕ್.

ಗ್ಯಾನ ಇರ್‌ಲಿ.
ಆಖೈರಿ ತಾರೀಖ್ **5-11-2000**

**ಸಂಪರ್ಕಿಸುವ ಮತ್ತೆ ಹಣ ಕಳ್ಸವ ವಿಳಾಸ :**

ಕರ್ಣಯ್ಯನ ಲಕ್ಷ್ಮಣ, ಕಾರ್ಯದರ್ಶಿ, D.No. 1047/28A, 2 ನೇ ಮೇನ್,
7ನೇ ಕ್ರಾಸ್, ವಿದ್ಯಾರಣ್ಯ ಪುರಂ, ಮೈಸೂರು-8 **Ph : 0821-489052**

ತಡಿಯಪ್ಪನ ಕುಮಾರಜಯ, ಅಧ್ಯಕ್ಷರು, ನಂ. 10,LIG, E&F ಬ್ಲಾಕ್,
ಪವರ್ ಹೌಸ್ ಹಿಂಭಾಗ, ರಾಮಕೃಷ್ಣನಗರ, ಮೈಸೂರು -23. **Ph : 0821-568574**

---

ಪ್ರಿಯರೇ

ನಮಸ್ಕಾರಗಳು ತಾವು ವಿಶ್ವಾಸವಹಿಸಿ ಪ್ರಕಟಿಸಿದ ನನಗೆ ರಾಜ್ಯ ಪ್ರಶಸ್ತಿ ದೊರಕಿದ ಸಂಬಂದಿತ ವರದಿಯ ಪತ್ರಿಕೆ ತಲುಪಿದೆ. ದನ್ಯವಾದಗಳು ಪತ್ರಿಕಾ ಬಳಗದವರಿಗೆಲ್ಲರಿಗೂ ಕಾವೇರಿ ತುಲಾ ಸಂಕ್ರಮಣ ದೀಪಾವಳಿಯ ಹಾರ್ಧಿಕ ಶುಭಾಶಯಗಳು

**ಹೆಚ್. ಟಿ. ಅನಿಲ್, ಉದಯ ಟಿ.ವಿ. ಪ್ರತಿನಿಧಿ, ಮಡಿಕೇರಿ.**

---



## ಚಿರಸ್ಮರಣೆ

**ದಿ|| ಸುಬೇದಾರ್ ಅಪ್ಪೈಯ್ಯಗೌಡರು**

ಜನನ : (ಅಂದಾಜು) 1793

ಮರಣ : 31-10-1837

ಭವ್ಯ ಭಾರತದ ಇತಿಹಾಸದಲ್ಲಿ ಸ್ಮರಣೆಯಾಗ ಬೇಕಿದ್ದವರು ಆದರೆ ಇಂದು......???

163 ವರ್ಷಗಳ ಹಿಂದೆ ಅಂದರೆ31-10-1837 ರಂದು ಮಡಿಕೇರಿ ಕೋಟೆ ಆವರಣದಲ್ಲಿ ಸ್ಥಳೀಯರ ಮತ್ತು ಬ್ರಿಟಿಷರ ಕುತಂತ್ರದಿಂದ ಗಲ್ಲಿಗೇರಿದ ಸ್ವಾತಂತ್ರ್ಯ ಸಂಗ್ರಾಮದ ಹರಿಕಾರ, ಕ್ರಾಂತಿ ವೀರ ದಿ|| ಸುಬೇದಾರ್ ಗುಡ್ಡೆಮನೆ ಅಪ್ಪೈಯ್ಯಗೌಡರು.

"ಇವರಿಗೆ ಹತ್ತು ಕುಟುಂಬ ಹದಿನೆಂಟು ಗೋತ್ರದ ಸಮಸ್ತ ಅರೆಭಾಷಿಕರ ಶ್ರದ್ಧಾಂಜಲಿಗಳು"

ಊಹಾ ಚಿತ್ರ : ಪಟ್ಟಡ ಪ್ರಭಾಕರ್

ಪ್ರಕಟಣೆ : ಕೊಡಗು ಸಂಗಾತಿ, ಮೈಸೂರು

**2000,** ಅಕ್ಟೋಬರ್ 16 ರಿಂದ 31ರ ತನಕ

ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಅಳಿದು ಹೋಗುತ್ತಿರುವ ಗದ್ದೆ ಮೀನು ಏಡಿ ಜೀವಿಗಳು | - ಸಂಪಾದಕೀಯ | 02 |
| ಶ್ರೀ ಪಾಕ ವನದುರ್ಗಿ ದೇವಸ್ಥಾನದ ಸುತ್ತ ಒಂದು ನೋಟ | - ಕೂರನ ಆರ್. ಸೌಧೀಶ್ ಕುಮಾರ್ | 02 |
| ಸೇವೆಯಲ್ಲಿರುವ ಜನಾಂಗದ ಏಕೈಕ ಕರ್ನಲ್, ಶ್ರೀ ಮೊಟ್ಟೇರ ನಂಜಪ್ಪ ಪುರುಷೋತ್ತಮ | - ಎಡಿಕೇರಿ ಸುದರ್ಶನ್ | 04 |
| ಸರ್ಪಗಂಧ - ಧಾರವಾಹಿ - 40 | - ಕೌಂಡಿನ್ಯ | 06 |
| 17-9-2000 ರಲ್ಲಿ ಕೊಡಗು ಗೌಡ ವಿದ್ಯಾಸಂಘದ ವತಿಯಿಂದ ಯುವ ಪ್ರತಿಭೆಗಳಿಗೆ ನೀಡಿದ ಪ್ರತಿಭಾ ಪುರಸ್ಕಾರ | - ಸಂಗಾತಿ | 07 |
| 2000-2001ರ ವಾರ್ಷಿಕ ಮಹಾಸಭೆ ಮತ್ತು ಕೈಲು ಮುಹೂರ್ತ ಹಬ್ಬದ ವರದಿ | - ದಿನಕರ ಗೌಡ ನೂಜಿ | 08 |
| ಯಲಹಂಕದಲ್ಲಿ ಕೈಲ್‌ಮುಹೂರ್ತ ಆಚರಣೆ | - ಕಲ್ಲುಮುಟ್ಲು ಬಸಪ್ಪ | 10 |
| ಪತ್ರ ವಿಭಾಗ | - ಸಂಗಾತಿ | 11 |
| ಕನ್ನಡದ ಕವಿಗಳ ಕಾವ್ಯನಾಮಗಳು | - ಗೋವಿಂದಮ್ಮನ ಪ್ರವೀಣ್‌ಕುಮಾರ್ | 12 |
| ಬಾಳಿನ ನಲಿವಿಗೆ, ನಾಳಿನ ಬೆಳಕಿಗೆ : ನೋವಿನ ನೆಲೆ ಬೆಲೆ - ಜೀವನದ ಸಾರ್ಥಕತೆ | - ಕೆದಂಬಾಡಿ ಆರ್. ವಿನೋದ್ | 13 |
| ಯಾರ ಬೇಟೆ? | - ಬಾರಿಯಂಡ ಜೋಯಪ್ಪ | 16 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 19 |
| **ಅರೆಭಾಷಿಕ ವಿಭಾಗ** | | |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 19A | - ಶಂಕರನ ಬಸಪ್ಪ | 09 |
| ವ್ಯಕ್ತಿ ಪರಿಚಯ : ಅಯ್ಯಂಡ್ರ ಸೀತಾರಾಮ | - ಆಜಡ್ಕ ರಾಣಿ ಬಾಲಕೃಷ್ಣ | 14 |
| ಕಾಲೇಜಿಗೆ ಹೋದ ಚೋಮಣಿ ಹೈದ | - ಹೊದ್ದೆಟಿ ಭವಾನಿಶಂಕರ್ | 18 |


| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946 |

**ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ., ಅರ್ಧ ವಾರ್ಷಿಕ -75 ರೂ., ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.**

# ಸಂಪಾದಕೀಯ : ಅಳಿದು ಹೋಗುತ್ತಿರುವ ಗದ್ದೆ ಮೀನು ಏಡಿ ಜೀವಿಗಳು

ಕೊಡಗಿನಲ್ಲಿ ಕಾಡು ಪ್ರಾಣಿಗಳಾದ ಜಿಂಕೆ, ಮೊಲ, ಕತ್ರಿ ಬೆಕ್ಕು, ಕಬ್ಬೆಕ್ಕು, ಕಾಡುಕೋಳಿ, ಕೋಂಬಕ್ಕಿ ಮುಂತಾದ ಸಾಮಾನ್ಯ ಮೃಗಗಳು ಜನರ ಗೊತ್ತು ಗುರಿ ಇಲ್ಲದ ಬೇಟೆಯ ದೆಸೆಯಿಂದಲೂ, ಯಥೇಚ್ಛವಾಗಿ ಬೆಳೆದಿದ್ದ ಕಾಡನ್ನು ನಾಶ ಮಾಡಿ ಕಾಫಿ ತೋಟ ಮಾಡಿದುದರ ಫಲವಾಗಿ ಈ ಜೀವಿಗಳ ವಂಶವೇ ನಾಶವಾಗಿ ಹೋಗಿದೆ.

ಅದೇ ರೀತಿ ಗದ್ದೆಗಳಲ್ಲಿ ಮಳೆಗಾಲದಲ್ಲಿ ಸಿಗುತ್ತಿದ್ದ ಗದ್ದೆ ಮೀನು ಹಾಗೂ ಗದ್ದೆಯ ಏಡಿಗಳು ಈಗ ಕೃತಕ ಗೊಬ್ಬರ ಉಪಯೋಗಿಸುತ್ತಿರುವುದರಿಂದಲೂ ಹಾಗೂ ಕ್ರಿಮಿನಾಶಕಗಳನ್ನು ಸಿಂಪಡಿಸುವ ಕ್ರಮದಿಂದಾಗಿ ಗದ್ದೆಯ ಏಡಿ ಹಾಗೂ ಮೀನುಗಳ ಸಂತಾನವೇ ನಾಶವಾಗಿ ಹೋಗಿದೆ. ಈಗಿನ ಪೀಳಿಗೆಗೆ ಗದ್ದೆ ಮೀನು ಹೇಗಿರುತ್ತದೆ, ಗದ್ದೆ ಏಡಿ ಹೇಗಿರುತ್ತದೆಂದು ಚಿತ್ರ ಬಿಡಿಸಿ ತೋರಿಸಿ ಕೊಡಬೇಕೇ ಹೊರತು ಜೀವಂತವಾದ ಈ ಪ್ರಾಣಿಗಳನ್ನು ತೋರಿಸುವುದಕ್ಕೆ ಸಾಧ್ಯವಿಲ್ಲದಂತಾಗಿದೆ.

ಆದ್ದರಿಂದ ಈ ಜೀವಗಳ ಪುನರೋದ್ಧಾರಕ್ಕಾಗಿ ಪ್ರತಿಯೊಬ್ಬನೂ ತನ್ನ ಹಿಡುವಳಿಯಲ್ಲಿರುವ ಗದ್ದೆಗಳಲ್ಲಿ ಒಂದೆರಡು ಗದ್ದೆಗಳನ್ನು ಈ ಜೀವಿಗಳು ಬದುಕಿ ಉಳಿಯುವುದಕ್ಕೆ ಹಿಂದೆ ಇದ್ದ ಸ್ಥಿತಿಯನ್ನು ಸೃಷ್ಟಿಸಿ ಈ ಜೀವಿಗಳ ಉದ್ಧಾರಕ್ಕಾಗಿ ಕ್ರಮ ತೆಗೆದುಕೊಂಡರೆ ಅಳಿದು ಹೋಗುವ ಈ ಸಂತತಿಯನ್ನು ಉಳಿಸಲು ಸಾಧ್ಯವೆಂದು ಸಂಗಾತಿ ಬಯಸುತ್ತದೆ.

## ಶ್ರೀ ಪಾಕ ವನದುರ್ಗಿ ದೇವಸ್ಥಾನದ ಸುತ್ತ ಒಂದು ನೋಟ

ಕೊಡಗಿನಲ್ಲಿ ಕೈಲ್ ಮುಹೂರ್ತ, ಹುತ್ತರಿ ಹಾಗೂ ಕಾವೇರಿ ಸಂಕ್ರಮಣ ಹಬ್ಬವನ್ನು ಆಚರಿಸುವಂತಹದು ಕೊಡಗಿನ ಜನತೆಗೆಲ್ಲಾ ತಿಳಿದಂತಹ ವಿಷಯ ಆಗಿದೆ. ಆದರೆ ಇದೆಲ್ಲಾದಕ್ಕಿಂತ ಹೆಚ್ಚಿನ ವೈಭವದಿಂದ, ವಿಜೃಂಭಣೆಯಿಂದ ಕೊಡಗಿನ ಎಲ್ಲಾ ಜನಾಂಗದವರು ಸೇರಿ ಒಂದು ಹಬ್ಬವನ್ನು ಆಚರಿಸುತ್ತಾರೆ. ಇದು ಯಾವುದಿರಬಹುದೆಂದು ನಿಮಗೆಲ್ಲಾ ಕುತೂಹಲ ಉಂಟಾಗಿರ ಬಹುದು ಅಲ್ಲವೆ....?

ಹೌದು, ಈ ಮೇಲಿನ ಹಬ್ಬಗಳಿಗಿಂತ ಭಿನ್ನವಾಗಿ ಹಬ್ಬವನ್ನು ಊರಿನ ಎಲ್ಲಾ ಜನತೆ ಅಂದರೆ ಕೊಡಗಿನ ಒಂದೊಂದು ಊರಿನವರು, ಒಂದೊಂದು ರೀತಿಯಲ್ಲಿ ಆಚರಿಸುತ್ತಾರೆ. ಅದು ಆ ಗ್ರಾಮದ ದೇವಾಲಯದ ದೇವರ ಹಬ್ಬ. ಅಂದರೆ ಊರು ಹಬ್ಬ, ಜಾತ್ರೆ ಇತ್ಯಾದಿ ರೀತಿಗಳಲ್ಲಿ ಹೇಳಬಹುದು. ಪ್ರತಿಯೊಂದು ಗ್ರಾಮದಲ್ಲೂ ಒಂದೊಂದು ದೇವಸ್ಥಾನ ಇರುತ್ತದೆ. ವರ್ಷದ ಮೊದಲಿನಿಂದ ಕೊನೆಯವರೆವಿಗೂ ಬೇರೆ, ಬೇರೆ ಗ್ರಾಮದಲ್ಲಿ ಗೊತ್ತಾದ ದಿನದಂದು ಬೇರೆ, ಬೇರೆ ತಿಂಗಳುಗಳಲ್ಲಿ ಆಚರಿಸುತ್ತಾರೆ. ಇವುಗಳೆಲ್ಲಾ ಒಂದೊಂದು ರೀತಿಯ ಪುರಾಣ ಕಥೆಗಳನ್ನು ಹೊಂದಿರುತ್ತದೆ. ಆದರೆ ಈ ಹಬ್ಬದ ಉದ್ದೇಶ ಗ್ರಾಮದೇವತೆ ಎಂಬರ್ಥದಲ್ಲಿ ಆದರೆ ಗ್ರಾಮವನ್ನು ಕಾಪಾಡುವಂತಹದು ಎಂಬ ಉದ್ದೇಶದಿಂದ ಈ ಹಬ್ಬವನ್ನು ಆಚರಿಸಿಕೊಂಡು ಬಂದಿರುತ್ತಾರೆ.

ಆದರೆ ನಾನು ತಿಳಿಸ ಬಯಸುವಂತಹದು ಶ್ರೀ ಪಾಕ ವನದುರ್ಗಿ ದೇವಾಲಯದ ಬಗ್ಗೆ. ಏಕೆಂದರೆ ಇತ್ತೀಚಿಗೆ ಈ ಹಬ್ಬಗಳ ಆಚರಣೆಗಳು ಕಡಿಮೆ ಆಗಿದೆ. ಅನೇಕ ಗ್ರಾಮದ ದೇವಾಲಯಗಳು ಅರ್ಚಕರಿಲ್ಲದೆ ಮುಚ್ಚಲ್ಪಟ್ಟಿದೆ. ಹಾಗೂ ಗ್ರಾಮದ ಗುಂಪುಗಾರಿಕೆ ಮತ್ತು ಈ ದೇವಸ್ಥಾನಗಳನ್ನು ನಡೆಸಿಕೊಂಡು ಹೋಗಲು ಧನ ಸಹಾಯದ ಕೊರತೆಯಿಂದಾಗಿ ಇವುಗಳ ಆಚರಣೆ ಕಡಿಮೆ ಆಗಿದೆ.

ಇಂತಹ ಪರಿಸ್ಥಿತಿಯಲ್ಲಿ ಶ್ರೀ ಪಾಕವನದುರ್ಗಿ ದೇವಸ್ಥಾನವು ವರ್ಷದಿಂದ ವರ್ಷಕ್ಕೆ ಕೊಡಗಿನ ಭಕ್ತಾದಿಗಳನ್ನು ತನ್ನ ಕಡೆಗೆ ತನ್ನದೇ ವಿಶಿಷ್ಟತೆಯಿಂದ ಸೆಳೆಯುತ್ತಿದೆ. ಇದು ಮಡಿಕೇರಿ ತಾಲ್ಲೋಕಿನ ಕೊಳಗದಾಳು ಗ್ರಾಮದ ಉಪಗ್ರಾಮವಾದ ಪಾಕಗ್ರಾಮದಲ್ಲಿದ್ದು. ಚೇರಂಬಾಣೆಯಿಂದ ಕೇವಲ ಆರು ಕಿ.ಮೀ. ಗಳ ದೂರ ಕ್ರಮಿಸಿದರೆ ಈ ದೇವಾಲಯ ಸಿಗುತ್ತದೆ. ಈ ದೇವಾಲಯಕ್ಕೆ ವಾಹನದಲ್ಲಿ ಹೋಗಲು ರಸ್ತೆಯಿದೆ. ಆದರೆ ಇನ್ನು ಡಾಂಭರೀಕರಣ ಹೊಂದಿಲ್ಲ. ಈ ದೇವಸ್ಥಾನವು ವರ್ಷದಿಂದ ವರ್ಷಕ್ಕೆ ಹೆಚ್ಚಿನ ಪ್ರಸಿದ್ಧಿಯನ್ನು ಹೊಂದುವುದರ ಜೊತೆಗೆ ಹೆಚ್ಚಿನ ಭಕ್ತಾದಿಗಳನ್ನು ಹೊಂದುತ್ತಿದೆ. ಹಾಗೇ ಕೊಡಗಿನ ಮೂಲೆ, ಮೂಲೆಯಿಂದ ಅಂದರೆ ಗೋಣಿಕೊಪ್ಪ, ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ ಹಾಗೂ ಸಂಪಾಜೆ ಹೀಗೆ ಅನೇಕ ಕಡೆಗಳಿಂದ ಈ ದೇವಾಲಯಕ್ಕೆ ಭಕ್ತಾದಿಗಳು ಭೇಟಿ ಕೊಡುತ್ತಾರೆ. ಆದರೆ ಇಷ್ಟಕ್ಕೆಲ್ಲಾ ಇಲ್ಲಿರುವ ವಿಶೇಷತೆ ಆದರೂ ಏನು? ಎಂಬುದು ನಿಮ್ಮ ಕುತೂಹಲಕ್ಕೆ ಕಾರಣ ವಿರಬಹುದು.

ಶ್ರೀ ಪಾಕ ವನದುರ್ಗಿ ದೇವಾಲಯವು ಕೇರಳದ ಮಾದರಿಯಲ್ಲಿ ಕಟ್ಟಲಾಗಿದೆ. ಕೇವಲ ಗರ್ಭಗುಡಿಯನ್ನು ಮಾತ್ರ ಹೊಂದಿದ್ದು ವನದುರ್ಗಿ ದೇವತೆಯು ಉದ್ಭವ ಮೂರ್ತಿ ಆಗಿದ್ದು ಕಲ್ಲಿನಿಂದ ಕೂಡಿದ್ದು ದುರ್ಗಿ ತಾಯಿಯ ರೂಪವನ್ನು ಹೊಂದಿದೆ. ಗರ್ಭಗುಡಿ ಎದರುಗಡೆ ಮಂಟಪವಿದೆ. ಹಾಗೇ ಬಲಗಡೆ ಭಕ್ತಾದಿಗಳಿಗೆ ಕುಳಿತುಕೊಳ್ಳುವ ಮಂಟಪ, ಇದರ ಎದುರಿನಲ್ಲಿ ಊಟದ ಹಾಗೂ ಪಂಚಾಯಿತಿ ನಡೆಸುವ ಮಂಟಪವಿದೆ. ದೇವಸ್ಥಾನ ದ್ವಾರದಲ್ಲಿ ಘಂಟೆ ಮಣೆಯ ಸ್ಥಂಭವಿದೆ. ದೇವಸ್ಥಾನದ ಎಡಗಡೆ ಸ್ವಲ್ಪ ಕೆಳಗೆ ಹೊಳೆಗೆ ಹೋಗುವ ಹಾದಿಯಲ್ಲಿ ನಾಗರಕಟ್ಟೆಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಸ್ಥಾನದ ಹೊರಗಡೆ ವಿಶಾಲವಾದ ಊಟದ ಆವರಣವಿದೆ. ಸುತ್ತಲೂ ಬೆಟ್ಟಗುಡ್ಡಗಳ ಕಾಫಿತೋಟಗಳ ಮಧ್ಯದಲ್ಲಿ ಈ ದೇವಸ್ಥಾನ ಇದೆ.

ಈ ಮೂರ್ತಿಯು ಹೇಗೆ ಉದ್ಭವ ಆಯಿತೆಂದು ಸರಿಯಾದ ಮಾಹಿತಿ ತಿಳಿದು ಬಂದಿಲ್ಲ. ಆದರೆ ಅನೇಕ ಕಟ್ಟು ಕಥೆಗಳಿವೆ. ಇಲ್ಲಿಯೇ ಸ್ವಲ್ಪ ದೂರದಲ್ಲಿ ದೇವರ ಬನವಿದ್ದು, ಅಲ್ಲಿಗೆ ಯಾರೂ ಹೋಗುವಂತಿಲ್ಲ, ಕೇವಲ ಕುಡಿಯ ಜನಾಂಗ ಮಾತ್ರ ಹೋಗಬಹುದು. ಅಲ್ಲಿ ಸಣ್ಣದಾದ ಕೆರೆ ಹಾಗೂ ಒಂದು ಗುಡಿಯಿದೆ ಎಂದು ಹೇಳುತ್ತಾರೆ. ಅಲ್ಲಿಂದ ಈ ದೇವತೆ ಬಂದಿರ ಬಹುದೆಂಬ ವದಂತಿಗಳಿವೆ. ಆದರೆ ಇದಕ್ಕೆ ಬಲವಾದ ಕಾರಣಗಳಿಲ್ಲ. ಇಲ್ಲಿನ ಇನ್ನೊಂದು ವಿಶೇಷತೆ ಎಂದರೆ ದೇವಸ್ಥಾನದ ಕೆಲವೇ ದೂರದಲ್ಲಿ ಕಾಲು ದಾರಿಯಲ್ಲಿ ಸಾಗಿದರೆ ಪಾಕ ಹೊಳೆ ಸಿಗುತ್ತದೆ. ಈ ಹೊಳೆಯನ್ನು ನೋಡಿದಾಗ ಕೆಲವೇ ಕ್ಷಣದಲ್ಲಿ ನಮಗೆ ಆಶ್ಚರ್ಯ- ಆನಂದ ಎರಡು ಉಂಟಾಗುವ ದೃಶ್ಯವನ್ನು ನಾವು ಕಾಣಬಹುದು. ಅದೇ ದೇವರ ಮೀನುಗಳು, (ಸ್ಥಳೀಯರು ಈ ಮೀನನ್ನು "ದೇವರ ಮೀನು" ಎಂಬುದಾಗಿ ಸಂಭೋಧಿಸುತ್ತಾರೆ.) ಈ ಹೊಳೆಯಲ್ಲಿ ಅಪಾರ ಸಂಖ್ಯೆಯಲ್ಲಿ ದೇವರ ಮೀನುಗಳಿವೆ. ಇದು ಮನುಜನೊಂದಿಗೆ ವಿಶಿಷ್ಟ ಸಂಬಂಧ, ಭಕ್ತಿ-ಭಾವನೆಯನ್ನು ಉಂಟು ಮಾಡಿ, ಮೈಯಿಗೆ ಒಂದು ಕ್ಷಣಕ್ಕೆ ವಿದ್ಯುತ್ ಸಂಚಾರ ವನ್ನುಂಟು ಮಾಡುತ್ತದೆ. ಮೀನಿಗಾಗಿ ಭಕ್ತಾದಿಗಳು ಅಕ್ಕಿಯನ್ನು ತಂದು ನೀಡುತ್ತಾರೆ, ಯಾವುದೇ ಕಾರಣಕ್ಕೂ ಮೀನುಗಳಿಗೆ ನೋವನ್ನುಂಟುಮಾಡಬಾರದು. ಹಾಗಾದಲ್ಲಿ ಏನಾದರೂ ಕಷ್ಟಗಳು ಉಂಟಾಗುತ್ತದೆ. ಹೊಳೆಯಲ್ಲಿ ಸ್ನಾನ ಮಾಡಿದರೆ ತಮ್ಮ ಪಾಪಗಳು, ಕಷ್ಟಗಳು ನಿವಾರಣೆಯಾಗುತ್ತದೆ. ಹಾಗೇ ಕಿಡು, ಹುಣ್ಣು, ಅನೇಕ ಕಾಯಿಲೆಗಳು ವಾಸಿ ಆಗುತ್ತದೆ ಎಂದು ಭಕ್ತಾದಿಗಳು ತಿಳಿಸುತ್ತಾರೆ. ಹೊಳೆಯ ಬಳಿ ಬಟ್ಟೆ ಬದಲಾಯಿಸಲು ಕೋಣೆಯನ್ನು ಸಹ ನಿರ್ಮಿಸಲಾಗಿದೆ. ಈ ನದಿಯ ಸುತ್ತಲೂ ಪ್ರಕೃತಿಯ ಸೊಬಗು ಮೈನವಿರೇಳಿಸುತ್ತದೆ. ನೀವು ಇಲ್ಲಿಯ ತನಕ ದೇವಾಲಯ ಹಾಗೂ ಹೊಳೆ ಇದರ ಬಗ್ಗೆ ತಿಳಿದುಕೊಂಡಿರಿ, ಇನ್ನು ಇಲ್ಲಿ ಆಚರಿಸುವ ಹಬ್ಬ.

ಶ್ರೀ ಪಾಕವನದುರ್ಗಿ ಹಬ್ಬವನ್ನು ವರ್ಷದ ಕೊನೆಯ ಮಾಸ ಡಿಸೆಂಬರ್‌ನ ಧನುರ್ಮಾಸ ಸಂಕ್ರಮಣದಂದು ಎರಡು ದಿನ ಆಚರಿಸುತ್ತಾರೆ. ಆದರೆ ದೇವರು ಬಲಿ ಬರುವುದು, ಹಾಗೂ ಪ್ರಾಣಿ ಬಲಿ ಅಥವಾ ಇನ್ನಿತರ ಆಚರಣೆ ಇಲ್ಲಿ ಕಾಣ ಬರುವುದಿಲ್ಲ. ಇಲ್ಲಿ ಕೇವಲ ದೇವರ ಭಂಡಾರ ಮನೆಯಿದೆ. (ಮುಕ್ಕಾಟಿ ಮನೆಯವರ ದೊಡ್ಡಮನೆ) ಅಲ್ಲಿಂದ ದೇವಸ್ಥಾನಕ್ಕೆ ತಂದು ನಂತರ ಮಹಾ ಪೂಜೆ ನಡೆಯುತ್ತದೆ. ಹಾಗೂ ಹರಕೆ ಕಾಣಿಕೆ ಒಪ್ಪಿಸುವುದು ಮತ್ತೆ "ಬೊಳ್‌ಕಾಟ್" ಇಲ್ಲಿ ನಡೆಯುತ್ತದೆ. ಆದರೆ ಇಲ್ಲಿಗೆ ಈ ಹರಕೆ ಕಾಣಿಕೆ ಒಪ್ಪಿಸುವುದಕ್ಕಾಗಿ ಸಾವಿರಾರು ಭಕ್ತಾದಿಗಳು ಆಗಮಿಸುತ್ತಾರೆ. ಭಕ್ತಾದಿಗಳು ತಮ್ಮ ಮನಸ್ಸಿನ ಕೋರಿಕೆಗಳನ್ನು ಈಡೇರಿಸಿಕೊಳ್ಳಲು ಈ ದೇವತೆಯನ್ನು ನಂಬಿದ್ದಾರೆ. ಆ ನಂಬಿಕೆಯನ್ನು ಈ ದುರ್ಗಿ ತಾಯಿಯು ನಿಜ ಮಾಡಿದ್ದಾಳೆ. ಈ ಆಧುನಿಕ ವಿಜ್ಞಾನ ಯುಗದಲ್ಲಿ ಸಹ ಜನರನ್ನು ತನ್ನ ಕಡೆಗೆ ಬರ ಮಾಡಿಕೊಳ್ಳುತ್ತಿದ್ದಾಳೆ. ಇದಕ್ಕೆ ಕಾರಣ ಭಕ್ತಾದಿಗಳ ಕಷ್ಟಗಳನ್ನು ಅವರ ಅನೇಕ ಸಮಸ್ಯೆಗಳನ್ನು ನೆಮ್ಮದಿಯನ್ನು ಈ ತಾಯಿಯು ಕರುಣಿಸಿದ್ದಾಳೆ. ಆ ಸತ್ಯದ ನಂಬಿಕೆ ಮೇಲೆ ಅನೇಕ ಭಕ್ತಾದಿಗಳು ಬರುತ್ತಾರೆ. ಬಿಡುವಿನ ದಿನದಲ್ಲಿ ವಿರಳವಾಗಿರುವ ವಾಹನ ಸಂಚಾರವು, ಆ ಒಂದು ದಿವಸ ವಾಹನಗಳ ದಟ್ಟಣೆಯಿಂದ ಧೂಳಿನಿಂದ ಆವೃತವಾಗಿರುತ್ತದೆ. ವಾಹನ ಸಂಚಾರಕ್ಕೆ ಬಹಳ ತೊಂದರೆ ಸಹ ಇಲ್ಲಿ ಉಂಟಾಗುತ್ತದೆ. ವಾಹನ ನಿಲುಗಡೆಗೆ ವ್ಯವಸ್ಥೆಯಿದ್ದರೂ ಸಹ ಹೆಚ್ಚಿನ ವಾಹನಗಳಿಂದ ಸ್ವಲ್ಪ ಕಷ್ಟವಾಗಿದೆ. ಇಲ್ಲಿಗೆ ಹೋಗಿ ಬರಲು ಭಕ್ತಾದಿಗಳಿಗಾಗಿ ಬಾಡಿಗೆ ಜೀಪಿನವರು ವಿಶೇಷವಾಗಿ ವಾಹನ ವ್ಯವಸ್ಥೆ ಕಲ್ಪಿಸಿರುತ್ತಾರೆ. ಭಕ್ತಾದಿಗಳಿಂದ ಅಪಾರವಾದ ಧನ ಸಹಾಯ ವರ್ಷ ವರ್ಷಕ್ಕೆ ಹೆಚ್ಚುತ್ತಾ ಬಂದಿದೆ. ಇದನ್ನು ದೇವಸ್ಥಾನದ ಕಾರ್ಯಗಳಿಗೆ ಬಳಸಿ ಕೊಳ್ಳಲಾಗುತ್ತದೆ. ಈ ದೇವಸ್ಥಾನವನ್ನು ನೋಡಿಕೊಳ್ಳಲು ಗ್ರಾಮದವರೇ ಇರುವ ಒಂದು ಸಮಿತಿಯಿದೆ. ಇಲ್ಲಿ ಹೆಚ್ಚಾಗಿ ಗೌಡ ಜನಾಂಗ ಬಾಂದವರೇ ನೆಲೆಸಿರುತ್ತಾರೆ. ಇಲ್ಲಿನ ಗ್ರಾಮಸ್ಥರೂ ಹಾಗೂ ಇಲ್ಲಿನ ಯುವಕರು ಯಾವುದೇ ತೊಂದರೆ ತೊಡಕುಗಳಿಗೆ ಎಡೆ ಮಾಡಿಕೊಡದೆ ಎಲ್ಲಾ ವ್ಯವಸ್ಥೆಯನ್ನು ತುಂಬಾ ಸುಗಮವಾಗಿ ಇಲ್ಲಿಯವರೆಗೆ ನೆರವೇರಿಸಿಕೊಂಡು ಬಂದಿದ್ದಾರೆ. ಪೂಜೆಯ ನಂತರ ಮಧ್ಯಾಹ್ನದ ಭೋಜನ ವ್ಯವಸ್ಥೆಯನ್ನು ಸಹ ಇಲ್ಲಿ ಕಲ್ಪಿಸಲಾಗಿದೆ. ಆ ದಿನ ಗ್ರಾಮದ ಜನತೆಯು ಲವ, ಲವಿಕೆಯಿಂದ ಕೂಡಿರುತ್ತಾರೆ. ಹಾಗೇ ಬಂಧು ಬಳಗ, ನೆಂಟರಿಷ್ಟರು ಹಾಗೂ ಅನೇಕ ಜನರು ಸೇರಿ ಆ ಒಂದು ಜಾತ್ರೆಗೆ ಹಾಗೂ ದೇವಸ್ಥಾನಕ್ಕೆ ವೈಭವತೆಯನ್ನು ತಂದು ಕೊಟ್ಟಿದ್ದಾರೆ.

ಇದು ಒಂದು ದೇವಸ್ಥಾನದ ಕಿರು ಪರಿಚಯ ಲೇಖನವಾಗಿದೆ. ಹೆಚ್ಚು ಹೆಚ್ಚಾಗಿ ತಿಳಿದುಕೊಳ್ಳಬೇಕಾದರೆ ನೀವೇ ಖುದ್ದಾಗಿ ಜಾತ್ರೆಯ ದಿನದಂದು ಬಂದು ಆ ಒಂದು ಸುಂದರ ನೋಟವನ್ನು ನೋಡಿ ಅನುಭವಿಸಬೇಕು. ಖಂಡಿತವಾಗಿ ಬರುತ್ತೀರಿ ತಾನೇ?

**ಕೂರನ ಆರ್. ಸೌಧೀಶ್ ಕುಮಾರ್, ಚೇರಂಬಾಣೆ**

---

## ಸ್ವಾತಂತ್ರ್ಯ ಶಕ್ತಿ ತಂದೆ ಗಾಂಧಿ

ಸ್ವಾತಂತ್ರ್ಯ ಶಕ್ತಿ ತಂದೆ ಗಾಂಧಿ
ಚರಕ ಹಿಡಿದು ಬಂದೆ ನೀ
ತೋರಿದೆ ಕೃಷ್ಣನ ಚಕ್ರದ ತರಹ
ಚರಕವ ತಿರುಸುತ್ತ ಭರದಿ !
ಸಾರಿದೆ ಪರರಾಕ್ರಮಣವ ಜಗದಿ ಸಾಧಿಸಿ
ಸತತ ಸತ್ಯಾಗ್ರಹದಿ ಸ್ವಾತಂತ್ರ್ಯ ತಂದೆ !
ಭಾರತ ಮಾತೆಯ ಬಂಧನ ಬಿಡಿಸಿ
ಹಾರಿಸಿದೆ ಮುಕ್ತಿಯ ಬಯಸಿ
ಹೇ ರಾಮೆನ್ನುತ ದೇಹವ ಬಿಡುತ
ಸೇರಿದೆ ಸರ್ವರ ಹೃದಯ
ಸ್ವಾತಂತ್ರ ಶಕ್ತಿ ತಂದೆ ಗಾಂಧಿ !

– ಪಬ್ಬಂಡ್ರ ಶರತ್ ಕುಮಾರ್
ಮಕ್ಕಂದೂರು.

---

ಬಾಯಲ್ಲಿ ಬಸಪ್ಪ, ಹೊಟ್ಟೆಯಲ್ಲಿ ವಿಷಪ್ಪ

# ಸೇವೆಯಲ್ಲಿರುವ ಜನಾಂಗದ ಏಕೈಕ ಕರ್ನಲ್ : ಶ್ರೀ ಮೊಟ್ಟೇರ ನಂಜಪ್ಪ ಪುರುಷೋತ್ತಮ.

ಕೊಡಗಿನ ಗೌಡ ಜನಾಂಗದಲ್ಲಿ ಉನ್ನತ ಹುದ್ದೆಯಲ್ಲಿರುವ ಅನೇಕರು ಎಲೆಯ ಮರೆಯ ಕಾಯಿಗಳಂತೆ ಮರೆಯಲ್ಲಿದ್ದಾರೆ. 'Sow a character and you reap a destiny' - ಎನ್ನುವ ಹಾಗೆ 'ಒಳ್ಳೆಯ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡರೆ ಉನ್ನತ ಗುರಿಯನ್ನು ತಲುಪುವುದು ನಿಶ್ಚಿತ.' ಅಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿರುವ ಉನ್ನತಾಧಿಕಾರಿ ಕರ್ನಲ್ ಮೊಟ್ಟೇರ ನಂಜಪ್ಪ ಪುರುಷೋತ್ತಮರವರು.

ಅಸ್ಸಾಂ-ಅರುಣಾಚಲ ಪ್ರದೇಶ, ಚೀನಾ ಗಡಿಗಳಲ್ಲಿ ನಾನೂರು ಜನರ ಬೆಟಾಲಿಯನ್ ಕಮಾಂಡಿಂಗ್ ಆಫೀಸರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಕರ್ನಲ್ ಮೊಟ್ಟೇರ ನಂಜಪ್ಪ ಪುರುಷೋತ್ತಮರವರು ರಜೆ ಕಳೆಯಲು ಬೆಂಗಳೂರಿಗೆ ಬಂದಿದ್ದಾರೆ. ಇವರ ಬಗ್ಗೆ ಅಲ್ಪ ಸ್ವಲ್ಪ ತಿಳಿದುಕೊಂಡಿದ್ದ ನಾವು ಇವರ ಮನೆಗೆ ಹೋದಾಗ ಸ್ವತಃ ಅವರೇ ಬಂದು ನಗುಮುಖದಿಂದ ನಮ್ಮನ್ನು ಒಳಗೆ ಸ್ವಾಗತಿಸಿದರು. ಕೆಲವೇ ನಿಮಿಷಗಳ ಇವರ ಒಡನಾಟ ನಮಗೆ ಒಂದು ಮರೆಯಲಾಗದ ಅನುಭವ. ಕಾರಣ ಅವರ ಸಹೃದಯತೆ, ಸ್ನೇಹಮಯ ನಡವಳಿಕೆ ಹಾಗೂ ಹಾಸ್ಯ ಪ್ರವೃತ್ತಿ. ಇವರ ಚಟುವಟಿಕೆ, ಆಸಕ್ತಿ ಮತ್ತು ಅಭಿಪ್ರಾಯಗಳನ್ನು ಕೇಳಿದವರಿಗೆ - 'ನಿರಂತರ ದುಡಿಮೆಯೇ ಅವರ ಯಶಸ್ಸು ಮತ್ತು ಹಿರಿಮೆಯ ಗುಟ್ಟು' ಎಂದು ಮನವರಿಕೆಯಾಗುವುದು. **ಕರ್ನಲ್ ಎಂ. ಎನ್. ಪುರುಷೋತ್ತಮರ ಕಿರು ಪರಿಚಯ ಹೀಗಿದೆ :**

ಕರ್ನಲ್ ಪುರುಷೋತ್ತಮ್‌ರವರು ದಿ. ಮೊಟ್ಟೇರ ಎಸ್. ನಂಜಪ್ಪ (ಹೆರವನಾಡು ಗ್ರಾಮ) ಮತ್ತು ಅಕ್ಕಯ್ಯ ದಂಪತಿಗಳ ಎರಡನೇ ಪುತ್ರ. ದಿ. ನಂಜಪ್ಪನವರು ಎರಡನೇ ಮಹಾಯುದ್ಧದ ಸಮಯದಲ್ಲಿ ಹವಾಲ್ದಾರ್‌ರಾಗಿ ಕಾಂಗೋದವರೆಗೆ ಹೋಗಿ ಬಂದವರು.

**ವ್ಯಾಸಂಗ :**

**1967ರವರೆಗೆ :** ಗುಲಾಬಿ ಪ್ರೈಮರಿ ಶಾಲೆ ಬೆಂಗಳೂರು, 3ನೇ ತರಗತಿಯಿಂದ ನೇರವಾಗಿ 5ನೇ ತರಗತಿಗೆ ಡಬಲ್ ಪ್ರಮೋಷನ್ ಪಡೆದರು.

**1967-1974 :** ಬೆಂಗಳೂರು ಮಿಲಿಟರಿ ಶಾಲೆ ಸೇರಿ XIನೇ ತರಗತಿವರೆಗೆ ಓದಿದರು. ನಂತರ, ಕೇಂದ್ರ ಸರ್ಕಾರದ UPSC ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಪುಣೆಯ 'National Defence Academy (NDA) ತರಬೇತಿಗೆ ಅರ್ಹತೆ ಪಡೆದು ಕಮೀಷನ್ಡ್ ಆಫೀಸರ್ ಪದವಿಗೇರಿದರು.

ಚಿಕ್ಕಂದಿನಿಂದಲೇ ಫುಟ್‌ಬಾಲ್, ಕ್ರಿಕೆಟ್, ಹಾಕಿ ಹಾಗೂ ಬಾಕ್ಸಿಂಗ್‌ನಲ್ಲಿ ಪ್ರವೀಣರಾದ ಇವರು ಇವುಗಳಲ್ಲಿ ಅನೇಕ ಬಹುಮಾನಗಳನ್ನು ಪಡೆದಿರುತ್ತಾರೆ. XIನೇ ತರಗತಿಯಲ್ಲಿ ಶಾಲೆಯ ಕ್ಯಾಪ್ಟನ್ ಕೂಡ ಆಗಿದ್ದರು.

**1974-1977 :** ದೆಹಲಿ ವಿಶ್ವವಿದ್ಯಾನಿಲಯದಿಂದ ಬಿ.ಎಸ್ಸಿ ಪಧವಿ ಪಡೆದರು.

**1977-1978 :** Indian Military Academy (IMA) ಸೇರಿ ಮಿಲಿಟರಿ ಆಫೀಸರ್ ಆದರು. ನಂತರ ಆರ್ಟಿಲರಿ ವಿಭಾಗವನ್ನು ಸೇರಿಕೊಂಡು ಎರಡನೇ ಲೆಫ್ಟಿನೆಂಟ್ ಪದವಿ ಪಡೆದುಕೊಂಡರು.

**1978-1990 :** ಸೇನೆಯ ಎಲ್ಲಾ ಕೋರ್ಸ್‌ಗಳನ್ನು ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಬಡ್ತಿ ಪಡೆದರು.

* Young Officers Course - Silver Gun award ಪಡೆದರು.

* Advance Gunnery Course, Long Gunnery Course, Artillery Staff'Officers Course - ದಿಯೋಲಾಲಿ, ನಾಸಿಕ್ Artillery School 'A' ಗ್ರೇಡ್ ಪಡೆದರು

* Artillery Technology Course, IAT, Pune (1987)

ಇದೇ ಸಮಯದಲ್ಲಿ MISSILE PRITHVI - PINAKAಕ್ಕಾಗಿ ಸೇನೆಯ ಪ್ರತಿನಿಧಿಯಾಗಿ Col ಪುರುಷೋತ್ತಮರನ್ನು ARDE, ಪುಣೆಗೆ ಕಳುಹಿಲಾಯಿತು.

**1991 :** Wellington (Ooty) ಯಿಂದ ಗೌರವಾನ್ವಿತ "Staff Colege" ತರಬೇತಿ

**1992 :** ಕಾರ್ಯನಿಮಿತ್ತ 2 ವರ್ಷಗಳ ಕಾಲ ಕಾಶ್ಮೀರಕ್ಕೆ ತೆರಳಿದರು.

**1996 :** Lt. Colonel ಬಡ್ತಿ ಪಡೆದು ಪಶ್ಚಿಮ ಬಂಗಾಳಕ್ಕೆ ತೆರಳಿದರು.

**1997 :** ಕೇಂದ್ರ ಸರ್ಕಾರದ Ministry of External Affairs ವತಿಯಿಂದ ಆಫ್ರಿಕಾದ Zambia ದಲ್ಲಿನ Major ಹುದ್ದೆಯ ಆಫೀಸರ್‌ಗಳ ತರಬೇತಿದಾರರಾಗಿ ಆಯ್ಕೆಯಾದ ಕೇವಲ 4 ಉನ್ನತಾಧಿಕಾರಿಗಳಲ್ಲಿ ಒಬ್ಬರಾಗಿ 2ವರ್ಷಗಳ ಕಾಲ Zambiaಕ್ಕೆ ತೆರಳಿದರು.

**1999 :** COLONEL ಹುದ್ದೆಗೆ ಬಡ್ತಿ ಪಡೆದು ಭಾರತಕ್ಕೆ ಮರಳಿದರು. ಹಾಲಿ ಇವರು 22 fiel Regiment (Artillery) ಯಲ್ಲಿ Commanding Officer ಪದವಿ ಪಡೆದುಕೊಂಡು Assam Arunachal pradesh,- Chinaದ ದಟ್ಟಡವಿಗಳಿಂದಾವೃತವಾದ ಗಡಿಗಳಲ್ಲಿ ULFA ಚಟುವಟಿಕೆಗಳನ್ನು ಮಟ್ಟಹಾಕುವ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಕುಟುಂಬದ ಪರಿಚಯ :**

Col. ಪುರುಷೋತ್ತಮರ ಪತ್ನಿ ಜೈನೀರ ಮಂದಣ್ಣ ನಿರಂಜ್ಯೋತಿ. ಈ ದಂಪತಿಗಳಿಗೆ ಇಬ್ಬರು ಮಕ್ಕಳು. 15 ವರ್ಷದ ಪ್ರೀತಮ್ [ಬೆಂಗಳೂರಿನ Military Schoolನಲ್ಲಿ 10ನೇ ತರಗತಿಯಲ್ಲಿದ್ದಾನೆ] ಹಾಗೂ ಮುದ್ದಿನ ಮಗಳು 12 ವರ್ಷದ ಪ್ರವೀತ, (Cathedral ಶಾಲೆಯಲ್ಲಿ 7ನೇ ತರಗತಿಯಲ್ಲಿದ್ದಾಳೆ).

Col. M.N. ಪುರುಷೋತ್ತಮರಿಗೆ 3 ಜನ ಸಹೋದರರು. ಶ್ರೀ ಎಂ.ಎನ್ ಸುಬ್ಬಯ್ಯನರು Ex-Major, ಶ್ರೀ ಎಂ.ಎನ್. ಶ್ರೀನಿವಾಸ್‌ರವರು ಬೆಂಗಳೂರಿನ Canara Bankನಲ್ಲಿ ಅಧಿಕಾರಿಯಾಗಿದ್ದಾರೆ ಹಾಗೂ ಶ್ರೀ ಎಂ.ಎನ್. ವಾಸುದೇವರವರು Major ಹುದ್ದೆಯಲ್ಲಿದ್ದಾರೆ. ಇವರ ಇಬ್ಬರು ಸಹೋದರಿಯರಲ್ಲಿ ಒಬ್ಬರು ಶ್ರೀಮತಿ ಡಾ||ಬೋಜಮ್ಮ, MBBS, MD, DNB, ಇವರು ಬೆಂಗಳೂರಿನಲ್ಲಿ ಸರ್ಜನ್, ಫಿಜಿಷಿಯನ್ ಮತ್ತು ಹೃದ್ರೋಗ ತಜ್ಞರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಆದರ್ಶ ವೈದ್ಯರಾದ ಈಕೆಯ ಪತಿ ಶ್ರೀಮಾನ್ ಬೈತಡ್ಕ ಅಯ್ಯಪ್ಪ ಜೋಯಪ್ಪ, D.S.P. ಬೆಂಗಳೂರು, ಇವರು 1993ರಲ್ಲಿ ಭಾರತ ಸರ್ಕಾರದ ರಾಷ್ಟ್ರಪತಿಯವರ ಚಿನ್ನದ ಪೋಲೀಸ್ ಪದಕ ಪಡೆದುಕೊಂಡಿರುವ ಅಧಿಕಾರಿ. ಕರ್ನಲ್‌ರ 2ನೇ ಸಹೋದರಿ ಶ್ರೀಮತಿ ದಂಬೆಕೋಡಿ ಹರೀಶ್ ವೀಣಾರವರು.

ರಜೆಗಾಗಿ ಊರಿಗೆ ಬಂದಾಗಲೂ ತನ್ನ ತಂದೆ ತನ್ನನ್ನು ನಸುಕಿನಲ್ಲೇ ಎಬ್ಬಿಸಿ ಜಾಗಿಂಗ್‌ಗೆ ಓಡಿಸುತ್ತಿದ್ದರು ಎಂದು ಕರ್ನಲ್ ಪುರುಷೋತ್ತಮ ನಗುತ್ತಾ ನೆನೆಸಿಕೊಳ್ಳುತ್ತಾರೆ. ಸಂಪೂರ್ಣ ಕುಟುಂಬದವರೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ದೇಶ ಸೇವೆಯಲ್ಲಿ ನಿರತರಾಗಿರುವುದರಿಂದ ಇವರಿಗೆ ಶಿಸ್ತು ರಕ್ತಗತವಾಗಿ ಮೈಗೂಡಿ ಬಂದಿದೆ.

**ನಾವು ಕೇಳಿದ ಹಲವು ಪ್ರಶ್ನೆಗಳಿಗೆ ಕರ್ನಲ್‌ರ ಉತ್ತರ :**

1) ನಿರಂತರವಾಗಿ ದೇಶದ ಗಡಿಕಾಯುವ ನಿಮಗೆ ನಮ್ಮ ಭಾಷೆ, ನಮ್ಮ ಜನ, ನಮ್ಮ ಹಬ್ಬಗಳು ನೆನಪಾಗುವುದಿಲ್ಲವೆ?

ಖಂಡಿತ ಆಗುತ್ತದೆ. ಆದರೆ ಆ ನ್ಯೂನ್ಯತೆಯನ್ನು ತುಂಬಿ ಕೊಡಲು Army ಯಲ್ಲಿ ಹತ್ತು ಹಲವಾರು ಚಟುವಟಿಕೆಗಳು ನಡೆಯುತ್ತಿರುತ್ತವೆ. ದೇಶದ ನಾನಾ ಮೂಲೆಯ ನಾನಾ ಜಾತಿಯ ಜನರ ಹಬ್ಬಹರಿದಿನಗಳನ್ನು ಎಲ್ಲರೂ ಸೇರಿ ಆಚರಿಸುತ್ತೇವೆ. ಪ್ರತೀ batallionನಲ್ಲೂ ಒಬ್ಬ ಮುಲ್ಲಾ, ಒಬ್ಬ ಪಾದ್ರಿ, ಒಬ್ಬ ಗ್ಯಾನ್‌ಜೀ ಹಾಗೂ ಒಬ್ಬ ಬ್ರಾಹ್ಮಣರನ್ನು ಈ ಕೆಲಸಕ್ಕಾಗಿ ನೇಮಿಸಿರುತ್ತಾರೆ. ಇವರು ಎಲ್ಲಾ ಹಬ್ಬಹರಿದಿನಗಳನ್ನು ತಪ್ಪದೇ ಆಚರಿಸಿ ನಮ್ಮಲ್ಲಿ ಹೃದಯದಲ್ಲಿನ ಭಕ್ತಿಭಾವವನ್ನು ಜೀವಂತವಾಗಿರಿಸುತ್ತಾರೆ.

2) ಮಿಲಿಟರಿ ಜೀವನದ ರೋಮಾಂಚನಕಾರಿ ಘಟನೆಗಳು ಬಗ್ಗೆ ಹೇಳಿ.

1979 CISFನವರು ತಮಗೆ ಹೆಚ್ಚಿಗೆ ಪಗಾರ್ (ವೇತನ) ಕೊಡಬೇಕೆಂದು ಭಾರತಾದ್ಯಂತ ಮುಷ್ಕರ ಹೂಡಿದರು. ಈ ಸಮಯದಲ್ಲಿ ಬಿಹಾರ್‌ನ ರಾಂಚಿಯ Bokaro Steel plant ಕಾರ್ಖಾನೆಯ CISF ಪಡೆಯೊಂದಿಗೆ ಕೆಲವು ತಿಳಿಗೇಡಿ ನಕ್ಸಲೀಯರು (naxallites) ಸೇರಿಕೊಂಡು ವಿಶಾನಿಲ ತುಂಬಿದ ದೊಡ್ಡ Tank ಒಂದನ್ನು ಸಿಡಿಸುವ ಬೆದರಿಕೆ ಹಾಕಿದರು. ಆ ಸಮಯದಲ್ಲಿ ನಮ್ಮ 600 ಜನರ battallianಗೆ ಕರೆ ನೀಡಲಾಯಿತು. ಹಲವು ನಿಮಿಷಗಳ ಕಾಲ ಮಾತುಕತೆ ವಿಫಲವಾದಾಗ ನಮಗೆ 'Firing order ನೀಡಲಾಯಿತು. ಆ ಕ್ಷಣದಲ್ಲಿ ಎರಡೂ ಕಡೆಯಿಂದ ಗುಂಡಿನ ಸುರಿಮಳೆಯಾಯಿತು. ನನ್ನ ಎರಡೂ ಭುಜಗಳ ಮೇಲಿಂದ ಮಿಂಚಿ ಹಾರುತ್ತಿದ ಬುಲೆಟ್‌ಗಳ ದಾಳಿ ಈಗಲೂ ನನ್ನ ಕಣ್ಮುಂದೆ ಇದ್ದಂತಿದೆ. ನನ್ನ ಮಿಲಿಟರಿ ಜೀವನದಲ್ಲಿ ಮೊದಲ ಬಾರಿ ಗುಂಡಿಗೆದೆಗೊಟ್ಟು ನಿಂತ ಘಟನೆಯಿದಾದ್ದರಿಂದ ಅದನ್ನು ಮರೆಯಲಾರೆ. ನನ್ನ ಜೊತೆಗಿದ್ದ ಸಿಪಾಯಿಯೊಬ್ಬನ ಬೂಟನ್ನು ಸೀಳಿದ ಗುಂಡೊಂದು ಪಾದಕ್ಕೆ ಘಾಸಿ ಮಾಡಿದಾಗ ಆತ ಅರಚುತ್ತಾ ನೆಲಕ್ಕೊರಗಿದ. 3 ಘಂಟೆಗಳ ದಾಳಿಯನಂತರ ನಾವು ಎರಡು Rocket Laungcher ಗಳನ್ನು ಪ್ರಯೋಗಿಸಿ ನಕ್ಸಲೀಯರ 26 ಜನರನ್ನು ಸಿಡಿಸಿದ ನಂತರ ಅವರು ಶರಣಾಗತರಾಗಿ ಮರುದಿನವೇ ಪರಿಸ್ಥಿತಿ ಹತೋಟಿಗೆ ಬಂದಿತು.

3) ರಾಜ್ಯದಲ್ಲಿ ತಲೆದೋರಿರುವ ವೀರಪ್ಪನ್ ಕಾರ್ಯಾಚರಣೆ ಬಗ್ಗೆ ನಿಮ್ಮ ಅನಿಸಿಕೆ ಏನು? (ಜೋರಾಗಿ ನಗು)

ನಾವು ಗಡಿಯಂಚಿನಲ್ಲಿದ್ದಾಗಿಯೂ ವೀರಪ್ಪನ್ ಚಟುವಟಿಕೆಗಳ ಬಗ್ಗೆ ಆಗಾಗ್ಗೆ ಚರ್ಚೆ ನಡೆಸುತ್ತಿದ್ದೆವು. ನಾವು ದೇಶದ ಸಿಪಾಯಿಗಳು. ರಾಜ್ಯಗಳ ಗಡಿಗಳ ಪಾಬಂದಿ ನಮಗಿಲ್ಲ. ಎಂದೋ ಕಟಕಟೆ ಯನ್ನೆದುರಿಸ ಬೇಕಾದ ಕಾಡುಗಳ್ಳ ರಾಜಕೀಯ ಕೈವಾಡದಿಂದಾಗಿ ಇನ್ನೂ ಮೆರೆಯುತ್ತಿರುವುದು ನಾಚಿಕೆಗೇಡು ಸಂಗತಿ.

4) ನಿಮಗೆ ನಿಮ್ಮ ಸಾಧನೆ ತೃಪ್ತಿ ತಂದಿದೆಯೆ?

ಮಿಲಿಟರಿ ಅಲ್ಲದೆ ಬೇರೆಯಾವುದಾದರು Civil ಉದ್ಯೋಗದಲ್ಲಿದ್ದಿದ್ದರೆ ಖಂಡಿತ ನನಗೆ ಜೀವನದಲ್ಲಿ ಅತೃಪ್ತಿ ಇರುತ್ತಿತ್ತು. ಸೈನ್ಯಕ್ಕೆ ಸೇರಿ ನಾನು ದೇಶ ವಿದೇಶ ಸುತ್ತಿದ್ದೇನೆ. ಸ್ವತಂತ್ರವಾಗಿದ್ದನೆ. ಇನ್ನು 3-4 ವರ್ಷಗಳಲ್ಲಿ Brigadier ಹುದ್ದೆಗೆ ಬಡ್ತಿ ಹೊಂದುವ ಅವಕಾಶ ನನಗಿದೆ. ಈ ಜೀವನ ನನಗೆ ಸಂಪೂರ್ಣ ತೃಪ್ತಿ ನೀಡಿದೆ.

5) ಇಂದಿನ ಯುವಕರಿಗೆ ನಿಮ್ಮ ಸಂದೇಶವೇನು?

**ನೀವು ಯಾವುದೇ ಕ್ಷೇತ್ರದಲ್ಲಿರಲಿ ಸತತ ಪ್ರಯತ್ನ ಮಾಡಿ- ಫಲಾಪೇಕ್ಷೆ ಬೇಡ. ಕಷ್ಟಕ್ಕೆ ತಕ್ಕ ಪ್ರತಿಫಲ ಸಿಗುವುದು ಖಂಡಿತ Put sincere effort at the right phase of your life - results are bound to come. Be true to yourself and do the best.**

ಎರಡನೆಯದಾಗಿ ನೀವು ಎಂತಹ ಉನ್ನತ ಹುದ್ದೆಯಲ್ಲಿರಲಿ ego (ಅಹಂಕಾರ) ಬೇಡ. ಪ್ರತಿಯೊಬ್ಬ ಕಷ್ಟಜೀವಿಯನ್ನೂ ಸಮಾನತೆಯಿಂದ ಕಾಣಿರಿ.

ಪುರುಷರಲ್ಲಿ ಉತ್ತಮನಾಗು ಎಂದು ಆಶೀರ್ವದಿಸಿ ಇವರ ತಾಯಿ ಪುರುಷೋತ್ತಮ ಎಂದು ನಾಮಕರಣ ಮಾಡಿದರಂತೆ. ಇವರಿಗೆ ಹೆತ್ತ ತಾಯಿಯ ಜೊತೆಗೆ ಭಾರತಮಾತೆ ಇಬ್ಬರ ಆಶೀರ್ವಾದವೂ ಸದಾ ಇದೆ. ಗೌಡ ಜನಾಂಗದ ಏಕೈಕ Serving Colonel ಇವರು. ನಮ್ಮ ಮಣ್ಣಿನ ಮಗ ಎಂಬುದು ನಮಗೆಲ್ಲಾ ಹೆಮ್ಮೆಯ ಸಂಗತಿ. ಇವರು ಹಂತ ಹಂತವಾಗಿ ಯಶಸ್ಸಿನ ಮೆಟ್ಟಲೇರಿ ಹೆಚ್ಚಿನ ಕೀರ್ತಿಯನ್ನು ಗಳಿಸಿ, ರಕ್ಷಣಾ ಪಡೆಯಲ್ಲಿ ಅತ್ಯುನ್ನತ ಪದವಿ ಪಡೆದು ಜನಾಂಗದ ಕೀರ್ತಿ ಪತಾಕೆಯು ದಶ ದಿಕ್ಕಿಗೂ ಹಬ್ಬುವಂತಾಗಲಿ ಎಂದು ಜನಾಂಗದ ಪರವಾಗಿ ಕೊಡಗು ಸಂಗಾತಿ ಶುಭವನ್ನು ಬಯಸುತ್ತದೆ.

ಬರಹ : ಎಡಿಕೇರಿ ಸುಧರ್ಶನ್

**ಸಂದರ್ಶನ : ಗೋವಿಂದಮ್ಮನ ಪ್ರವೀಣ್ ಕುಮಾರ್, ಬೆಂಗಳೂರು**

---




✦ ಕೌಂಡಿನ್ಯ

**ಧಾರವಾಹಿ -40**

ಮೂರು ಹುತ್ತಗಳ ಸಂಗಮ !

ನೆಲದ ಮೇಲೆ ಪ್ರಸನ್ನ ಪಜ್ಞೆ ಇಲ್ಲದೆ ಬಿದ್ದಿದ್ದಾನೆ. ಈಗ ಅವನ ಪಕ್ಕದಲ್ಲಿ ಮಂಡಿಯೂರಿ ಪೂಜಾರಿ ಯುವಕ ಕುಳಿತು ಕೊಂಡಿದ್ದಾನೆ.

ಮುಖದಲ್ಲಿ ಪೈಶಾಚಿಕ ಆನಂದ !

ತನ್ನ ಸೊಂಟದಲ್ಲಿ ಸಿಗಿಸಿ ಕೊಂಡಿದ್ದ ಸ್ಟೀಲ್ ಡಬ್ಬಿಯನ್ನು ಹೊರ ತೆಗೆದನು. ದೊಡ್ಡ ಸ್ಟೀಲ್ ಡಬ್ಬಿ !

ಅದರ ಮುಚ್ಚಲ ತೆರೆದನು. ಶ್ರೀಗಂಧವನ್ನು ನೀರು - ನೀರಾಗಿ ತೇಯ್ದು ಡಬ್ಬಿಯಲ್ಲಿ ಸಂಗ್ರಹಿಸಲಾಗಿತ್ತು ! ಅದನ್ನು ಈಗ ನೆಲದ ಮೇಲೆ ಬಿದ್ದಿರುವ ಪ್ರಸನ್ನನ ಮೇಲೆ ಸಿಂಪಡಿಸಿದರೆ ಹಾವುಗಳು ಬಂದು ಸುತ್ತಿಕೊಳ್ಳುತ್ತದೆ !

ಅಲ್ಲದೆ ಸೇಡಿನ ಕತೆ ಮುಗಿಯುತ್ತದೆ !

ಇನ್ನೇನು ಶ್ರೀಗಂಧ ಚೆಲ್ಲಬೇಕು ! ಹಿಂದಿನಿಂದ ನುಗ್ಗಿ ಬಂದ ಶ್ರೀಕಂಠ ಗಬಕ್ಕನೆ ಕೈ ಹಿಡಿದುಕೊಂಡನು.

ರೇವತಿ ಕೂಡಲೇ ನೆಲದ ಮೇಲೆ ಬಿದ್ದಿದ್ದ ಮುಚ್ಚಲವನ್ನು ತೆಗೆದು ಬಿಗಿಯಾಗಿ ಹಾಕಿದಳು !

ಗಾಳಿಯಲ್ಲಿ ಬೆರೆತಿತ್ತು ಪರಿಮಳ !

ಹುತ್ತದಿಂದ ಹಾವುಗಳು ಹೊರ ಇಣುಕಿ ಹೆಡೆಯನ್ನು ಆಡಿಸುತ್ತಿದೆ.

ರೇವತಿ ಸುತ್ತಲೂ ನೋಡಿದಳು. ಮಾವಿನ ತೋಪಿನ ಹತ್ತಿರದ ಬಾವಿ ಕಂಡಿತು !

ಡಬ್ಬಿಯನ್ನು ಆದರಲ್ಲಿ ಎಸೆದಳು !

ಬಾವಿಯ ನೀರಿನಲ್ಲಿ ಸರ್ಪವನ್ನು ಆಕರ್ಷಿಸುವ ಶ್ರೀಗಂಧ ಬೆರೆತು ಹೋಯಿತು.

ಹಾವುಗಳು ಬಾವಿಯತ್ತ ಹರಿಯುತ್ತಿವೆ !

ಶ್ರೀಕಂಠ ಕೋಪ, ಆವೇಶದಿಂದ ಪೂಜಾರಿಯನ್ನು ಅಡ್ಡಾದಿಡ್ಡಿ ಹೊಡೆಯುತ್ತಿದ್ದಾನೆ.

ರೇವತಿ ಅವನನ್ನು ತಡೆದಳು. ನಂತರ ಪೂಜಾರಿಯ ಕಡೆ ತಿರುಗಿ "ನನಗೆ ಸರ್ಪ ಗಂಧದ ರಹಸ್ಯ ಗೊತ್ತಾಗಿದೆ, ನೀನ್ಯಾರು? ನೀನ್ಯಾಕೆ ಕೊಲೆಗಳನ್ನು ಮಾಡಿದೆ ಅಂತ ಹೇಳು."

ಪೂಜಾರಿ ತಲೆ ಎತ್ತಿದನು !

* * *

ಪೂಜಾರಿ ಯುವಕನ ಹೆಸರು ನರೇಂದ್ರ ನಾಯಕ. ಅವನು ಪಾಳೇಯಗಾರರ ವಂಶದವನು.

ನಗರದಲ್ಲಿ ಓದುತ್ತಿದ್ದನು.

ಪೂಜಾರಿ ಯುವಕನಿಗೆ ತನ್ನ ಸಂಸಾರದಲ್ಲಿ ನಡೆದ ಮಹಾ ದುರಂತ ಊರಿನವರಿಂದ ಗೊತ್ತಾಯಿತು.

ತಮ್ಮ ಬಂಗಲೆ ಹಾಗೂ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂಪಿಗೆ ಪುರದ ಎಡತೊರೆ ಸಂಸಾರದವರು ದುರಾಸೆಯಿಂದ ಮಹಾ ದ್ರೋಹ ಮಾಡಿದ್ದರು.

ನರೇಂದ್ರನಾಯಕನ ಹಿರಿಯರು ನಿಧಿಯ ಬಗ್ಗೆ ಮಾತಾಡುತ್ತಿದ್ದಾಗ ಅದನ್ನು ಎಡತೊರೆ ಸಹೋದರರು ಕೇಳಿಸಿ ಕೊಂಡಿದ್ದರು. ದುರಾಸೆ ಪ್ರಚೋದಿಸಿತು.

ಅವರೆಲ್ಲಾ ಒಂದು ದಿನ ರಾತ್ರಿ ರಹಸ್ಯವಾಗಿ ಪಾಳೆಯಗಾರರ ವಂಶದ ಹತ್ತು ಮಂದಿ ಸದಸ್ಯರನ್ನು ಕರುಣೆಯಿಲ್ಲದೆ ಕೊಂದಿದ್ದರು.

ರಕ್ತದ ಓಕುಳಿ ಆಡಿದ್ದರು !

ನಿಧಿ ನಕ್ಷೆ ಅಪಹರಿಸಿದ್ದರು.

ಎಡತೊರೆಯ ಸಹೋದರರು ನಿಧಿ ಅಪಹರಿಸಿಕೊಂಡು ಹತ್ತು ಮೈಲಿಗಳು ದೂರದಲ್ಲಿದ್ದ ಸಂಪಿಗೆ ಪುರಕ್ಕೆ ಹೋದರೆಂಬ ಸಂಗತಿ ಗೊತ್ತಾಗಿತ್ತು.

ನಗರದಿಂದ ಹಿಂತಿರುಗಿದ್ದ ನರೇಂದ್ರ ನಾಯಕ ತನ್ನವರ ಹೆಣಗಳ ಮೇಲೆ ಬಿದ್ದು ಗೋಳಾಡಿದ್ದನು.

ಆಗ ಅವನನ್ನು ಸಂತೈಸಿದ್ದು ತುಂಬಾ ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದ ಮುದುಕ !

ದಿನಗಳು ಕಳೆದಂತೆ ಸೇಡು ತೀರಿಸಿ ಕೊಳ್ಳಬೇಕೆಂಬ ಹಂಬಲ, ಆತುರ ಜಾಸ್ತಿಯಾಯಿತು.

ಈ ಮುದುಕ ದಾರಿ ತೋರಿಸಿದ.

ತನ್ನ ಹತ್ತಿರ ಇದ್ದ "ನವರಾಗ ಮಂಜರಿ" ಎಂಬ ಹಳೆಯ ಕಾಲದ ಗ್ರಂಥ ತೋರಿಸಿದನು.

ಒಂಬತ್ತು ರೀತಿಯ ಸಸ್ಯಗಳು !

ಕದಂಬ, ಕೇದಿಗೆ, ಪುನ್ನಾಗ, ಜಾಬಲಿ ಅರೆತುಂಗ ಮುಂತಾದ ಸಸ್ಯಗಳು !

ಇದು ಉತ್ತರ ಭಾರತದಲ್ಲಿರುವ ಕೇದಿಗೆ ವನದಲ್ಲಿ ಸಿಗುತ್ತದೆ.

ಈ ಸಸ್ಯಗಳ ಎಲೆಯನ್ನು ಸೇರಿಸಿ ಶ್ರೀಗಂಧದ ಜೊತೆ ಅರೆದರೆ ಸರ್ಪಗಂಧ, ಬರುತ್ತದೆ !

ಇದರ ವಾಸನೆಗೆ ಹಾವುಗಳು ಬರುತ್ತದೆ ! ವಾಸನೆ ಇರುವ ತನಕ ಸುತ್ತಿ ಕೊಂಡಿರುತ್ತದೆ.

ಊರನ್ನು ಬಿಟ್ಟು ಮುದುಕನೊಂದಿಗೆ ನರೇಂದ್ರ ಉತ್ತರ ಭಾರತದ ಕಾಡಿಗೆ ಹೋದನು.

ಈ ಸಸ್ಯಗಳ ಎಲೆಗಳನ್ನು ಸಂಪಾದಿಸಿ, ಗಾಳಿ ಸೋಕದಂತೆ ಪ್ಲಾಸ್ಟಿಕ್ ಕವರ್‌ನಲ್ಲಿ

**20ನೇ ಪುಟಕ್ಕೆ**

ಇಲ್ಲಿಯವರೆಗೆ.........

ರೇವತಿಗೆ ಸರ್ಪಗಂಧದ ರಹಸ್ಯ ತಿಳಿಯುತ್ತದೆ. ಅವಳು ಪ್ರಸನ್ನನ ಪ್ರಾಣ ಉಳಿಸಲು ಬಂಗಲೆಗೆ ಬರುತ್ತಾಳೆ. ಪೂಜಾರಿ ಯುವಕ ಪ್ರಸನ್ನನಿಗೆ ಫೋನ್ ಮೂಲಕ ಸುಳ್ಳು ಹೇಳಿ ಹುತ್ತದ ಹತ್ತಿರ ಕರೆಸಿಕೊಂಡಿರುತ್ತಾನೆ.

ಮುಂದೆ ಓದಿ.........

ನಾಳೆ ನಾಳೆ ಹೇಳಿದರೆ ಕೆಲಸ ಆಗದು

# 17-9-2000 ರಲ್ಲಿ ಕೊಡಗು ಗೌಡ ವಿದ್ಯಾಸಂಘದ ವತಿಯಿಂದ ಯುವ ಪ್ರತಿಭೆಗಳಿಗೆ ನೀಡಿದ ಪ್ರತಿಭಾ ಪುರಸ್ಕಾರ

| | | 7ನೇ ತರಗತಿ | ಕನಿಷ್ಠ % | ಗರಿಷ್ಠ % | ಮೊತ್ತ |
|---|---|---|---|---|---|
| ಶೃತಿ D/o ಪೂಜಾರೀರ ಉತ್ತಪ್ಪ | | I | 600/578 | 96.33 | 1000.00 |
| ತೇಜಸ್ವಿನಿ D/o ನಿಡ್ಯಮಲೆ ಅನುರಾಧ | | II | 600/571 | 95.16 | 800.00 |
| ಮಿತ D/o ಮಂದ್ರೀರ ಶಿವಪ್ಪ | | III | 600/568 | 94.66 | 700.00 |
| ಗಾನ D/o ಕಾಳೇರಮ್ಮನ ವಸಂತಕುಮಾರ್ | | IV | 600/567 | 94.50 | 600.00 |
| ತ್ರಿಶೂಲ್ S/o ಪಾರೆ ಮಜಲು ಗೋಪಾಲ | | V | 600/561 | 93.50 | 500.00 |
| ಪೂಜಾ D/o ಕುಯ್ಯಮುಡಿ ಚೆಂಗಪ್ಪ | S.S.L.C. | I | 625/569 | 91.04 | 1200.00 |
| ಜಯಶ್ರೀ D/o ಹೋಸೂರು ಸೀತಾರಾಮ | | II | 625/567 | 90.72 | 1000.00 |
| ಮಾನಸ D/o ಸೂದನ ಪೂಣಚ್ಚ | | III | 625/566 | 90.56 | 800.00 |
| ಸುದೇಶ್ S/o ಕಾಯರ್ ಜಯಪ್ರಸಾದ್ | | III | 625/566 | 90.56 | 800.00 |
| ದೇವಿಪ್ರಸಾದ್ S/o ಬಾಳಾಡಿ ಪದ್ಮನಾಭ | | IV | 625/553 | 88.48 | 700.00 |
| ಪೂಜಾ D/o ಕಾಳೇರಮ್ಮನ ವಸಂತಕುಮಾರ್ | | V | 625/548 | 87.68 | 600.00 |
| ಮೋಹನ್‌ಕುಮಾರ್ S/o ಚೀಯಪ್ಪನ ಮೋಟಯ್ಯ | PUC | I | 600/528 | 88.00 | 1200.00 |
| ಲೋಹಿತ್ S/o ಬೈತಡ್ಕ ಜೋಯಪ್ಪ | | II | 600/511 | 85.12 | 1000.00 |
| ಚಿತ್ರಾ D/o ಸಬ್ಬಂಡ್ರ ಕುಶಾಲಪ್ಪ | | III | 600/487 | 81.16 | 800.00 |
| ಧವನ್ S/o ಕುಯ್ಯಮುಡಿ ರಾಮಪ್ಪ | | IV | 600/474 | 79.00 | 700.00 |
| ದಿವ್ಯD/o ಕಲ್ಲಂಬಿ ಡಾಲು | | V | 600/472 | 78.66 | 600.00 |
| | **Degree** | | | | |
| ಲಲಿತ D/o ದೇರಜೆ ಬೋಪಣ್ಣ | B.Sc., | I | 900/633 | 70.33 | 1500.00 |
| ತನುಜ D/o ಮುಕ್ಕಾಟಿ ತಮ್ಮಯ್ಯ | B.Sc., | II | 900/630 | 70.00 | 1300.00 |
| ರೀಮಾ D/o ಕೆದಂಬಾಡಿ ಬಾಲಕೃಷ್ಣ | B.Sc., | III | 900/629 | 69.80 | 1100.00 |
| ದೀಪಕ್ S/o ಪಟ್ಟಡ ಜಯರಾಮ್ | B.Sc., | IV | 900/574 | 63.77 | 900.00 |
| ನೂತನ್ D/o ಚೀಯಪ್ಪನ ಪೂವಯ್ಯ | B.A. | V | 900/515 | 57.22 | 800.00 |


## ಮೈಸೂರು ದಸರಾ

ಮೈಸೂರಿನಲ್ಲಿ ನಡೆವುದು ಮೋಜಿನ ದಸರಾ
ಬರುವುದು ಅಲ್ಲಿಗೆ ಜನತೆಯ ಸಾಗರ
ವರ್ಷಕ್ಕೊಮ್ಮೆ ಅಲ್ಲಿ ಸಂಭ್ರಮದ ಸಡಗರ
ಮೈಸೂರಿನ ಜನತೆಗೆ ಹೆಮ್ಮೆಯ ಆಡಂಬರ
ಮಹಿಷಾಸುರನ ಕೊಂದ ತಾಯಿ ಚಾಮುಂಡಿ
ಬೆಟ್ಟದ ಮೇಲೆ ನಿಂತು ಹರಸು ಜನತೆಯ
ನಿನ್ನ ಕರುಣೆಯೊಂದೆ ಸಾಕು ನಾಡ ಜನತೆಗೆ
ನಿನ್ನ ನೆನೆಯುವಂತ ಬುದ್ಧಿ ನೀಡು ಜನತೆಗೆ
ಪ್ರೇಮಿಗಳು ಇಚ್ಛಿಸುವ ಕೆ.ಆರ್. ಸಾಗರ
ನಕ್ಕು ನಲಿದು ಆಡಲಿದು ಬಹಳ ಸುಂದರ
ಕೋಟಿ ಜನರ ಮನಸೆಳೆದ ಈ ಸಾಗರ
ಕೊಡಗಿನ ಕಾವೇರಿ ತಾಯಿಯ ವರ ಪ್ರಸಾದ
ರಾಜ ಮಹಾರಾಜರಾಳಿದ ಮೈಸೂರು ನಗರವು
ಹಲವು ಜಾತಿ-ಧರ್ಮಗಳ ತವರುಮನೆಯು
ಹೊರ ಊರಿನ ಜನತೆಗಿದು ಸ್ವರ್ಗಧಾಮವು
ಹೊರದೇಶದ ಪಕ್ಷಿಗಳಿಗೂ ತಂಗು ಧಾಮವು
ಒಮ್ಮೆಯಾದರೂ ನೋಡಬೇಕು ಅರಮನೆಯನ್ನು
ಕನಸು-ಮನಸ್ಸಿನಲ್ಲಿ ನೆನೆಯುವ ಶಿಲ್ಪಕಲೆಯನ್ನು
ಕಣ್ಣಾರೆಕಂಡು ನಲಿಯಬೇಕು ಈ ಸೊಬಗನ್ನು
ಎಂದೆಂದಿಗೂ ಮರೆಯದಿರಿ ಮೈಸೂರ ದಸರವನ್ನು

ಕುಂಟುಪುಣಿ ರಾಮಕೃಷ್ಣ, ಗೋಣಿಮರೂರು.

ಸಿಗಬೇಕಾದ್ದು ತಪ್ಪದು, ಬಯಸಿದ್ದು ಸಿಗದು

# ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.) ಬೆಂಗಳೂರು
# 2000-2001ರ ವಾರ್ಷಿಕ ಮಹಾಸಭೆ ಮತ್ತು ಕೈಲು ಮುಹೂರ್ತ ಹಬ್ಬದ ವರದಿ.





ನಮ್ಮ ಸಮಾಜದ ವಾರ್ಷಿಕ ಮಹಾಸಭೆ" ಮತ್ತು "ಕೈಲು ಮುಹೂತ" ಹಬ್ಬವು ತಾ. 17-9-2000 ದಂದು ವಸಂತ ನಗರದಲ್ಲಿರುವ ಜಷ್ಮಾ ಭವನದಲ್ಲಿ ಸಾಂಗವಾಗಿ ನೆರವೇರಿತು.

ಪ್ರಾರಂಭದಲ್ಲಿ ಶ್ರೀ ಪೂಜಾರಿ ಪೂವಯ್ಯನವರು ಆಯುಧ ಪೂಜೆಯನ್ನು ಮಾಡಿ ಎಲ್ಲರಿಗೂ ಪ್ರಸಾದ ವಿನಿಯೋಗ ಮಾಡಿದರು.

ಕಾರ್ಯ ನಿರ್ವಾಹಕರಾದ ಬಿ. ಇ. ಯಲ್‌ನ ಚೀಫ್ ಸೆಕ್ಯುರಿಟಿ ಆಫೀಸರ್ ಆದ ಶ್ರೀಮಾನ್ ಅಮ್ಮೆ ಸೀತಾರಾಮರವರು ಸಮಾಜದ ಪದಾಧಿಕಾರಿ ಮತ್ತು ಅಥಿತಿಗಳನ್ನು ವೇದಿಕೆಗೆ ಆಹ್ವಾನಿಸಿದರು. ಶ್ರೀಮಾನ್ ಬಿರ್ಮುಕಜೆ, ಮಹಾಬಲೇಶ್ವರನವರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಸಮಾಜದ ಉಪಾಧ್ಯಕ್ಷರಾದ ಶ್ರೀಮಾನ್ ಪಿ. ಅನಂತರಾಜರವರು ಸ್ವಾಗತ ಭಾಷಣದಲ್ಲಿ ಮುಖ್ಯ ಅತಿಥಿ ಹಾಗೂ ಸಭೆಗೆ ಆಗಮಿಸಿದ ಇತರ ಗಣ್ಯರನ್ನು ಎಲ್ಲಾ ಸದಸ್ಯರು ಮತ್ತು ಬಂಧು ಬಾಂದವರನ್ನು ಸ್ವಾಗತಿಸಿದರು.

ಕಳೆದ ಸಾಲಿನಲ್ಲಿ ಗತಿಸಿದ ಗಣ್ಯರು ಹಾಗೂ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸಿ ಒಂದು ನಿಮಿಷ ಮೌನ ಪ್ರಾರ್ಥನೆಯನ್ನು ಸಲ್ಲಿಸಲಾಯಿತು.

ಸಮಾರಂಭಕ್ಕೆ ಶುಭಾಶಯ ಕಳುಹಿಸಿದ ಶ್ರೀಮಾನ್ ಮೊಂಟಡ್ಕ ಬಾಲ ಕೃಷ್ಣ ಮತ್ತು ಕುರುಂಜಿ ಹೇಮನಾಥ್‌ರವರ ಸಂದೇಶಗಳಮ್ನು ಓದಿ ಹೇಳಲಾಯಿತು.

1999-2000 ರ ವಾರ್ಷಿಕ ವರದಿ ಮತ್ತು 1999 ರ ವಾರ್ಷಿಕ ಮಹಾಸಭೆ ಮತ್ತು ಕೈಲು ಮುಹೂರ್ತ ಹಬ್ಬದ ವರದಿಯನ್ನು ಕಾರ್ಯದರ್ಶಿಯವರಾದ ಶ್ರೀ ನೂಜಿ ದಿನಕರ ಗೌಡರು ಸಭೆಗೆ ಓದಿ ಹೇಳಿದರು. ಶ್ರೀಮಾನ್ ಮೂಟೇರ ಉತ್ತಪ್ಪನವರು ವರದಿಯನ್ನು ಅನುಮೋದಿಸುವುದರೊಂದಿಗೆ ಸಭೆಯು 1999-2000ರ ವಾರ್ಷಿಕ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಿತು.

1999-2000ರ ವಾರ್ಷಿಕ ಲೆಕ್ಕಪತ್ರದ ವರದಿಯನ್ನು ಖಜಾಂಚಿಯವರಾದ ಶ್ರೀ ಬಿ. ಚಿನ್ನಪ್ಪಗೌಡರು ಸಭೆಯಲ್ಲಿ ಮಂಡಿಸಿದರು. ಶ್ರೀಮಾನ್ ಕೆ. ಜಯಪ್ರಸಾದ್‌ರವರು ಲೆಕ್ಕ ಪತ್ರವನ್ನು ಅನುಮೋದಿಸುವುದರೊಂದಿಗೆ 1999-2000 ರ ವಾರ್ಷಿಕ ಲೆಕ್ಕ ಪತ್ರವನ್ನು ಸಭೆಯ ಸರ್ವಾನುಮತದಿಂದ ಅಂಗೀಕರಿಸಿತು.

ಮಹಿಳಾ ಘಟಕದ ವರದಿಯನ್ನು ಕಾರ್ಯದರ್ಶಿ ಶ್ರೀಮತಿ ವೈಶಾಲಿ ಅಮರನಾಥ್‌ರವರು ಸಭೆಗೆ ಓದಿ ಹೇಳಿದರು.

ಮುಖ್ಯ ಅತಿಥಿಯವರ ಪರಿಚಯವನ್ನು ಪೂಜಾರಿ ಮೊಣ್ಣಪ್ಪನವರು ಸಭೆಗೆ ಮಾಡಿಸಿದರು. ಮತ್ತು ಹಾರಾರ್ಪಣೆ ಮಾಡಲಾಯಿತು. ಗಣ್ಯರಿಗೆ ಸನ್ಮಾನ ಕಾರ್ಯ ಕ್ರಮದಲ್ಲಿ, ಯಕ್ಷಗಾನ ರಂಗದಲ್ಲಿ ಹೆಸರುವಾಸಿಯಾದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ 1999ನೇ ಸಾಲಿನ ಪ್ರಶಸ್ತಿ ವಿಜೇತರಾದ ಶ್ರೀ ಕೇದಗಡಿ ಗುಡ್ಡಪ್ಪ ಗೌಡರ ಪರಿಚಯವನ್ನು ಶ್ರೀಮಾನ್ ರವೀಂದ್ರನಾಥ್‌ರವರು ಸಭೆಗೆ ಮಾಡಿಸಿದರು. ಮುಖ್ಯ ಅತಿಥಿ ಶ್ರೀಮಾನ್ ಪಡ್ಡಂಬೈಲು ವೆಂಕಟ್ರಮಣ ಗೌಡರು ಅವರಿಗೆ ಹಾರಾರ್ಪಣೆ ಮಾಡಿ ಶಾಲು ಹೊದಿಸಿ ಫಲ ಪುಷ್ಪಗಳನ್ನಿತ್ತು ಗೌರವಿಸಿದರು. ಶ್ರೀಮಾನ್ ಗುಡ್ಡಪ್ಪ ಗೌಡರು ತಮ್ಮ ಭಾಷಣದಲ್ಲಿ ತಾನು ಯಕ್ಷಗಾನ ರಂಗದಲ್ಲಿ ನಡೆದು ಬಂದ ದಾರಿಯನ್ನು ವಿವರಿಸಿ ತನ್ನನ್ನು ಸನ್ಮಾನಿಸಿದ್ದಕ್ಕಾಗಿ ಸಮಾಜವನ್ನು ಅಭಿನಂದಿಸಿದರು.

ಮುಂದಿನ ಕಾರ್ಯಕ್ರಮದಲ್ಲಿ ಪಿ.ಯು.ಸಿ.ಯಲ್ಲಿ ಅತ್ಯಧಿಕ ಅಂಕ ಪಡೆದ ಶ್ರೀ ಬಿ. ಜೆ. ಲೋಹಿತ್‌ರವರಿಗೆ (85%) ರೂ 1000/- ಬಹುಮಾನವನ್ನು ಶ್ರೀ ಪಿ. ವೆಂಕಟ್ರಮಣ ಗೌಡರು ಹಸ್ತಾಂತರಿಸಿದರು. ಯಸ್. ಯಸ್. ಯಲ್.ಸಿ. ಯಲ್ಲಿ ಅತ್ಯಧಿಕ ಅಂಕ ಪಡೆದ ಶ್ರೀ ಕೆ.ಜೆ. ಸುದೇವ್‌ರವರಿಗೆ (90.56%) ರೂ 1000/-, ಶ್ರೀ ಭುವನೇಶ್ N.Eರವರಿಗೆ (89.76%) 750/- ಮತ್ತು ಕು. ಪ್ರಜ್ಞಾರವರಿಗೆ (89.12%) ರೂ 500/- ಬಹುಮಾನವನ್ನು ಮುಖ್ಯ ಅತಿಥಿಯವರು ಹಸ್ತಾಂತರಿಸಿದರು ಮತ್ತು ಅವರೆಲ್ಲರಿಗೂ ಶುಭ ಹಾರೈಸಿದರು.

20ನೇ ಪುಟಕ್ಕೆ

# ಬಾಳಿನ ನಲಿವಿಗೆ, ನಾಳಿನ ಬೆಳಕಿಗೆ : ನೋವಿನ ನೆಲೆ ಬೆಲೆ - ಜೀವನದ ಸಾರ್ಥಕತೆ.

ಮನುಷ್ಯರಾದ ನಾವೆಲ್ಲರೂ ಭಾವಜೀವಿಗಳು. ಪ್ರೀತಿ ಪ್ರೇಮ, ಮರುಕ ಮಮತೆ, ದಯೆ, ಕರುಣೆ, ಅನುಕಂಪ ಇವು ನಮಗೆಲ್ಲರಿಗೂ ಸಾಮಾನ್ಯ.

ರಾಗ ದ್ವೇಷಾದಿಗಳೂ ನಮ್ಮನ್ನು ಕಾಡಿಸದೆ ಇರುವುದಿಲ್ಲ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ-ಈ ಆರು ಶತ್ರುಗಳಿಂದ ನಮಗೆ ಅನೇಕ ವೇಳೆ ಬಾಧೆಯಾಗುತ್ತದೆ. ಮೊದಲನೆಯ ಗುಂಪಿನವುಗಳಿಂದ ಉದಿಸುವ ಸಂವೇದನೆಗಳು ಸಾಮಾನ್ಯವಾಗಿ ಸಾತ್ವಿಕ ಸ್ವರೂಪದವು. ಎರಡನೆಯ ಗುಂಪಿನವುಗಳಿಂದ ಉಂಟಾಗುವ ಪರಿಣಾಮ ರಾಜಸ, ತಾಮಸ.

ಮೂಲ ಕಾರಣವೇನೆ ಇರಲಿ, ಇಂಥ ಪರಿಣಾಮ ದಿಂದಾಗಿ ಉಂಟಾಗುವ ನೋವು ಮಾನವರಿಗೆ ಸಾರ್ವತ್ರಿಕ, ಸರ್ವಕಾಲಿಕ. ಬೇನೆ, ಬಾಧೆ, ವ್ಯಥೆ, ಶೂಲೆ, ದುಃಖ ಎಂದು ನಾನಾ ರೀತಿಯಾಗಿ ಇದನ್ನು ಅರ್ಥೈಸಬಹುದು. ವೇದನೆ ಸಂವೇದನೆ ಎಂಬುದಕ್ಕೆ ನೋವು ಪರ್ಯಾಯಪದ. ಸುತ್ತಣ ಪರಿಸರಕ್ಕೆ, ವಿದ್ಯಮಾನಗಳಿಗೆ ಸದಾ ಸ್ಪಂದಿಸುತ್ತಿರುವ ಮನಸ್ಸು ವೇದನೆಯನ್ನು, ನೋವನ್ನು ಅನುಭವಿಸುತ್ತಲೇ ಇರುತ್ತದೆ.

ಹುಟ್ಟಿನಿಂದ ಸಾವಿನವರೆಗೆ ನಮ್ಮೊಂದಿಗೆ ಸಾಗಿ ಬರುವ ಸಂಗಾತಿ ನೋವು. ನೋವಿಲ್ಲದೆ ಯಾವುದೂ ಈ ಲೋಕದಲ್ಲಿ ಜನಿಸಲಾರದು. ಮನುಷ್ಯರು ಹೆರವರ ನೋವಿನಲ್ಲಿ ಜನಿಸುತ್ತಾರೆ, ತಮ್ಮ ನೋವಿನಲ್ಲೇ ಸಾಯುತ್ತಾರೆ ಎಂದು ಒಬ್ಬ ಇಂಗ್ಲಿಷ್ ಕವಿ ಹೇಳಿದ್ದಾನೆ. ತಾಯಿಯಾಗುವವಳು ಹುಟ್ಟುವ ಮಗುವಿಗಾಗಿ ಅಪಾರ ವೇದನೆಯನ್ನು ಸಹಿಸಿಕೊಳ್ಳುತ್ತಾಳೆ. ಮಗುವಿನ ಮುದ್ದು ಮುಖವನ್ನು ನೋಡಿದೊಡನೆ ಆ ನೋವೆಲ್ಲ ಮರತೇ ಹೋಗುತ್ತದೆ ಅದು ಉದಾತ್ತವಾದುದು ಎನಿಸುತ್ತದೆ. ದಿವ್ಯ ಭವ್ಯವಾಗುತ್ತದೆ. ತಾಯಿಯ ನೋವಿನಲ್ಲಿ ಹುಟ್ಟಿದ ಮಗು ಬೆಳೆದು ದೊಡ್ಡವನಾಗಿ ಸಾವಿನ ಸಮ್ಮುಖಕ್ಕೆ ಬಂದಾಗ ತನ್ನ ನೋವಿನಲ್ಲೇ ಅವನು ಸಾಯುತ್ತಾನೆ. ಕೆಲವರು ಮಾತ್ರ ನಗು ನಗುತ್ತ ಇನ್ನೊಂದು ಜಗತ್ತಿಗೆ ಜಾರಿಕೊಳ್ಳಬಹುದು. ಅಂಥವರು ಪುಣ್ಯಜೀವಿಗಳು ಎನ್ನಬಹುದೇನೊ.

ಹುಟ್ಟು-ಸಾವುಗಳ ಈ ಎರಡು ಬಗೆಯ ನೋವುಗಳ ನಡುವೆ ಬದುಕು ಸಾಗುತ್ತದೆ. ಈ ಇಡೀ ಜೀವನವೇ ಸಾವಿನೆಡೆಗೆ ಬೆಳೆಸಿದ ನಿರಂತರ ಪ್ರಯಾಣ. ಹುಟ್ಟು ಸಾವುಗಳೆಂಬ ಎರಡು ತುದಿಗಳ ನಡುವಣ ಬಾಳು ಒಂದು ಸ್ವಪ್ನವೆಂದೇ ಭಾವಿಸುವುದುಂಟು. ಈ ಬಾಳು ನಶ್ವರವೆನಿಸಿದರೂ ಈ ಅಂತರದಲ್ಲಿ ನಾವು ಏನು ಸಾಧಿಸುತ್ತೇವೊ ಅದು ನಶ್ವರವಲ್ಲ. ಬದುಕಿನ ಸಾರ್ಥಕತೆ ಇರುವುದೇ ಇದರಲ್ಲಿ ಬೇಗ ಮಲಗಿ ಬೇಗ ಏಳುವವನು ಆರೋಗ್ಯವಂತ, ಐಶ್ವರ್ಯವಂತ, ಅವನೇ ಸುಖಿ ಎಂದು ಹೇಳುವುದುಂಟು. ಮಲಗಿದಾಗಿನಿಂದ ಏಳುವವರೆಗಿನ ಅವಧಿಗಿಂತ, ಎದ್ದಾಗಿನಿಂದ ಮಲಗುವವರೆಗಿನ ಅವಧಿಯಲ್ಲಿ ನಾವು ಏನು ಮಾಡುವೆವೆಂಬುದು ಅದೇ ಆರೋಗ್ಯ ಐಶ್ವರ್ಯ ಸೌಖ್ಯಗಳ ಸಾಧನ.

ಹೆರವರ ಕಷ್ಟ ಸುಖಗಳಿಗೆ ಸ್ಪಂದಿಸುವುದು ಒಂದು ಬಗೆಯ ನೋವಾದರೆ, ಯಾವುದಾದರೊಂದು ದಿವ್ಯಾನುಭವವನ್ನು ಪಡೆದ ಮೇಲೆ ಅದು ನಷ್ಟವಾದಾಗ ಉಂಟಾಗುವ ವೇದನೆ ಇನ್ನೊಂದು ಬಗೆಯದು. ಇದು ಆತ್ಮ ಸಂಬಂಧಿಯಾಗಿದ್ದು ಆನಂದಾನುಭೂತಿಯ ಸ್ಥಿತಿಯಿಂದ ವಾಸ್ತವ ಲೋಕಕ್ಕೆ ಜಾರಿ ಬಂದ ಸಂದರ್ಭಕ್ಕೆ ಸಂಬಂಧಿಸಿದ್ದು. ಜಾನ್ ಕಿಟ್ಸ್ ಎಂಬ ಇಂಗ್ಲಿಷ್ ಕವಿ ನೈಟಿಂಗೇಲ್ ಎಂಬ ಹಾಡುವಕ್ಕಿಯನ್ನು ಕುರಿತು ಬರೆದಿರುವ ಕವನದಲ್ಲಿ ಇಂಥ ಅನುಭವವನ್ನು ಕಾಣಬಹುದು. ಮರದ ಎಲೆಗಳ ನಡುವೆ ಕುಳಿತ ಹಕ್ಕಿಯ ಹಾಡನ್ನು ಕೇಳಿ ಈ ಜಗದ ಜಂಜಡವನ್ನೆಲ್ಲ ಮರೆತು ಬೇರೊಂದು ಲೋಕದಲ್ಲಿ ವಿಹರಿಸುತ್ತಿದ್ದ ಕವಿಯ ಮನಸ್ಸು ಆ ಹಾಡು ಮುಗಿದೊಡನೆ ವಿಹ್ವಲಗೊಳ್ಳುತ್ತದೆ. ಸ್ವಪ್ನಭಂಗವಾದಂತೆ ಎನಿಸುತ್ತದೆ. ಎಲ್ಲಿ ಹೋಯಿತೋ ಆ ಸ್ವಪ್ನದರ್ಶನ ! ಎಂದು ನೋಯುತ್ತದೆ. ದೇಹ ಸಂಬಂಧಿಯಾದ್ದಕ್ಕಿಂತ ಭಿನ್ನವಾದ್ದು ಈ ನೋವು. ಇದು ಹೃದಯ ಸಂಬಂಧಿಯಾದ್ದು, ಆತ್ಮ ಸಂಬಂಧಿಯದು ಎನಿಸುವವರೆಗೂ ಏರಬಹುದಾದ್ದು.

ದಿವ್ಯ ಮಧುರಗಾನವೊಂದನ್ನು ಕೇಳಿದಾಗ ಕವಿ ಪು.ತಿ.ನ. ಅವರು ಪಡೆಯುತ್ತಿದ್ದ ಅನುಭವವಂತೂ ಅನುಪಮವಾದ್ದು. 'ಗಾನವಾವುದೊ' ಗೂಢಭಾವವನು ಬಿಚ್ಚುತಿಹುದು. ಆತ್ಮ ವದನರಿತಿಹುದು, ನುಡಿಗೊಡಲು ನೋಯುತಿಹುದು' ಎಂದು ಅವರು ಕವನಿಸಿದ್ದಾರೆ. ಅನಿರ್ವಚನೀಯವಾದ ಆನಂದವನ್ನು ಅನುಭವಿಸುತ್ತಿದ್ದರೂ ಅದನ್ನು ಅಭಿವ್ಯಕ್ತಿಸಲಾಗದು ಎಂಬ ನೋವು ಇದು. ಯಾಕೆಂದರೆ ಇದು ಇಂದ್ರಿಯಾತೀತವಾದ್ದು.

ನಾವು ಯಾವುದನ್ನು ಪ್ರೀತಿಸುತ್ತೇವೊ ಅದರಿಂದ ವಿಯೋಗ ಸಂಭವಿಸಿದಾಗ ಅಥವಾ ಅದರ ವಿಯೋಗ ಸಂಭವಿಸುವುದೆಂಬ ಶಂಕೆ ಉಂಟಾದಾಗ, ಆ ಪ್ರೀತಿಯ ವಸ್ತುವಿಗೆ ಕೆಡುಕಾಗಬಹುದೆನಿಸಿದಾಗ ಮನಸ್ಸು ನೊಂದುಕೊಳ್ಳುತ್ತದೆ. ದಯಾಮೂಲವಾದ ನೋವು ಒಂದು ಕಡೆಯಾದರೆ, ಪ್ರೇಮ ಅಥವಾ ವಾತ್ಸಲ್ಯಮಯವಾದ್ದು ಇನ್ನೊಂದು ಕಡೆ. ಜಗತ್ತಿನಲ್ಲಿಯ ಯಾವುದೇ ಜೀವಿಗೆ ಬಾಧೆಯಾಗುವಂತಾದಾಗ, ಆ ಜೀವಿಯ ನೋವು ನಮ್ಮದೆಂದೇ ಅನಿಸಿದಾಗ ಅದಕ್ಕಾಗಿ ಕನಿಕರ ಮೂಡುತ್ತದೆ. ಕಣ್ಣು ಹನಿಗೂಡತ್ತದೆ, ದಯೆಯೆಂಬುದು ಮಾನವನಲ್ಲಿ ಇರಬೇಕಾದ ಉದಾತ್ತಗುಣ. 'ದಯವೇ ಧರ್ಮದ ಮೂಲವಯ್ಯ!' ಎನ್ನುತ್ತಾರೆ ಬಸವಣ್ಣ. ದಯೆಯ ನೋವು ಒಂದೇ ನಾಣ್ಯದ ಎರಡು ಬದಿಗಳಿದ್ದಹಾಗೆ. ಅವುಗಳದ್ದು ಅವಿನಾಭಾವ ಸಂಬಂಧ.

ವಾತ್ಸಲ್ಯಭಾವಕ್ಕೆ ಅಂಟಿಕೊಂಡಿರುವಂಥದು ಕೂಡ ನೋವೇ ಎನ್ನಬಹುದು. ತನ್ನ ಪ್ರೀತಿಯ ಮಗುವಿಗೆ ಏನು ಕೆಡುಕಾಗವುದೋ ಎಂದು ತಾಯಿ ನೋಯುತ್ತಾಳೆ. ಅತಿ ಪ್ರೇಮ ಇದ್ದಲ್ಲಿ ಪಾಪ ಶಂಕೆ. ಭಕ್ತನಾದವನು ತನ್ನ ಆರಾಧ್ಯ ದೈವವನ್ನು ತಾಯಿಯೆಂದೋ

20ನೇ ಪುಟಕ್ಕೆ

ಬಾಯಿಗೆ ರುಚಿಯಾಗಿರುವುದು ಹೊಟ್ಟೆಗಾಗದು, ಹೊಟ್ಟೆಗೆ ಒಳ್ಳೆಯದಾಗಿರುವುದು ಬಾಯಿಗೆ ರುಚಿ ಇರದು.

# ಪ್ರಥಮ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಟ್ರೋಫಿ ವಿನ್ನರ್ ಅಯ್ಯಂಡ್ರ ಸೀತಾರಾಮ



ನಂಜರಾಯ ಪಟ್ಟಣ ಅಂಚೆ, ಹೊಸ ಪಟ್ಟಣ ಗ್ರಾಮ ಅಯ್ಯಂಡ್ರ ದಿವಂಗತ ಪೂವಯ್ಯನವರ ಐದನೇ ಮಜ್ಞ ಸೀಮರಾಮ. ಇವರ ಮನೆಗೆ ಇನ್ನೊಂದು ಮನೆ ಹೆಸರು ಉಟ್ಟು ಅದು (ಎರಗದ್ದೆಂತ) ಆದನ್ನ ಹೆಚ್ಚಿಗೆ ರೂಡಿಲ್ಲಿ ಇಲ್ಲೇ. ಸೀತರಾಮನವರ ಅಪ್ಪ ಪೂವಯ್ಯ ಗೌಡಶಾಸ್ತ್ರಲ್ಲಿ ಸಮಕಟಲಿ ಭಾರಿ ಹೆಸರು ಪಡೆದಿದ್ದೋ ಇವರ ಪತ್ನಿ ಮುತ್ತವ್ವ, ಈ ದಂಪತಿಗಳಿಗೆ ನಾಲ್ಕು ಜನ ಗಂಡ್ ಮಕ್ಕ ಮತ್ತೆ ಎರಡ್ ಜನ ಹೆಣ್ಣ್ ಮಕ್ಕ. ಅವರಲ್ಲಿ ಐದನೇ ಮಜ್ಞ 7-11-1957 ರಲ್ಲಿ ಹೊಸ ಪಟ್ಟಣದ ಸ್ವಗೃಹದಲ್ಲಿ ಸೀತರಾಮ ಜನಿಸಿದೋ. ಸೀತರಾಮನವುಕ್ಕೇ ಎರಡು ಅಣ್ಣ ಒಂದು ತಮ್ಮ ಹಂಗೇ ಎರಡು ಅಕ್ಕಂದಿರು. ಇವರ ದೊಡ್ಡ ಅಣ್ಣ ಯಾದವ ಇವು ಶಾಂತಳ್ಳಿಲಿ ಪಾರೆಸ್ಟರ್ ಆಗಿ ಕಾರ್ಯ ನಿರ್ವಹಿಸುತ್ತಾ ಒಳೋ. ಇನ್ನೊಬ್ಬ ಅಣ್ಣ ದೈವಾದೀನರಾದೋ, ತಮ್ಮ ಬೋಪಯ್ಯ ವೆಟನರಿ ಇನ್ಸ್‌ಪೆಕ್ಟರ್ ಆಗಿ ಆಭ್ಯತ್‌ಮಂಗಲ ಗ್ರಾಮದಲ್ಲಿ ಕಾರ್ಯ ನಿರ್ವಹಿಸ್ತ್ತಳೋ ಹಾಗೂ ಅಕ್ಕ ಬೀನಾ Staff Nurse ಆಗಿ ಚಿತ್ರದುರ್ಗಲ್ಲಿ ಕೆಲಸ ಮಾಡ್‌ತ್ತಾಒಳೋ. ಇನ್ನೊಬ್ಬ ಅಕ್ಕ ಬಾವ ಸನ್ನಿ ಮರೂರು ಗ್ರಾಮಲ್ಲಿ ಕೃಷಿಕರ್.

ಸೀತರಾಮನವರ ವಿದ್ಯಾಭ್ಯಾಸ ಒಂದನೇ ತರಗತಿಯಿಂದ 7ನೇ ತರಗತಿಯ ಗಂಟ ನಂಜರಾಯ ಪಟ್ಟಣ ಮಿಡ್ಲ್‌ಸ್ಕೂಲ್‌ಲ್ಲಿ 8ರಿಂದ 10ನೇ ತರಗತಿಯ ಗಂಟ ಚೆಟ್ಟಳ್ಳಿಯ ಹೈಸ್ಕೂಲ್‌ವರೆಗೆ ಮತ್ತೆ P.U.C.ನ್ನ ಮೈಸೂರು ಮಹಾರಾಜ ಜೂನಿಯರ್ ಕಾಲೇಜ್‌ನಲ್ಲಿ ಓದು ಮುಗಿಸಿದೋ. ಅಲ್ಲಿಂದ ವಿದ್ಯಕ್ಕೆ ವಿದಾಯ ಹಾಡಿ ಆ ಮೇಲೆ K.S.R.T.C. Busಲ್ಲಿ ಕಂಡಕ್ಟರ್ ಆಗಿ ಆರು ತಿಂಗಳ ಕಾಲ ಕೆಲಸ ಮಾಡಿಳೋ 9-8-1980ರಲ್ಲಿ ಸೀತರಾಮನವು ಪೋಲಿಸ್ ಇಲಾಖೆಗೆ ಸೇರ್ಪಡೆಯಾದೋ. ಇವು 3-4 ಕಡೆ ಪೋಲಿಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ್ 5-5-1988ರಲ್ಲಿ ಸುಂಟಿಕೊಪ್ಪ ನಾಡು ಉಲುಗುಲಿ ಗ್ರಾಮ ಓಡೆಪ್ಪನ ಲಕ್ಷ್ಮಣ ಮತ್ತು ರುಕ್ಮಿಣಿ ದಂಪತಿಯವರ ಎರಡನೇ ಮಗಳನ್ನ ಮದುವೆ ಆಗಿ ಸೀತರಾಮ ಪಾರ್ವತಿ ಸತಿ ಪತಿಗಳಾದೋ. ಈ ದಂಪತಿಗಳಿಗೆ ಎರಡು ಜನ ಮಕ್ಕ ಒಂದ್ ಗಂಡ್, ಒಂದು ಹೆಣ್ಣ್, ಮಜ್ಞ ಮನೋಜ್‌ಕುಮಾರ್ 6ನೇ ತರಗತಿಲಿ, ಮಗಳ್ ತೇಜಸ್ವಿನೀ (ತೃಪ್ತಿ) 3 ನೇ ತರಗತೀಲಿ ಕಲಿತ ಒಳೋ.

ಸೀತರಾಮನವು ಹೊಸಪಟ್ಟಣದ ಮನೆಯಲ್ಲಿ ವಾಸವಾಗಿದ್ದ್ ಮಡಿಕೇರಿ ಕೊಡಗು ಜಿಲ್ಲಾ ಅಪರಾಧ ಪತ್ತೆದಳಲಿ ಕರ್ತವ್ಯ ನಿರ್ವಹಿಸುತ್ತಾಒಳೋ. ಅವರನ್ನ ಈ ರೀತಿ ಪ್ರಶ್ನೆ ಮಾಡ್‌ಕನ?

1) ನಿಮಗೆ ಪೋಲಿಸ್ ಇಲಾಖೆಲಿ ಕೆಲಸ ಮಾಡಿಕೆ ತೊಂದರೆ ಆದುಲ್ಲೆನಾ ? ಮತ್ತೆ ಈ ಕೆಲಸಲ್ಲಿ ತೃಪ್ತಿ ಸಿಕ್ಕುಟ್ಟಾ?

ನಂಗೆ ಕೆಲಸ ಮಾಡಿಕೆ ತೊಂದ್ರೆ ಇಲ್ಲೇಂತಾ ಹೇಳಿಕೆ ಆದುಲ್ಲೇ ಆದರೆ ನಾವು ಕಷ್ಟ ಪಟ್ಟರೇ ತಾನೇ ಸುಖ ಸಿಕ್ಕುದು, ಮತ್ತೆ ಈಗ ಗಂಟ ನಾನ್ ಮಾಡ್ದ್ ಕೆಲಸಲಿ ನಂಗೆ ಆತ್ಮ ತೃಪ್ತಿ ಸಿಕ್ಕುಟ್ಟು.

2) ನಿಮಗೆ ಬಡ್ತಿ ಸಿಕ್ಕಿ ಎಷ್ಟು ವರ್ಷ ಆತ್? ಪತ್ತೆದಳ ಕಾರ್ಯಲಿ ನಿಮ್ಮ ಸಾಧನೆ ಏನ್?

ನಂಗೆ Head Constable ಪ್ರಮೋಶನ್ ಸಿಕ್ಕಿ 4 ವರ್ಷ ಆತ್ ಮತ್ತೆ ಈಗ ಜಿಲ್ಲಾ ಅಪರಾಧ ಪತ್ತೆದಳಲಿ ನನ್ನ ಸಾಧನೆ ದೊಡ್ಡದೊಂದು ಅಲ್ಲದಿದ್ದರು, ಅಂತು ಹೇಳುದಾದರೇ S.S.L.C.ಲೀ ಕಳ್ಳ Marks Card ಕೇಸ್, ಟ್ಯಾಕ್ಸಿ ಡ್ರೈವರ್ ಕೊಲೆ ಪತ್ತೆ, ಜೀಪುಕದ್ದವರ ಹಿಡ್‌ದದ್, ಗಂಧ ಕದ್ದವರ ಹಿಡ್‌ದದ್, ಹಿಂಗೇ ಸುಮಾರ್ 100-150 ಕೇಸ್ ಪತ್ತೆ ಮಾಡ್ಯೋಳೇ ಮತ್ತೆ ನನ್ನ ಈ ಕೆಲಸ ಗುರ್ತಿಸಿ ಆಕಾಶವಾಣಿ ಬೆಂಗಳೂರಿನವು "ಕಡತ ಹೇಳಿದ ಕಥೆ" ಪ್ರೋಗ್ರಾಂಗೆ ನನ್ನ ಸಂದರ್ಶನ ಮಾಡ್ಯೊಳೆ.

3) ಪತ್ತೆದಳ ಕೆಲಸದ ಬಗ್ಗೆ ನೀವು ಏನ್ ಹೇಳಿರೆ? ಅದ್ ಕಷ್ಟತ್ತಾ ಎನಿಸುದಿಲ್ಲೆನಾ? ಅಲ್ಲದೇ ನಿಮ್ಮ ವೈವಾಹಿಕ ಜೀವನಕ್ಕೆ ತೊಂದ್ರೆಯಾದುಲ್ಲೆನಾ?

ಈ ಕೆಲಸ ತುಂಬಾ ಅಪಾಯಕರ ನಾಜೂಕಾಗಿ ಜನರೊಟ್ಟಿಗೆ ಸ್ನೇಹ ಬೆಳಸಿ ಪ್ರೀತಿ, ತಾಳ್ಮೆ, ಸಹನೆಯಿಂದ ಬೆರ್‌ತ್ ಅವರ ಆಗ್ ಹೋಗ್‌ಗಳ ವಿಷಯನ್ನ ತಿಳ್‌ಕಂಡ್ ಚುರ್‌ಕ್ಕಾಗಿ ದಾಳಿಮಾಡ್ದು. ಪೋಲಿಸ್ ಕೆಲಸತ್ತಾ ಹೇಳಿರೆ, ಮೋಸ, ಧಗ, ಕಳ್ಳತನ ಇಂತದನ್ನ ಮಟ್ಟಹಾಕಿ ಒಬ್ಬರಿಂದ ಇನ್ನೊಬ್ಬರಿಗೆ ರಕ್ಷಣೆ ಕೊಟ್ಟ್ ಕಾಪಾಡ್ದ್. ಕೆಲಸನ್ನ ನಿರ್ವಹಿಸಿಕ್ಕೆ ಅನ್ನ, ನೀರ್, ನಿದ್ದೆ ಇವು ಸರಿಯಾದ ಸಮಯಕ್ಕೆ ಸಿಕ್ಕದಿದ್ದಲ್ಲಿ ಅದರ ಕಷ್ಟ ಹೇಳಿಕೆ ಆದುಲ್ಲೇ, ಅದ್ ಪತ್ತೆದಳ ಕಾರ್ಯ ಅಂದರೆ ಹೇಳಕಾ? ಅದರಲ್ಲಿ ಈಗಿನ ಜನ ಹೆಚ್ಚಿನ ಕಳ್ಳರ್ ಅವರ ಆತ್ಮರಕ್ಷಣೆಗೇಂತ್ತಾ ಚಾಕ್, ಚೂರಿ, ಪಿಸ್ತೂಲ್ ಇದನ್ನ ಉಪಯೋಗಿಸುವೇ ಅಂತಹವರನ್ನ ಹಿಡಿಯೋದ್ ತುಂಬಾ ಚಾಣಕ್ಯತನ ತೋರಿಸಿಕೆ ಆದೇ. ಮತ್ತೆ ಅಪಾಯಕರ, ಸಂದರ್ಭ ಬಂದದೇ ಹೆಚ್ಚಾಗಿ (ಯೂನಿಫಾರಂ) ಹಾಕದೆ ಮಪ್ತಿ ಬಟ್ಟೆ ಹಾಕಿ ಕಂಡ್ ಓಡಾಡಿರೆ ಕೆಲವುಕ್ಕೆ Dutyಲಿ ಇರುದೇ ಗೊತ್ತಾದುಲ್ಲೇ. ನನ್ನ ವೈವಾಹಿಕ ಜೀವನಕ್ಕೆ ಅಂತಹ ತೊಂದ್ರೆ ಇಲ್ಲೇ.

4) ನಿಮ್ಮ ಪತ್ನಿ (ಹೆಣ್ಣ್) ನಿಮ್ಮ Dutyಯ ಬಗ್ಗೆ ನಿಮಗೆ ಸಹಕರಿಸಿದೆಯಾ?

ನನ್ನ ಹೆಣ್ಣ್, ನಾನ್ ಹಗಲ್ ರಾತ್ರಿ Duty ಮಾಡಿ ಬಂದ್ರು ಸಿಡುಕಾದದೆ, ಹಾಗೇ ಅವಳ ಸಹಕಾರ ಪ್ರೀತಿ, ತಾಳ್ಮೆ ಇರೋದರಿಂದ ನಂಗೆ ಕೆಲಸ ಮಾಡಿಕೆ ಧೈರ್ಯ ಮತ್ತೆ ನೆಮ್ಮದಿ ಸಿಕ್ಕಿದೇ.

5) ನಿಮಗೆ ಅನೇಕ ಪುರಸ್ಕಾರ (Award) ಸಿಕ್ಕುಟುತ್ತಾ ಗೊತ್ತಾತ್ ಯಾವ, ಯಾವ, ಸಾಧನೆ ಬಗ್ಗೆ ಮತ್ತೆ ಎಷ್ಟು ಪುರಸ್ಕಾರಗ ಲಭಿಸಿಟ್ಟು? ಎಲ್ಲಿ? ಯಾರಿಂದ?

ನಂಗೆ ನಮ್ಮ ಇಲಾಖೆಯಿಂದ ಸುಮಾರ್ ಬಹುಮಾನ "165" ಸಿಕ್ಕುಟ್ಟು, (Cash Awards) forest Department ಯಿಂದ ಎರಡು ಸಾರಿ 500ರೂಗಳ Cash Awards ಸಿಕ್ಕುಟ್ಟು. ಮತ್ತೆ ನಮ್ಮ ಕೊಡಗಿಗೆ ಅತ್ಯುತ್ತಮ ಪೋಲಿಸ್ ಅಂತ ಹೇಳಿ (field Marshal Cariappa) ಬೆಳ್ಳಿ ಟ್ರೋಫಿ ಮತ್ತು 5 ಸಾವಿರ ರೂ.ಗಳ ನಗದು ಬಹುಮಾನ 1995ರಲ್ಲಿ ಪ್ರಪ್ರಥಮವಾಗಿ ಸಿಕ್ಕುಟ್ಟು. ಮತ್ತೆ ರೋಟರಿ ಕ್ಲಬ್ ಅವರಿಂದ, ಗೌಡ ಸಮಾಜ ಮಡಿಕೇರಿ, ವಾಹನ ಚಾಲಕರ ಸಂಘ ಮಡಿಕೇರಿ, ಮತ್ತೆ ಸಿದ್ದಾಪುರ ನಾಗರಿಕರಿಂದ ಅಲ್ಲದೆ ಅಯ್ಯಂಡ್ರ ಲಕ್ಷ್ಮಿ ಧವಸ ಭಂಡಾರ ಮುಂತಾದವರಿಂದ ಸನ್ಮಾನ ಸಿಕ್ಕುಟ್ಟು, ಅಲ್ಲದೆ ಅಂತರ ರಾಜ್ಯ ವಿಗ್ರಹ ಕದಿಯುವ ಕಳ್ಳರನ್ನ ಹಿಡಿಯೋಕೆ ಸಹಾಯ ಮಾಡಿದಕ್ಕೆ ದಕ್ಷಿಣ ಕನ್ನಡ ಜಿಲ್ಲೆ S.P.ಯವು ಕೂಡ 250 ರೂಗಳ ಬಹುಮಾನ ಕೊಟ್ಟಳೊ.

6) ನೀವು ಈ ವರೆಗೆ ಕಳೆದ ದಿನಗಳಲ್ಲಿ Dutyಗೆ ಸಂಬಂಧ ಪಟ್ಟ ಹಾಗೆ ಯಾವುದಾದರ್ ಘಟನೆ ನಡೆದುಟ್ಟಾ? ಅವುಗಳ ವಿವರಣೆ ಹೇಳಿರೆ?

ನನ್ನ Dutyಲಿ ಮರೆಯಲಾಗದ ಘಟನೆ ಅಂದರೆ ಸುಮಾರ್ ಉಟ್ಟ್, ನಾನ್ ಒಂದು ಸಾರಿ ಕೇರಳಕ್ಕೆ ಹೋಗಿ ಮಟ್ಟನೂರಿಗೆ ಬಂದ್ ಬಸ್ಸ್ ಕಾಯ್ಕಂಡ್ ನಿಲ್ಲ್‌ಕನ ಒಂದು ಕಾರ್ (ಮಾರುತಿ) ಬಂದ್ ನನ್ನ ಹಕ್ಕಲೇ ನಿಂತತ್, ಕಾರ್‌ಲ್ ಇದ್ದ ಒಬ್ಬ ಧಡಿಯ ನಂಗೆ ನಮಸ್ಕಾರ ಮಾಡ್ತ್, ನಂಗೆ ಸ್ವಲ್ಪ ಭಯ ಆತ್, ಆಗ ಅಂವ ಹೇಳ್ತ್ ಮಲೆಯಾಳಂಲೀ ನನ್ನ ಗೊತ್ತಾತ್‌ಲೇ ನಿಮಗೆ, ನೀವು ಒಂದು ಟೈಮಲಿ ನಂಗೆ 9 ತಿಂಗಳ ಗರ್ಭಿಣಿ ನನ್ನ ಹೆಣ್ಣ್‌ಗೆ ಪೋನ್ ಮಾಡಿಕೆ ಅವಕಾಶ ಮಾಡಿಕೊಟ್ಟರೀ ನೀವು ಅಂದ್ ನನ್ನ ಕೂಸ್‌ನ ಹೆಣ್ಣ್‌ನ ಉಳಿಸಿದರಿ, ನೀವು ನಮ್ಮ ಮನೆಗೆ ಬಂದ್ ಹೆಣ್ಣ್ ಮತ್ತೆ ಕೂಸ್‌ನ ಮಾತಾನಾಡಿಸಿ ಊಟ ಮಾಡಿ ಹೋಕ್, ಹಾಗೇ ನಾನ್ ಅವರ ಕಾರ್‌ಲೀ ಹೋಗಿ ಅವರನ್ನ ಮಾತನಾಡಿಸಿ ಊಟ ಮಾಡಿ ಬಂದೇ, ಅಂದ್ ಅವೆಲ್ಲಾ ತೋರಿಸಿದ ಪ್ರೀತಿನ ಇಂದ್ ಮರಿಯಾಕೆ ಆದುಲ್ಲೆ.

("ಅಂತೂ ಕಳ್ಳರಲ್ಲಿ ಪ್ರೀತಿ ವಿಶ್ವಾಸ ಉಟ್ಟು ಅವರನ್ನ ಒಂದೊಂದು ಪರಿಸ್ಥಿತಿಗೆ ಅನುಗುಣವಾಗಿ ಅವರನ್ನ ಕಳ್ಳರ ಹಾಗೆ ಮಾಡಿ ಬುಟ್ಟವೇ ಅಲ್ಲಾ,")

ಇನ್ನೊಂದು ಘಟನೆ ಒಂದು ಸಾರಿ ಮಂಗಳೂರಿನಿಂದ ನಾನ್ A.S.I. ಮತ್ತೆ P.C.ಕಳ್ಳನ ಹಿಡ್‌ಕಂಡ್ ಒಂದು ಬಸ್ಸ್ ಹತ್ತಿಸ್‌ಕನ ತಪ್ಪಿಸಿ ಓಡ್ದ್‌ವನ ಮಂಗಳೂರ್ Cityಲ್ಲಿ 2 ಕಿ.ಮೀ. ಚೇಸ್ ಮಾಡಿ ಹಿಡ್‌ದವ್, ಅದ್‌ಕೂಡ ಮರಿಯಕ್ಕೆ ಸಾಧ್ಯಯಿಲ್ಲೇ.

7) ನಿಮ್ಮ ನೆಚ್ಚಿನ ಹವ್ಯಾಸ ಬಗ್ಗೆ ವಿವರಣೆ ಹಾಗೂ ಇಷ್ಟಪಡುವ ಆಟ?

ನಂಗೆ ಕಥೆ ಕಾದಂಬರಿ ಓದುದು ಅದರಲ್ಲಿ ಮುಖ್ಯವಾಗಿ ಪತ್ತೆದಾರಿ ಕಾದಂಬರಿ ಓದುದು ಕೇರಂ ಆಟ ಮತ್ತೆ ಕ್ರಿಕೇಟ್, ಹಾಕಿ, ವಾಲಿಬಾಲ್ ನೋಡಿಕೆ ತುಂಬಾ ಇಷ್ಟ.

8) ಈಗ ನರಹಂತಕ ವೀರಪ್ಪನ್, ಡಾ. ರಾಜ್ ಕುಮಾರರನ್ನ ಅಪಹರಿಸಿ ತುಂಬಾ ದಿನ ಆತ್ ಸರಕಾರ ಪೋಲಿಸ್ ಪಡೆ ಬೇಡತ್ತಾ ಒಳೊ. ಆದರೆ ಪೋಲಿಸ್ ಪಡೆ ಇಲ್ಲದೇ ವೀರಪ್ಪನ್ ಹಿಡಿಯಕ್ಕೆ ಸಾಧ್ಯನಾ? ಅದರ ಬಗ್ಗೆ ಮತ್ತೆ ನಿಮ್ಮನ ಸರಕಾರವು ವೀರಪ್ಪನ ಹಿಡಿಯೋಕೆ ಅಯೋಜಿಸಿರೇ ನೀವು ಹೊರಡಿಕೆ ತಯಾರಾ?

ಪೋಲಿಸ್ ಪಡೆ ಇಲ್ಲದೆ ವೀರಪ್ಪನ ಹಿಡಿಯೋಕೆ ಸಾಧ್ಯ ಆದುಲ್ಲೇ. ಆದರೆ ಪೋಲಿಸ್ ಪಡೆ ಪಣ ತೊಟ್ಟದೇ ಆದರೇ ಒಂದು ವೀರಪ್ಪನ್ ಅಲ್ಲ ಅವರಂತಹ ಹತ್ತ್ ವೀರಪ್ಪನ್ ಹಿಡಿಯಕ್‌ತ್ತಾ ಧೈರ್ಯದಿಂದ ಹೇಳುವೆ. ಸರಕಾರದಿಂದ ನನ್ನನ್ನ ಅಯೋಜಿಸಿರೆ ಖಂಡಿತವಾಗಿ ಎದೆಗುಂದೆ ನಾನ್ ಹೋಗುವೆ.

ಈ ವರೆಗೆ ಅಪರಾಧ ಪತ್ತೆದಳ ಮಡಿಕೇರಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಪೇದೆ (Head Constable) ಸೀತರಾಮನವರ ಕಾರ್ಯಸಾಧನೆ ಅಪಾರವಾಗಿದ್ದು ಕೊಡಗಿನ ಗೌಡ ಜನರ ಮನಸ್ಸಿಗೆ ಪಾತ್ರರಾಗಿ ಇಂತಹ ಸನ್ನಿವೇಶಗಳನ್ನ ಅನುಭವಿಸಿ ನಮ್ಮ ಕೊಡಗು ಗೌಡ ಜನರ ಹೆಮ್ಮೆಯ ದೀಮಂತ ವ್ಯಕ್ತಿಯಾಗಿ ಸೇವೆ ಸಲ್ಲಿಸಿ ಇನ್ನು ಮುಂದೆ ಕೂಡ ಕೊಡಗು ಅಲ್ಲದೆ, ರಾಜ್ಯ ಹಾಗೂ ರಾಷ್ಟ್ರಕ್ಕೆ ಕೀರ್ತಿವಂತರಾಗಿ ಎಂದು ನಿಮಗೂ ಹಾಗೂ ನಿಮ್ಮ ಕುಟುಂಬ ವರ್ಗಕ್ಕೂ ಆಯುಷ್ಯ ಆರೋಗ್ಯ ಕೊಟ್ಟು ವೆಂಕಟರಮಣ ದೇವರ ಕೃಪೆಯಿರಲಿ ಎಂದು ನಾನು ಹಾರೈಸುತ್ತೇನೆ.

**ಲೇಖನ : ಅಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.**

## ಶುಭ ವಿವಾಹ

ಕೊಯನಾಡಿನ ಪೆರುಂಬಾರು ಗುತ್ತಿಮುಂಡನ ಚಂದ್ರಶೇಖರ್‌ರವರ ಮಗಳು **ರಾಧ** ಇವರ ವಿವಾಹವು ಸೋಮವಾರ ಪೇಟೆ ತಾಲ್ಲೂಕು ಮಾಲಂಬಿ ದಿ. ಪೊನ್ನಪ್ಪನವರ ಮಗ **ರಾಜು** ರವರೊಂದಿಗೆ ದಿನಾಂಕ 23-8-2000ನೇ ಬುಧವಾರ ವಧುವಿನ ಸ್ವಗೃಹದಲ್ಲಿ ನಡೆಯಿತು.

**ಗಿರೀಶ್‌ಕುಮಾರ್, ಕೊಯನಾಡು.**

## ಯಾರ ಬೇಟೆ?

– ಬಾರಿಯಂಡ ಜೋಯಪ್ಪ

ಸುಳುಗೋಡಿನ ಪಕ್ಕದ ಕಾಡಿನಲ್ಲಿ ಜೋಡುಕಟ್ಟೆ ಕೆರೆ. ಆನೆ, ಕಡವೆ, ಜಿಂಕೆ, ಕಾಡು ಹಂದಿ ಇವಕ್ಕೆಲ್ಲ ಬೇಸಗೆಯಲ್ಲೂ ತಂಪು ನೀಡುವ ತಾಣ. ಆ ಕೆರೆಯ ಪಕ್ಕದಲ್ಲೇ ಬೇಟೆಗಾರ ಮಣಿಯ ಮನೆ.

ಮಣಿ ಅಂಥ ಗಟ್ಟಿಮುಟ್ಟಾದ ಆಳಲ್ಲ. ಆದರೆ ಆವನ ಗುರಿ ಬಾನಲ್ಲಿ ಹಾರುವ ಸೂರ್ಯ ನಮಸ್ಕಾರದ ಹಕ್ಕಿಯನ್ನೂ ಬಿಡುವುದಿಲ್ಲ. ಇಂಥ ಗುರಿ ಅವನ ಸಂಸಾರಕ್ಕೆ ಮಾತ್ರ ಪ್ರಯೋಜನವಾಗಿಲ್ಲ. ಹೆಂಡತಿಯೇ ಸಂಸಾರ ನಿಬಾಯಿಸಬೇಕು.

ನಾಲಗೆಗೆ ಒಗ್ಗದ ಪ್ರಾಣಿಯನ್ನು ಇವನ ಕೋವಿಯೂ ಬಯಸುತ್ತಿರಲಿಲ್ಲ. ಕೋವಿ ಇವನದಲ್ಲದಿದ್ದರೂ ತನ್ನದೇ ಅನ್ನುವಂತೆ ಜೋಪಾನ ಮಾಡುತ್ತಿದ್ದ. ಒಂದು ರಾತ್ರಿ ಹಂದಿಯೆಂದು ತಪ್ಪು ತಿಳಿದು ಹುಲಿಯನ್ನು ಹೊಡೆದಿದ್ದ. ಅದಕ್ಕೆ ಅಂವ ಖುಷಿ ಪಟ್ಟಿಲ್ಲ. 'ದರಿದ್ರದ್ದು ಬಂದು ಸಿಕ್ಕಿಕೊಂಡಿತು' ಅಂತ ಬಯ್ದ. ಗುಂಡು ಹೊಡೆದ ಅದೇ ಸ್ಥಳದಲ್ಲಿ ಮತ್ತೆ ಅಂದು ಬೇಟೆಯಾಗದೆಂದು ಗೊಣಗುತ್ತ ಮನೆಗೆ ಬಂದ. ತಾನು ಹೊಡೆದ ಆ ಹುಲಿಯ ಚರ್ಮ ಒಡೆಯನ ಮೇಜನ್ನಲಂಕರಿಸಿತು. ಅದರ ಉಗುರು ಮಕ್ಕಳ ಕೊರಳ ಆಭರಣವಾಯ್ತು!

ಒಂದು ರಾತ್ರಿ ಹೀಗಾಯ್ತು :

ಬೇಂಗೆ ಮರದ ಬೇರಿನ ಸೊನೆಯನ್ನು ನೆಕ್ಕಲು ಹಂದಿಗಳು ಬರುತ್ತಿದ್ದವು. ಅವುಗಳು ಸೊನೆಯನ್ನು ನೆಕ್ಕುವುದಲ್ಲದೆ ಅದೇ ಮರದ ಕಾಂಡಕ್ಕೆ ಮೈಯನ್ನು ಉಜ್ಜಿಕೊಳ್ಳುತ್ತಿದ್ದವು. ಇದನ್ನರಿತ ಮಣಿ ಆ ಮರದ ಒತ್ತಿನಲ್ಲಿದ್ದ ತಪ್ಲೆ ಮರದಲ್ಲಿ ಒಳ ಕಟ್ಟಿದ. ರಾತ್ರಿ ಕಾದು ಕುಳಿತ. ಕೋಳಿ ಕೂಗುವ ಹೊತ್ತಿರಬಹುದು. ಮಂಜಿನ ಹನಿಗಳು ತಟಪಟನೆ ಉದುರುತ್ತಿದ್ದವು. ಕುಳಿತಲ್ಲೇ ಸರಿದಾಡಿ ಕೊಂಡ. ನಳಿಕೆಯನ್ನು ಉಜ್ಜಿದ. ಚಳಿಯಾಗಲು ಇನ್ನೂ ಮುದ್ದೆಯಾಗಿ ಕುಳಿತ. 'ಬರ್ ಬರ್'ಅಂತ ಉಜ್ಜಿಕೊಳ್ಳುವ ಸದ್ದು ಮಣಿಯನ್ನು ಎಚ್ಚರಿಸಿತು. 'ಓ ಒಂಟಿಗ ಹಂದಿ ಬಂತೂಂತ ಕಾಣುತ್ತೆ' ಅವನ ಒಳಮನ ಉಬ್ಬಿತು. ಅತ್ತಕಡೆ ಕೋವಿಯನ್ನೆತ್ತಿಕೊಂಡ. ಹಂದಿ ಉಜ್ಜಿಕೊಳ್ಳುವಾಗ ಗುಂಡು ಹೊಡೆಯುವುದು ಕಷ್ಟ. ಈಗ ಅಷ್ಟು ಅರ್ಜೆಂಟಾಗಿ ಗುಂಡು ಹೊಡೆಯಬೇಕಾಗಿಲ್ಲ. ಏಕೆಂದರೆ ಅದು ಹಾಗೆ ಉಜ್ಜಿಕೊಂಡ ಬಳಿಕ ಬೇಂಗೆ ಸೊನೆ ನೆಕ್ಕಲು ಬಂದೇ ಬರುತ್ತದೆ. ಆ ಬೇರಿನತ್ತ ಹಂದಿ ಬಂದರೆ ಸರಿಯಾಗಿ ಹೊಡೆಯ ಬಹುದೆಂದುಕೊಂಡ. ಅದರ ಬೇರು ಬೆಳದಿಂಗಳಲ್ಲಿ ಚೆನ್ನಾಗಿ ಕಾಣುತ್ತಿತ್ತು.

ಹಂದಿ ಉಜ್ಜಿಕೊಳ್ಳುವ ಕಾರ್ಯವನ್ನು ಮುಗಿಸಿತು. ಒಂದೆರಡು ಬಾರಿ 'ಚಪ್ ಚಪ್' ಅಂತ ಬಾಯಿ ಚಪ್ಪಿತು. ಬೇಟೆಗಾರನ ಇರವನ್ನು ತಿಳಿದೋ ಅಥವಾ 'ನಾನು ಬರುತ್ತಿದ್ದೇನೆ ದಾರಿ ಬಿಡಿ' ಅಂತಲೋ ಏನೋ. ಅದು ಹಾಗೆ ಮಾಡಿ ಮೆಲ್ಲನೆ ಬೇರಿನತ್ತ ಬಂದಿತು. "ಅಬ್ಬಾ! ಮರಿ ಕೋಣದಂಥ ಹಂದಿ!" ಸಕತ್ತಾದ ಒಂಟಿಗ. ಅಡ್ಡಲಾಗಿ ನಿಂತು ಸೊನೆ ನೆಕ್ಕತೊಡಗಿತು. ಮಣಿ ಅತ್ತ ಗುರಿ ಹಿಡಿದ. ಕೋವಿಯ ತುದಿಯಲ್ಲಿ ಸುಣ್ಣದಿಂದ ಗುರುತು ಮಾಡಿದ 'ನೊಣ' ಮಂಜಿನ ಹನಿಯೊಡನೆ ಮಾಸಿಹೋಗಿತ್ತು. ಆದರೂ ಅಂದಾಜು ಮಾಡಿ ಗುರಿಯನ್ನು ಒಪ್ಪಿಸಿ ಟ್ರಿಗರನ್ನು ಅದುಮಿದ. ಅದರ ಗಾತ್ರವ ನೋಡಿ ಕೋವಿ ಹೆದರಿತೋ ಅಥವಾ ಮಣಿ ಹೆದರಿದನೋ! ಟ್ರಿಗರ್ ಬೀಳಲಿಲ್ಲ. ಮತ್ತೊಮ್ಮೆ ಅದುಮಿದ. ಅವನ ಎರಡೂ ಕಣ್ಣುಗಳು ಮುಚ್ಚಿ ಹೋದವು. ಅರೆ! ಇದೇನು ಅದುಮಿದರೂ 'ಕುದುರೆ' ಬೀಳಲಿಲ್ಲ ಲ್ಲೆಂದು ತಬ್ಬಿಬ್ಬಾದ. ಅಷ್ಟು ಹೊತ್ತಿಗೆ ಹಂದಿ ನೆಕ್ಕುತ್ತಿದ್ದುದನ್ನು ನಿಲ್ಲಿಸಿ ಮೈ ನಿಮಿರಿಸಿಕೊಂಡು ಬಾಯಿ ಚಪ್ಪರಿಸಿ ಕಟಕಟನೆ ಹಲ್ಲು ಕಡಿಯಿತು. ಅದರ ಬಾಯಿಂದ ಹೊರಟ ಕೋರೆಗಳು ತಿಂಗಳು ಬೆಳಕಿನಲ್ಲಿ ಹೊಳೆಯುತ್ತಿದ್ದವು. ಮಣಿ 'ಉಂಡೆ' ಹಾಕಿದ್ದ ತೋಟಾವನ್ನೇ ಲೋಡ್ ಮಾಡಿದ್ದ. ಆ ಲೋಡಿಗೆ ಹಂದಿಯೇ ಅಲ್ಲ, ಆನೆಯೂ ಉರುಳೀತು. ಇದರ ಆಟ ನಿಲ್ಲಿಸುತ್ತೇನೆಂದು ಮಣಿ ಮತ್ತೊಮ್ಮೆ ಗುರಿ ಹಿಡಿದು 'ಕೈ ಪಾರೆಗೆ' ಗುಂಡು ಹೊಡೆದ. ಗುಂಡು ಸಿಡಿಯುವುದಕ್ಕೂ ಹಂದಿಯ ಮೈಯಿಂದ ಬೆಂಕಿ 'ಬುಗ್' ಎಂದು ಮೇಲೇಳುವುದಕ್ಕೂ ಸರಿಯಾಯ್ತು. ಹಂದಿ ಬೆಂಕಿಯನ್ನು ತೋರಿ ಕಾಡನ್ನೆಲ್ಲಾ ನುಚ್ಚುನೂರು ಮಾಡುವಂತೆ ಕಚ್ಚಿ ಕಚ್ಚಿ ಹಾಕುತ್ತ ಕಟಕಟನೆ ಹಲ್ಲು ಕಡಿದುಕೊಳ್ಳುತ್ತ ಬಾಯಿ ಚಪ್ಪರಿಸಿತು. ಮಣಿ ಕುಳಿತಿದ್ದ ಮರಕ್ಕೆ ತಿವಿದು ಕಾಡಿನಲ್ಲಿ ಕಣ್ಮರೆಯಾಯಿತು.

ಮಣಿ ಚಳಿಯಲ್ಲೂ ಬೆವತ. ಹಂದಿಯ ಮೈ ಮೇಲೆ ಬೆಂಕಿ ಬರಲು ಕಾರಣವೇನು? ಒಂಟಿಗ ಹಂದಿಗಳ ಮೇಲೆ ಸಾಮಾನ್ಯವಾಗಿ 'ಚವುಂಡಿ' ಕುಳಿತಿರುತ್ತದೆ, ಗುಂಡು ಹಾರಿದಾಗ ತನ್ನ ಇರವನ್ನು ಅದು ಬೆಂಕಿಯ ರೂಪದಲ್ಲಿ ತೋರಿಸುತ್ತದೆ. ಅಂಥವಕ್ಕೆ ಗುಂಡು ತಾಗದು. ಈ ರೀತಿಯ ಮಾತುಗಳನ್ನು ಕೆಲವರು ಆಡಿದ್ದನ್ನು ಮಣಿ ಕೇಳಿದ್ದ. ಇಂದು ಅಂಥದ್ದೇ ನಡೆದು ಹೋಯಿತು. ಅದಕ್ಕೆ ಹೀಗಾಯ್ತು ಅಂದುಕೊಂಡು ಹಂದಿಯ ಒರಟು ಮೈಯಲ್ಲಿ ಒಸರುವ ಕೊಬ್ಬಿಗೆ ಗುಂಡು ತಾಗಿ ಜಾರುವಾಗ ಘರ್ಷಣೆಯಿಂದ ಬೆಂಕಿ ಹೊತ್ತುತ್ತದೆ. ಮಣಿ ಸ್ವಲ್ಪ ಕೆಳಗೆ ಕುಳಿತಿದ್ದರೆ ರೋಷಗೊಂಡ ಹಂದಿಯು ಅವನನ್ನು ಬಲಿ ತೆಗೆದುಕೊಳ್ಳುತ್ತಿತ್ತು.

ಇನ್ನು ಇಲ್ಲಿ ಕುಳಿತು ಪ್ರಯೋಜನವಿಲ್ಲವೆಂದು ಮರದಿಂದ ಇಳಿದ.

ಬೆಳಿಗ್ಗೆ ಕೋವಿಯ ಮಾಲೀಕನಿಗೆ ಸುದ್ದಿ ಮುಟ್ಟಿಸಿದ. ಆತ ಮಣಿಯ ನೆರವಿಗೆ ಮೂವರನ್ನು ಜೊತೆ ಮಾಡಿದ. ಕಾಡಿಗೆ ನುಗ್ಗಿ ಹಂದಿಯನ್ನು ಹುಡುಕುವ ಕೆಲಸಕ್ಕೆ ರೆಡಿಯಾದರು. ರಾತ್ರಿ ಗುಂಡು ಹೊಡೆದ ಜಾಗವನ್ನು ಪರೀಕ್ಷಿಸಿದ. ಗುಂಡು ತಪ್ಪಿರಲಿಲ್ಲ. ಸರಿಯಾಗಿ ಬಡಿದಿದೆ ಎಂದು ಖಾತರಿಯಾಯಿತು. 'ಹಂದಿ ಅರೆ ಜೀವವಾಗಿರಬಹುದು. ಜಾಗ್ರತೆ, ಕಂಡಾಕ್ಷಣ ಗುಂಡು ಹೊಡೆಯಿರಿ' ಎಂದು ಆ ಬಗ್ಗೆ ವಿವರಣೆ ನೀಡಿದ. ಮಣಿ ಕೋವಿಯನ್ನು ಅಣಿಮಾಡಿಕೊಂಡು ಕಳೆದ ರಾತ್ರಿ ಹಂದಿ ಓಡಿದ್ದ ಕಡೆ ಹೊರಟ. ಜೊತೆಗೊಬ್ಬನಿರಲಿ ಎಂದು ಗಣಿ ಎಬವನನ್ನು ಕರೆದುಕೊಂಡ.

ಗಣಿ ಬೇಟೆಯಲ್ಲಿ ನುರಿತವನಲ್ಲ. ಆದರೂ ಕೈಯಲ್ಲೊಂದು ಕೋವಿಯಿತ್ತು.

ಹಂದಿ ಓಡಿದ ದಾರಿಯಲ್ಲೇ ಇವರಿಬ್ಬರು ಹೊರಟರು. ಆ ತಡ್ಲೆ ಮರದಿಂದ ಸ್ವಲ್ಪ ದೂರದಲ್ಲಿ ರಕ್ತ ಬಿದ್ದಿದೆ. ಹಂದಿಗೆ ಗುಂಡು ತಾಗಿದ್ದಿರ ಸಾಕ್ಷಿ ಕಂಡು ಹಿಗ್ಗಿದ. ಇಲ್ಲೇ ಎಲ್ಲಾದರೂ ಮಲಗಿರಬಹುದು ಅಥವಾ ಸತ್ತಿರಬಹುದು. ಕಣ್ಣಲ್ಲಿ ಕಣ್ಣಿಟ್ಟು ಮುಂದೆ ಸಾಗಿದರು. ಮಣಿ ಬೇಟೆ ಕೊತ್ತಿಯನ್ನೆಳೆದುಕೊಂಡೇ ಇದ್ದಾನೆ. ಹಿಂದೆ ಇದ್ದ ಗಣಿಯೂ ಬೇಟೆ ಕೊತ್ತಿಯನ್ನೆಳೆದು ನಿಲ್ಲಿಸಿಕೊಂಡಿದ್ದಾನೆ. ಸದ್ದು ಬಂದೆಡೆ ಗುಂಡು ಹೊಡೆವ ಹುನ್ನಾರ ಗಣಿಯದು. ಅಂತೂ ಇಬ್ಬರ ತೋರು ಬೆರಳು ಟ್ರಿಗರಿನ ಮೇಲೆ. ಹೀಗೆ ಸಾಗುತ್ತಿರಲು ರಕ್ತತದ ಕಲೆ ಒಂದು ಮುಳ್ಳು ಪೊದೆಯತ್ತ ಸಾಗಿದೆ. ರಕ್ತದ ಮಾಮೂಲಿ ಕಲೆಯಲ್ಲ, ಬದಲಿಗೆ 'ನಂಬುಗೆ' ಸುರಿದಂತಿದೆ. ಒಂದೋ ಅದು ಪೊದೆಯೊಳಗೆ ಅಥವಾ ಅದರಾಚೆ ಸತ್ತಿರಬಹುದು. ಇರಲಿ, ಈ ಪೊದೆಯನ್ನಂತೂ ನೋಡಲೇ ಬೇಕು. ಆದರೆ ನಡೆದು ಹೋಗಲಾಗದು. ಬಗ್ಗಿ ಹೋಗಬೇಕು. ಬಗ್ಗಿದರೂ ಆಗದು. ಕುಕ್ಕರ ಕಾಲಲ್ಲಿ ಕುಳಿತು ಸಾಗಬೇಕು. ಆದೂ ಆಗುತ್ತಿಲ್ಲ. ಮಲಗಬೇಕು. ತೆವಳಿ ತೆವಳಿ ಸಾಗಬೇಕು. ಅಂಥಾ ಜಿಗ್ಗಿನೊಳಗೆ ತೆವಳುತ್ತಾ ತೆವಳುತ್ತಾ ಮಣಿ ಮುಂದೆ ಹೋಗುತ್ತಿದ್ದಾನೆ. ಗಣಿಯೂ ಹಾಗೇ ಹಿಂಬಾಲಿಸುತ್ತಿದ್ದಾನೆ. ಪೊದೆಯ ನಡುಭಾಗಕ್ಕೆ ತಲುಪಿದರು. ಸುಸ್ತಾಯಿತು. ನಿಲ್ಲಬೇಕೆನಿಸಿತು. ಆದರೆ ಚೂರಿ ಮುಳ್ಳು ಮೇಲೇಳಲು ಬಿಡದು. ತೆವಳಿದಂತೆ ಒಣ ಮುಳ್ಳು ಮೊಣಕೈ, ಮಂಡಿಗೆ ಚುಚ್ಚಿಕೊಳ್ಳುತ್ತಿತ್ತು. 'ಹಾಳು ಹಂದಿ ಇಂಥ ಜಿಗ್ಗಿನೊಳಗೆ ಬರಬೇಕಿತ್ತಾ" ಎಂದುಕೊಂಡ. ತನ್ನ ಹಿಂದೆ ಇದ್ದ ಗಣಿಗಂತೂ "ಈ ನರಕದ ಬೇಟೆ ನನಗೇಕೆ ಬೇಕಿತ್ತು" ಅಂತ ಮಂತ್ರ ಹೇಳಿ ಕೊಳ್ಳುವಂತಾಗಿತ್ತು. ಕೋವಿಯನ್ನು ನೆಲದಲ್ಲಿ ಇಡುವಂತಿಲ್ಲ. ಮೊಣಕೈಗಳು, ಮಂಡಿಗಳು ಮುಂದೆ ಹೋಗಲು ಸಾಧ್ಯವೇ ಇಲ್ಲವೆಂದು ಸ್ಟ್ರೈಕ್ ಮಾಡುತ್ತಿದ್ದವು. ಆದರೇನು? ನಾಲಗೆಯ ರುಚಿ ಹಾಗೆ ನಿಲ್ಲಲು ಬಿಡುತ್ತಿರಲಿಲ್ಲ. ನೊರೆ ರಕ್ತವನ್ನು ಕಂಡು ಮನ ಕುಣಿಯುತ್ತಿತ್ತು.

ಗಣಿಯು ಚತುಷ್ಪಾದಿಯಾಗಿ ಕಾಲೆಳೆದು ಕೈಯೆಳೆದು ಸುಸ್ತಾದ. ಬಲಗೈಯ ತೋರುಬೆರಳು ಮಾತ್ರ ಟ್ರಿಗರಿನ ಮೇಲೆ ಅದುಮುವ ಸ್ಥಿತಿಯಲ್ಲೇ ಇದೆ. ಹೀಗೆ ಸಾಗುತ್ತಿರಬೇಕಾದರೆ ಗಣಿಯ ಬಲತೋಳಿನ ಮೇಲೊಂದು ಮುಳ್ಳು ಚುಚ್ಚಿತು. ಟ್ರಿಗರಿನ ಮೇಲಿದ್ದ ಬೆರಳು ಅದುಮಿ ಹೋಯಿತು ! ಗುಂಡು ಸಿಡಿದೇ ಬಿಟ್ಟಿತು. ಸಿಡಿದ ಗುಂಡು ಮುಂದೆ ತೆವಳಿ ಸಾಗುತಿದ್ದ ಮಣಿಗೆ ಬಡಿಯಬೇಕೆ?

ಗುಂಡಿನ ಸದ್ದು ಕೇಳಿ ದೂರದಲ್ಲಿದ್ದ ಇನ್ನೊಂದು ತಂಡ ಸಧ್ಯ ಹಂದಿಗೆ ಗುಂಡು ಹೊಡೆದರಲ್ಲ ಅಂದುಕೊಂಡರು. ಪೊದೆಯತ್ತ ನುಗ್ಗಬೇಕೆನ್ನುವಾಗ "ಅಯ್ಯೋ.... ಅಯ್ಯಯ್ಯೋ... ಅಯ್ಯೋ...." ಎಂಬ ಆರ್ತನಾದ! ಇವರು ಪೊದೆಯೊಳಗೆ ಸರಸರನೆ ನುಗ್ಗಿದರು. ಮಣಿ ಉರಿ ತಾಳಲಾರದೆ ಉರುಳಾಡಿ ರೋದಿಸುತ್ತಿದ್ದ. ಇವನ ಸ್ಥಿತಿಯನ್ನು ಕಂಡ ಉಳಿದವರು ಚಿಂತೆಗೀಡಾದರು.

ಪಂಚೆಯನ್ನು ಹರಿದು ಗಾಯಕ್ಕೆ ಕಟ್ಟಿದರು. ಮಣಿ ಪ್ರಜ್ಞೆ ಕಳೆದುಕೊಂಡ. ಅವನನ್ನು ಹೊತ್ತು ಹೊರತರಲಾರದೆ ಮುಳ್ಳಿನ ಪೊದೆಯಿಂದ ದರದರನೆ ಎಳೆದರು. ಮುಳ್ಳು ದಾರಿಯ ಮೇಲೆ ಬಿದ್ದಿದ್ದ ಹಂದಿಯ ರಕ್ತದ ಜೊತೆ ಮಣಿಯ ರಕ್ತ ಕೂಡ ಬೆರೆತು ಹೋಯಿತು.

---

## ಭಾರತ ಸ್ವಾತಂತ್ರವಾದಾಗ

ಜೈ ಶ್ರೀವರ ದೈವವೆ ಜೈ ಪಾವನ ರಂಗಿನ ವರ್ಣಚ್ಛಾದಿತ
ತ್ರಿವರ್ಣ ರಂಜಿತ ಚ್ಯೋದ ಕವೀ ಜೈ ಶ್ರೀವರ ದೈವವೆ ಜೈ||
ಸಸ್ಯಶ್ಯಾಮಲ ವರ್ಣಚ್ಛಾದಿತ ಪಚ್ಚೆಯ ಬಣ್ಣ|
ಸಿರಿಯನು ತೋರುವ ಹೊಂಬಣ್ಣವಿದೂ||
ಕೇಂದ್ರ ವಿರಾಜಿತ ಅಶೋಕ ಚಕ್ರ
ರಾರಾಜಿಸಲಿ ದಿವ್ಯ ಪತಾಕೆ ಜೈ||
ಭಾರತ ಮಾತೆಯ ಘನತೆಯ ಸಾರಿ
ಭಾರತೀಯರೊಳು ಹರುಷವ ಬೀರಿ
ಹಿಂದೂ ಮುಸ್ಲಿಂ ಐಕ್ಯವ ಹರಸಿ
ಅಖಂಡ ಹಿಂದು ಸ್ಥಾನವ ಗಳಿಸಿ ಜೈ||
ಭಾರತ ವೀರರ ಪ್ರತಿಭೆಯ ಬೀರಿ
ಪದಾಧಿಕಾರವ ಹೋರಾಡಿ
ಸ್ವಾತಂತ್ರೋದಯವನು ಸಾರಿ
ನವ ಚೈತನ್ಯವನು ಜನತೆಯೊಳು ಹರಡಿ ಜೈ||
ಜೈ ಶ್ರೀವರ ದೈವವೆ ಜೈ ಪಾವನ ರಂಗಿನ ವರ್ಣಚ್ಛಾಧಿತ
ತ್ರಿವರ್ಣ ರಂಜಿತ ಚ್ಯೋದ ಕವೀ ಜೈ ಶ್ರೀವರ ದೈವವೆ ಜೈ||

– ರಚನೆ ಬೈತಡ್ಕ ಜಾನಕಿ

## ನಮ್ಮೆಲ್ಲರ ಕೊಡಗು ಸಂಗಾತಿ

ಹೊರ ನಾಡಿನ ಮಧ್ಯದಲ್ಲಿ
ಹೊನ್ನು ನಾಡಿನ ತೀರದಲ್ಲಿ
ಪಕ್ಷಿಗಳ ಚಿಲಿಪಿಲಿ ಸದ್ದಲ್ಲಿ
"ಬೆಳಗಿತು ನಮ್ಮ ಸಂಗಾತಿ"
ಕವಿ ಕೋಗಿಲೆಯ ಇಂಪಾದ ಧ್ವನಿಯಲ್ಲಿ
ನೀರಿನ ಝುಳ ಝುಳ ಸದ್ದಲ್ಲಿ
ಸಿಂಹ ರಾಜನ ಗರ್ಜನೆಯಲ್ಲಿ
"ಬೆಳಗಿತು ನಮ್ಮ ಕೊಡಗು ಸಂಗಾತಿ"
ಹೂ ಗಿಡಗಳ ಸೊಗಸಾದ ತೋಟದಲ್ಲಿ
ಹೊನಲ ಜಲಪಾತದಲ್ಲಿ
ಬೆಟ್ಟ ಗುಡ್ಡಗಳ ಮಧ್ಯದಲ್ಲಿ
ಹೆದರದೆ ಬರೆದೆವು ಕವಿತೆಯ
ಬೆಳಗಲಿ ನಮ್ಮ ಸಂಗಾತಿ
ನಮ್ಮೆಲ್ಲರ ಕೊಡಗು ಸಂಗಾತಿ

– ಆನೇರ ಶೋಭಾ ಬಾಲಕೃಷ್ಣ,
ಚೇರಂಬಾಣೆ.

---

ಹೇಳುವುದು ಆಚಾರ, ಮಾಡುವುದು ಅನಾಚಾರ

## ಕಾಲೇಜಿಗೋದ ಚೋಮುಣಿ ಹೈದ

ಚೋಮುಣಿ ಹೈದಂವ ಹೈಸ್ಕೂಲ್ ಮುಕ್ಸಿದ್ ಕಾಲೇಜಿಗೋತಿತ್|
ಶಾಲೆಲಿ ಕೂಡಾ ಓದಿಕೆ ಚೋಮುಣಿ ಬಾರಿ ಹುಷಾರಿತ್|
ಅಂವ ಕ್ಲಾಸಿಗೆ ಫಸ್ಟಿತ್| ಅಂವನ ಗುಣನು ಲ್ಯಾಕಿತ್||
ಆಟ ಓಟಲಿಕೂಡಾ ಚೋಮುಣಿ ಎಲ್ಲಾ ಗೆಲ್‌ತಿತ್|
ಶಾಲೆಗೆ ಹೋಕನ ಚೋಮುಣಿ ಹೈದಂಗೆ ಬಾರಿ ಹೆಸರಿತ್|
ಹಾಂಗೆ ಶಾಲೆಗು ಹೆಸರಿತ್| ಹೆಸರ್ ಊರ್‌ಲುಹರ್‍ದಿತ್|| ಚೋ||

ಚೋಮುಣಿ ಕಾಲೇಜ್‌ಗೋಗಿದ್ ಒಳ್ಳೊಳ್ಳೆ ಗೂಡೆಗಳ ಕಂಡತ್|
ಗೂಡೆಗಳ ಕಂಡ್‌ದ್ ಹೈದಂಗೆ ಅವಂಗೆ ಬಾರಿ ಕುಸಿ ಆತ್|
ಅವರನೋಡಿಕೆ ಸುರ್‌ಮಾಡ್| ಅವಂಗೆ ಓದುದೆ ಮರ್‍ತೋತ್||
ಅವನಾ ಕ್ಲಾಸ್‌ಲಿ ಗೂಡೆಗ ಇದ್ದದ್ ಒಟ್ಟೆಗೆ ಬರಿ ಹತ್|
ಚೋಮುಣಿ ಗೂಡೆಗಳ ಹಿಂದೆನೆ ಹೋಗಿಬ್ ಒಂದಕೆ ಬಲೆ ಬೀಸ್|
ಆ ಗೂಡೆನು ಒಪ್ಪಿತ್| ಇಬ್ಬರ ಲವ್‌ನು ಬೆಳ್ದೋತ್...||ಚೋ||

ಬೆಳ್ಳಂಗೆ ತೆಳ್ಳಂಗೆ ಎತ್ತರ ಇರುವ ಗೂಡೆನು ಪೊರ್‍ಲಿತ್|
ಎತ್ತಂದ ನೋಡಿರು ಗೂಡೆನ ಪೊರ್ಲು ಎದ್ದ್ ಕಾಣ್ತಿತ್|
ಗೂಡೆ ಮಣ ಮಣ ಹೊಳೆತಿತ್| ಇಂವ ಲವ್‌ಲಿ ಪಾಸಾತ್|
ಅಂತೂ ಚೋಮುಣಿ ಕಾಲೇಜ್ ಸೇರಿದ್ ಮನ್‌ಸ್‌ಗೆ ಕುಸಿ ಆತ್|
ಗೂಡೆಗೆ ಬೇಕಾಗಿ ಅಪ್ಪನ ಜೇಬುಂದ ದುಡ್ಡುನು ಕದಿತ್ತಿತ್||ಚೋ||
ವಿಷಯ ಮನೆವ್ಕೂ ಗೊತ್ತಾತ್| ಅಪ್ಪನ ಪೆಟಿಗೆನು ಕಾಲ್ಯಾತ್||

ಕಾಲೇಜಿಗೋನೆಂತ ಚೋಮುಣಿ ಪಕ್ಕದ ತೋಟಕು ನುಗ್ಗ್‌ತಿತ್|
ತೋಟಂದ ಬಾಕನ ಜೋಬುಲಿ ತುಂಬಾ ಯಾಲಕ್ಕಿ ತಾ ತಿತ್|
ಮಾರಿದ್ ಬೈನೆಕಳ್ಳ್ ಕುಡಿತಿತ್| ಮತ್ತೆ ಬೀಡಿ ಸೇದ್‌ತ್ತಿತ್||
ಚೋಮುಣಿನ ಕಾಲೇಜಿಗೆ ಕಳ್ಸಿದ್ ಪಾಪ ಅಪ್ಪಂಗೆ ಬೇಜರಾತ್|
ಚೋಮುಣಿ ಮಾಡಿದ ಕೆಲ್ಸನ ನೋಡಿದ್ ಕಾಲೇಜ್ ಬುಡ್ಸಾತ್|
ಆ ವರ್ಸನು ಫೈಲಾತ್| ಮತ್ತೆ ಗೂಡೆನು ತೊಪ್ಪೋತ್||ಚೊ||

ಚೋಮುಣಿ ಈಗ ಊರ್‌ಗೆ ಬಂದ್‌ದ್ ಗದ್ದೆಲಿ ಹೂಡ್ತುಟ್ಟು|
ಕೆಸರ್‌ಲಿ ಕಷ್ಟ ಬಂದ್‌ದ್ ಚೋಮುಣಿ ನಾಟಿಮಾಡ್ತುಟ್ಟು|
ಲ್ಯಾಕ್‌ಲಿ ಬೆಳೆನು ತೆಗಿತುಟ್ಟು| ಈಗ ಲವುನು ಮರ್‍ತೋಗ್ಟು||
ಚೋಮುಣಿ ಪಾಪ ಹಳ್ಳವ ಹೆಂಗೊ ತೊಪ್ಪೋಗಿ ಲವ್ ಮಾಡ್|
ಗೂಡೆಗಳ ಲವ್ ಮಾಡಿರೆ ಆಗುವ ಕರ್ಚಿನು ಗೊತ್ತಾತ್|
ಊರೆಲ್ಲಾ ಸಾಲಾತ್|ಅವನ ಹೆಸರೂ ಹಾಳಾತ್||ಚೋ||

ಊರ್‌ಗೆ ಬಂದಾ ಚೋಮುಣಿಗೊಂದು ಗೂಡೆನ ನೋಡ್ಯಾತ್|
ನೋಡಿದ ಗೂಡೆನ ಚೊಮ್ಮಿಗೆ ತಂದ್ ಮದುವೆನು ಮಾಡ್ಯಾತ್|
ಈಗ ಮಕ್ಕಳು ಮೂರಾತ್| ಅದರ್‍ಲಿ ಎರ್‍ಡ್ ಹೆಣ್ಣಾತ್|
ಕಾಲೇಜಿಲಿ ಲವ್ ಮಾಡ್ವಾ ತೊಪ್ಪಿಗೆ ಹಳ್ಳಿಗೆ ಬಾಕಾತ್|
ಓದುದು ಬುಟ್ಟು ಚೋಮ್ಮಿಗೆ ಲವ್ ಎಂತಕೆ ಬೇಕಾತ್|
ಅಂವ ಸುಮ್ಮನೆ ಇರಕಾತ್| ಇಲ್ಲೆ ಪಾಠ ಓದುಕಾತ್||ಚೋ||

ರಚನೆ : ಹೊದ್ದೆಟ್ಟಿ ಭವಾನಿ ಶಂಕರ್.

## ನಿರ್ಗತಿಕ

ರಸ್ತೆಯ ಉದ್ದಕ್ಕೂ ಒಬ್ಬನೇ ಹಾಗೆಯೇ ಯೋಚಿಸುತ್ತಾ
ನಡೆದು ಹೋಗುತ್ತಿದ್ದೆ ನಾನು
ಓಡಾಡಲು ಒಂದು ಕಾರು ಇಲ್ಲ. ನನ್ನ ಹೆಸರಿನಲ್ಲಿ ಒಂದು
ಬಂಗ್ಲೆಯೂ ಇಲ್ಲ ಎಂದೆನುತ ನಾನು
ಎಂಥ ಕಷ್ಟದ ಜೀವನ್ವ ಈ ತರ ಬದುಕಿ ಏನೂ
ಪ್ರಯೋಜನವಿಲ್ಲ ಎಂದು ಯೋಚಿಸುತ್ತಿದ್ದೆನು.
ಆವಾಗ ನನ್ನ ಕಣ್ಣಿಗೆ ಒಬ್ಬ ವ್ಯಕ್ತಿ ಅಂದರೆ ಒಬ್ಬ
"ನಿರ್ಗತಿಕ "ನನ್ನ ಕಣ್ಣ ಮುಂದೆ ನಿಂತನು.
ನನಗೆ ಬಂಗ್ಲೆ ಇಲ್ಲ. ಆದರೆ ಕೊನೆ ಪಕ್ಷ
ನನಗೆ ಇರಲು ಒಂದು ಮನೆಯಾದರೂ ಇದೆ.
ಆದರೆ - ಆ " ನಿರ್ಗತಿಕ" ಒಬ್ಬಂಟಿಗನಾಗಿ ಅಲೆದಾಡುತ್ತಿದ್ದಾನೆ.
ನನಗೆ ಆಡಂಬರದ ಉಡುಗೆ ಇಲ್ಲದಿದ್ದರೂ,
ಮೈ ಮುಚ್ಚಲು ಬಟ್ಟೆಯಾದರೂ ಇದೆ.
ಆದರೆ ಆ ಪಾಪ ನಿರ್ಗತಿಕನಿಗೆ ಅದು ಇಲ್ಲ
ಓ ದೇವರೆ, ಎಂದು ಆನಂದದ ನಿಟ್ಟುಸಿರು ಬಿಟ್ಟೆ ನಾನು
ನನ್ನ ಜೀವನ ಪರಿಪೂರ್ಣ ಎಂದು ಭಾವಿಸಿದೆ ನಾನು
ಅಂದರೆ ಅದರಲ್ಲಿ ಏನೂ ಕೊರತೆ ಇಲ್ಲ ಎಂದೆಣಿಸಿದೆ ನಾನು

**ಬರೆದವರು : ಬಾರಿಕೆ ಮನೆ ತೀರ್ಥಕುಮಾರ, ಭಾಗಮಂಡಲ.**

---

## ತಿದ್ದು ಪಡಿ

ಕೊಡಗು ಸಂಗಾತಿ ಸಂಪುಟ 4 ಸಂಚಿಕೆ 19ರ ಮುಖ ಪುಟದಲ್ಲಿ ಮಿಲ್ಲೆನಿಯಂ 2000ದ ಸಿಡ್ನಿ ಒಲಂಪಿಕ್ಸ್‌ನಲ್ಲಿ 69ಕೆ.ಜಿ. ಭಾರ ಎತ್ತಿ ಭಾರತ ಮಹಿಳೆ ಅನ್ನುವುದನ್ನು 69ಕೆ.ಜಿ. ವರ್ಗದಲ್ಲಿ ಭಾರತ ಮಹಿಳೆ ಎಂದು ಓದಿಕೊಳ್ಳುವುದು. ತಾಂತ್ರಿಕ ಮುದ್ರಣ ದೋಷಕ್ಕೆ ವಿಷಾದಿಸುತ್ತೇವೆ.

**– ಸಂಪಾದಕಿ.**

---

## ನಿಧನ

ಕಾರುಗುಂದ ಗ್ರಾಮದ ಪಾಣತ್ತಲೆ ದಿ|| ಕಾರ್ಯಪ್ಪನವರ ಧರ್ಮಪತ್ನಿ ಮಾಯಮ್ಮನವರು ದಿನಾಂಕ 20-9-2000ರಲ್ಲಿ ವೈಕುಂಠವಾಸಿಯಾದರು. ಇವರಿಗೆ 87 ವರ್ಷ ಪ್ರಾಯವಾಗಿತ್ತು. ಇವರು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ ಎಂದು ತಿಳಿದು ಬಂದಿದೆ.

---

## ಸೂಕ್ತಿ

ಕೊಡಗು ಜಿಲ್ಲೆಯೇ ನಮ್ಮ ಬಾಳಿನ ಮುನ್ನುಡಿ
ಕೊಡಗು ಸಂಗಾತಿಯೇ ನಮ್ಮ ಹೃದಯದ ಕನ್ನಡಿ...

**ಸಬ್ಬಂಡ್ರ ಚಿತ್ರಾ ಕುಶಾಲಪ್ಪ**

---

**ದೊಡ್ಡವರು ಮಾಡಿದರೆ ಆಚಾರ, ಬಡವರು ಮಾಡಿದರೆ ವ್ಯಭಿಚಾರ**

## ಸಂಗಾತಿ ಭವಿಷ್ಯ : ಅಕ್ಟೋಬರ್ 16 ರಿಂದ 31, 2000 ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ :** ದೈವಾನುಕೂಲವಿದೆ. ಶತ್ರುಗಳು ದೂರವಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ ಇದೆ. ದೇವತಾರಾಧನೆ ಮಾಡಿ.

**ವೃಷಭ ರಾಶಿ :** ಗೃಹ ವಲಯದಲ್ಲಿ ನವಗ್ರಹದ ಪೂಜೆ ಮಾಡಿಕೊಂಡು ಬನ್ನಿ. ಸಂಸಾರವಲಯದಲ್ಲಿ ಆರೋಗ್ಯವು ಹದಗೆಡುವುದು. ಹಣಕಾಸಿನ ವ್ಯವಹಾರದಲ್ಲಿ ತುಸು ನೆಮ್ಮದಿ ಉಂಟಾದಿತು.

**ಮಿಥುನ ರಾಶಿ :** ಗೃಹ ವಲಯದಲ್ಲಿ ತುಸು ನೆಮ್ಮದಿ. ಶತ್ರುಗಳಿಂದ ಉಪಟಳ ತಪ್ಪಿದ್ದಲ್ಲ. ವ್ಯವಹಾರ ಉದ್ಯೋಗದಲ್ಲಿ ಸಾಧಾರಣ ಅಭಿವೃದ್ಧಿ ದೇವತಾರಾಧನೆ ಮಾಡಿಕೊಂಡು ಬನ್ನಿ.

**ಕರ್ಕಾಟಕ ರಾಶಿ :** ದೈವಾನುಕೂಲವಿಲ್ಲ. ಉದ್ಯೋಗ, ವ್ಯವಹಾರದಲ್ಲಿ ಸಾಧಾರಣ ಪ್ರಗತಿ. ಗೃಹ ವಲಯದಲ್ಲಿ ತುಸು ನೆಮ್ಮದಿ ಇರುವುದು. ಮಿತ್ರರಿಂದ ಹೊಸ ಸಮಾಚಾರ ಕೇಳಲಿದ್ದೀರಿ. ನವಗ್ರಹಗಳ ಆರಾಧನೆ ಮಾಡಿ.

**ಸಿಂಹ ರಾಶಿ :** ದೈವಾನುಕೂಲವಿದೆ. ಗೃಹ ವಲಯದಲ್ಲಿ ಸುಖ ಸಿಗುವುದು. ಹಣಕಾಸು ಸ್ವಲ್ಪ ಮಟ್ಟಿಗೆ ಕೈಗೂಡುವುದು. ಆರೋಗ್ಯದ ಬಗ್ಗೆ ಎಚ್ಚರವಿರಲಿ. ವಿಘ್ನೇಶನನ್ನು ಆರಾಧಿಸುವುದರಿಂದ ಸರ್ವ ಕಾರ್ಯಗಳಲ್ಲಿ ಯಶಸ್ಸು.

**ಕನ್ಯಾ ರಾಶಿ :** ದೈವಾನುಕೂಲವಿದೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ. ಗೃಹ ವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಹೊಸ ವಾಹನ ಖರೀದಿಸುವ ಯೋಗವಿದೆ. ವಿಷ್ಣುವಿನ ಆರಾಧನೆ ಮಾಡಿರಿ.

**ತುಲಾ ರಾಶಿ :** ದೈವಾನುಕೂಲವಿದೆ. ಗೃಹ ವಲಯದಲ್ಲಿ ಕಿರಿ ಕಿರಿ ಉಂಟಾದೀತು. ಕೈಗೊಂಡ ಕಾರ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಸಫಲತೆಯನ್ನು ಕಾಣುವಿರಿ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಸಂಭವಿಸಬಹುದು.

**ವೃಶ್ಚಿಕ ರಾಶಿ :** ಈಗ ರವಿ ಬಲವಂತೂ ಚೆನ್ನಾಗಿಯೇ ಇದೆ. ಇರುವ ಉದ್ಯೋಗದಲ್ಲಿ ಸುಧಾರಣೆ. ಹಿರಿಯರ ಸಹಕಾರ ನಿಮ್ಮ ಕಾರ್ಯ ಸಾಧನೆಗೆ ಅನುಕೂಲ. ಆದಾಯವೂ ಒದಗಿ ಸಂತಸಕ್ಕೂ ಕಾರಣ. ಕೆಲವೊಂದು ನಿಧಾನವೆಂದೆನಿಸೀತು ಬೇಸರಕ್ಕೆ ಕಾರಣವಿಲ್ಲ. ಅವಿವಾಹಿತರಿಗೆ ಗುರುಬಲ ಸಂಪೂರ್ಣ ನಿಧಾನ ಬೇಡ.

**ಧನಸ್ಸು ರಾಶಿ :** ದೈವಾನುಕೂಲವಿಲ್ಲ. ಆರೋಗ್ಯ ಹದಗೆಡುವ ಸಂಭವವಿದೆ ಹಣಕಾಸಿನ ವ್ಯವಹಾರದಲ್ಲಿ ನಷ್ಟ, ಕಿರಿಕಿರಿ ತಪ್ಪಿದ್ದಲ್ಲ. ಅಪಘಾತ ಸಂಭವವಿದೆ. ಹೊಸ ವ್ಯವಹಾರಕ್ಕೆ ಇದು ಸಕಾಲವಲ್ಲ.

**ಮಕರ ರಾಶಿ :** ದೈವಾನುಕೂಲವಿದೆ. ಹಲವು ರೀತಿಯಿಂದ ಹಣಕಾಸು ಕೈಗೂಡಿ ನೆಮ್ಮದಿ ಆಗುವುದು. ಗೃಹ ವಲಯದಲ್ಲಿ ಕಿರಿ ಕಿರಿ ಇದೆ. ಹೊಸ ವಾಹನ ಖರೀದಿ ಯೋಗವಿದೆ. ಶನಿಯಾರಾಧನೆ ಮಾಡಿರಿ.

**ಕುಂಭ ರಾಶಿ :** ದೈವಾನುಕೂಲವಿಲ್ಲ. ಗೃಹ ವಲಯದಲ್ಲಿ ತುಸು ನೆಮ್ಮದಿ. ವ್ಯಾಪಾರ ಉದ್ಯೋಗದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ. ಆರೋಗ್ಯದ ಬಗ್ಗೆ ನಿಗಾ ಇರಲಿ. ಶನಿಯಾರಾಧನೆಯಿಂದ ನೆಮ್ಮದಿ.

**ಮೀನ ರಾಶಿ :** ದೈವಾನುಕೂಲವಿಲ್ಲ. ಅನಾವಶ್ಯಕ ಪ್ರಯಾಣದಿಂದ ನೆಮ್ಮದಿ ಇಲ್ಲ. ಮಿತ್ರರೇ ಶತ್ರುವಾಗುವ ಕಾಲ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ. ಗುರುವಿನ ಆರಾಧನೆಯಿಂದ ನೆಮ್ಮದಿ.

---

12ನೇ ಪುಟದಿಂದ

| | | | |
|---|---|---|---|
| 41) | ವಂಶಿ | - | ಎಂ. ಜಿ. ಭೀಮರಾವ್ |
| 42) | ವೀಸಿ | - | ವೀ. ಸೀತರಾಮಯ್ಯ |
| 43) | ತ್ರಿವೇಣಿ | - | ಎಚ್. ಎಸ್. ಅನಸೂಯ |
| 44) | ಸಿ. ಪಿ. ಕೆ | - | ಸಿ. ಪಿ. ಕಷ್ಣಕುಮಾರ್ |
| 45) | ಭಾರತೀ ಸುತ | - | ಎಸ್. ಆರ್. ನಾರಾಯಣ ರಾಯರು |
| 46) | ಸುಜನ | - | ಎಸ್. ಜೆ. ನಾರಾಯಣ ಶೆಟ್ಟಿ |
| 47) | ಕಾಕೆಮಾನಿ | - | ಬಿ. ಡಿ. ಸುಬ್ಬಯ್ಯ |
| 48) | ಕಾವ್ಯಾನಂದ | - | ಡಾ. ಸಿದ್ಧಯ್ಯ ಪುರಾಣಿಕ |
| 49) | ಮದುರ ಚೆನ್ನ | - | ಸಿದ್ದಗಂಗಪ್ಪ ಚನ್ನಮಲ್ಲಪ್ಪ ಗಲಗಲಿ |
| 50) | ಅಂಬಿಕಾತನಯದತ್ತ | - | ದತ್ತಾತ್ರೇಯ ರಾಮಚಂದ್ರ ಬೇಂದ್ರೆ |
| 51) | ಜ್ಯೋತಿ ಹೊಸೂರು | - | ಜೋತಪ್ಪ ಶಿವಪ್ಪ ಹೊಸೂರ |

**ಗೋವಿಂದ ಅ. ಪುನೀತಾಕುಮಾರ**

---

**ಊಟಕ್ಕೆ ಇಲ್ಲದಿದ್ದರೂ ಉಪಚಾರಕ್ಕೆ ಕಮ್ಮಿ ಇಲ್ಲ**

8ನೇ ಪುಟದಿಂದ

ಮುಖ್ಯ ಅತಿಥಿಯವರಾದ ಶ್ರೀಮಾನ್ ಪಡ್ನಂಬೈಲು ವೆಂಕಟ್ರಮಣಗೌಡರು ತಮ್ಮ ಭಾಷಣದಲ್ಲಿ ತಾನು ಪ್ರಥಮ ಬಾರಿಗೆ 1970ರಲ್ಲಿ ಈ ಸಮಾಜದ ಪ್ರಥಮ ಅಧ್ಯಕ್ಷರಾದ ಸಂದರ್ಭ ಮತ್ತು ಅಂದಿನಿಂದ ಇಂದಿನವರೆಗೆ ಸಮಾಜವು ಹಂತ ಹಂತವಾಗಿ ಬೆಳೆದು ಬಂದ ರೀತಿಯನ್ನು ಮೆಲುಕು ಹಾಕಿ ಈ ಸಮಾಜದ ಸಾಧನೆಗಾಗಿ ಸಂತೋಷ ವ್ಯಕ್ತ ಪಡಿಸಿದರು. ತನಗೆ ಈ ಸಮಾರಂಭದಲ್ಲಿ ಭಾಗಿಯಾಗಲು ಅವಕಾಶ ಮಾಡಿ ಕೊಟ್ಟದ್ದಕ್ಕಾಗಿ ಸಮಾಜವನ್ನು ಅಭಿನಂದಿಸಿದರು.

ಕೊಡಗು ಮತ್ತು ದ. ಕ. ಗೌಡ ಸಮಾಜವು ದಾಸರ ಹಳ್ಳಿಯಲ್ಲಿ ಖರೀದಿಮಾಡಲು ಉದ್ದೇಶಿಸಿದ ನಿವೇಶನದ ಮಾಲಿಕರಾದ ಶ್ರೀಮಾನ್ ಸಿದ್ಧಗಂಗಯ್ಯನವರನ್ನು ಸಭೆಗೆ ಪರಿಚಯಿಸಿ ಹಾರಾರ್ಪಣೆ ಮಾಡ ಗೌರವಿಸಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಮ್ಮ ಸಮಾಜಕ್ಕೆ ಖರೀದಿಸಲು ಉದ್ದೇಶಿಸಿರುವ ನಿವೇಶನಕ್ಕೆ ಪಾವತಿಸುವಲ್ಲಿ ತಮ್ಮ ಶಕ್ತಿಯನುಸಾರ ಧನ ಸಹಾಯ ಮಾಡುವಂತೆ ಕೋರಿದರು ಮತ್ತು ಈ ಸಮಾರಂಭವು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಅಭಿನಂದಿಸಿದರು.

ಅಧಕ್ಷರಾದ ಶ್ರೀ ದಂಬೆಕೋಡಿ ಆನಂದನವರಿಗೆ, ಅವರು ಅಧ್ಯಕ್ಷರಾಗಿದ್ದು ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲೂ ತನ್ನನ್ನು ತೊಡಗಿಸಿಕೊಂಡುದನ್ನು ಪರಿಗಣಿಸಿ ಒಂದು ಟ್ರೋಫಿಯನ್ನಿತ್ತು ಗೌರವಿಸಲಾಯಿತು. ಮುಖ್ಯ ಅತಿಥಿಯವರಿಗೆ ಶ್ರೀಮಾನ್ ಕೋಳಿಬೈಲು ಬೆಳ್ಯಪ್ಪನವರ ಕೈಯಿಂದ ನೆನಪಿನ ಕಾಣಿಕೆ ಕೊಡಲಾಯಿತು.

ಕೊನೆಯದಾಗಿ ಕಾರ್ಯದರ್ಶಿಯವರು ಧನ್ಯವಾದ ಸಮರ್ಪಣೆ ಮಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಮಧ್ಯಾಹ್ನ ಭೋಜನದ ಬಳಿಕ ಆಟೋಟ, ಪಂದ್ಯಾಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಿಗೆ ಮುಖ್ಯ ಅತಿಥಿ ಮತ್ತು ಇತರ ಗಣ್ಯರ ಕೈಯಿಂದ ಬಹುಮಾನ ವಿತರಿಸಲಾಯಿತು.

**ವರದಿ : ದಿನಕರ ಗೌಡ ನೂಜಿ, ಕಾರ್ಯದರ್ಶಿ**

## ದೇಶಾಭಿಮಾನ

ಒಮ್ಮೆ ರಜಿತ, ಉಮೇಶ , ಚರಣ್ ದೇಶಾಭಿಮಾನದ ಬಗ್ಗೆ ಹರಟೆಕೊಚ್ಚುತ್ತಿದ್ದೊ.

ನಾನ್ ವಿದೇಶಿ ವಸ್ತುಗಳನ್ನು ನನ್ನ ಜೀವಮಾನಲಿ ತಕಂಬದುಲೆ, ತೇಳಿ ಚರಣ್ ಹೇಳ್ತ್.

ನಾನ್ ವಿದೇಶಿ ಭಾಷೆ ಸಿನಿಮಾನ ಖಂಡಿತ ನೊಡ್ಲೆತ ಉಮೇಶ ಹೇಳ್ತ್.

ಆಗ ರಜಿತ್ ಹೇಳ್ತ್ ನಾನ್ 10ನೇ ತರಗತಿಲಿ ಜಪ್ಪನಾಣೆಗೂ ಇಂಗ್ಲಿಷ್ ಬಾಷೆಲಿ ಪಾಸಾದು ಇಲ್ಲೆ.

**ನೈಯಣ್ಣೀರ ರಶಿ, ಕಡಿಯತ್ತೂರು.**

6ನೇ ಪುಟದಿಂದ

ಸೀಲ್ ಮಾಡಿ ಸುಭದ್ರವಾಗಿ ಇರಿಸಿದ್ದನು.

ಸೇಡಿನ ಕತೆಯ ಪ್ರಾರಂಭ !

ನರೇಂದ್ರನಾಯಕನನ್ನು ಎಡತೊರೆಯವರ್ಯಾರು ಸರಿಯಾಗಿ ನೋಡಿರಲಿಲ್ಲ. ಅವನು ಒದಿನ ಕಾರಣದಿಂದ ಸದಾ ನಗರದಲ್ಲೇ ಇರುತ್ತಿದ್ದನು.

ಇದೊಂದು ರೀತಿ ಅನುಕೂಲವಾಯಿತು.

ನರೇಂದ್ರ ನಾಯಕನಿಗೆ ಸಂಪಿಗೆ ಪುರದ ದೇವಾಲಯದ ಗರ್ಭಗುಡಿಯಲ್ಲಿ ರಹಸ್ಯ ನೆಲ ಮಾಳಿಗೆ ಇರುವ ಸಂಗತಿ ತಿಳಿದಿತ್ತು !

ಪಾಳೆಯಗಾರರ ವಂಶದವನಲ್ಲವೆ?

ಮೂರು ತಿಂಗಳುಗಳ ಹಿಂದೆ ಅವನು ಸಂಪಿಗೆ ಪುರದ ದೇವಸ್ಥಾನದಲ್ಲಿ ಪೂಜಾರಿಯಾಗಿ ಸೇರಿಕೊಂಡನು.

ಯಾರಿಗೂ ಅನುಮಾನ ಬರಲಿಲ್ಲ !

ರಾತ್ರಿಯ ಹೊತ್ತು ಗಾಳಿ, ಬೆಳಕು ಬಾರದ ನೆಲಮಾಳಿಗೆ ಯಲ್ಲಿ ಸರ್ಪಗಂಧ ತಯಾರಿಸಿದನು.

ಗಾಳಿ ಬರುತ್ತಿರಲಿಲ್ಲವಾದ್ದರಿಂದ ಹೆಚ್ಚು ಹೊತ್ತು ಗಂಧ ತೇಯಲು ಆಗುತ್ತಿರಲಿಲ್ಲ ! ಬಹು ಬೇಗ ಆಯಾಸವಾಗಿ ಬಿಡುತ್ತಿತ್ತು !

**(ಮುಂದುವರೆಯುತ್ತದೆ)**

13ನೇ ಪುಟದಿಂದ

ಮಗುವೆಂದೋ, ಗಂಡನೆಂದೋ ಭಾವಿಸಿ ಪೂಜಿಸುವುದುಂಟು. ಪ್ರೀತಿಸುವುದುಂಟು. ಶ್ರೀ ವೈಷ್ಣವ ಆಳ್ವಾರರುಗಳಲ್ಲಿ ಒಬ್ಬರಾದ ಪೆರಿಯಾಳ್ವಾರರು ದೇವರನ್ನು ಮಗುವೆಂದು ಭಾವಿಸಿ ಪ್ರೀತಿಸಿದರು. ತಮ್ಮ ದಿವ್ಯ ಮಂಗಳ ಮೂರ್ತಿಗೆ ಏನು ಕೇಡಾಗುವುದೋ ಎಂದು ನೊಂದುಕೊಂಡು ಅವನಿಗೆ, ಕ್ಷೇಮವನ್ನು ಕೋರಿ ಪದ್ಯವನ್ನು ಕಟ್ಟಿ ಹಾಡಿದರು. ಹಲಕಾಲ ಹಲವು ಸಾವಿರ ಕಾಲ ಹಲಕೋಟಿ ನೂರು ಕಾಲ, ಮಲ್ಲನನುಗೆಲಿದ ನಿಡುದೋಳ ಮಣಿವರ್ಣಾ, ನಿನ್ನ ಕನ್ನಡಿಯ ಕೆಂಪಿಗೆ ರಕ್ಷೆಯಿರಲಿ ಎಂದು ಹಾರೈಸಿದರು.

ಕೃಷ್ಣ- ಗೋಪಿಯರ ಸಂಬಂಧವನ್ನು ಕುರಿತದ್ದೂ ಇನ್ನೊಂದು ಬಗೆಯ ನೋವು. ಕೃಷ್ಣ ಅಗಲಿದಾಗ ಅವರು ಆ ವಿರಹತಾಪವನ್ನು ತಾಳಲಾರದೆ ಪರಿತಪಿಸಿದರು. ಇಂದ್ರಿಯಾತೀತವಾದ ಆ ಮಧುರ ವೇದನೆಗೆ ಸಾಟಿಯೇ ಇರಲಾರದು.

ಅಂತೂ ದೇಹದ ನೋವನ್ನು ಮೀರಿ, ಜಗತ್ತಿನ ಜೀವಿಗಳಿಗೆಲ್ಲ ಅನುಕಂಪ ಕೋರುವ ಹೃದಯದ ನೋವಿನ ಸೀಮೆಯನ್ನು ನಿಲುಕಿ, ಅಲ್ಲಿಂದಲೂ ಏರಿ ಇಂದ್ರಿಯಾತೀತವಾದ ಆನಂದಾನುಭೂತಿಗಾಗಿ ತುಡಿಯುವವರೆಗೆ ನೋವು ಹರಡಿಕೊಂಡಿದೆ. ಭವದಿಂದ ಭವ್ಯದವರೆಗೆ ದಿವ್ಯದವರೆಗ ಹಬ್ಬಿದ ನೋವಿನ ಸ್ವರೂಪವನ್ನು ಅರಿತು ಅನುಭವಿಸುವುದರಲ್ಲೇ ಜೀವನದ ಸಾರ್ಥಕತೆಯಿದೆ ಯೆನಿಸುತ್ತದೆ.

**– ಕೆದಂಬಾಡಿ ಆರ್. ವಿನೋದ್. ಮೇಕೇರಿ.**

**ಕೇಳಿದ್ದನ್ನೆಲ್ಲಾ ನಂಬಬಾರದು, ಗೊತ್ತಿದ್ದನ್ನೆಲ್ಲಾ ಹೇಳಬಾರದು**

# ಬಾಳಿನ ನಲಿವಿಗೆ, ನಾಳಿನ ಬೆಳಕಿಗೆ : ನೋವಿನ ನೆಲೆ ಬೆಲೆ - ಜೀವನದ ಸಾರ್ಥಕತೆ.

ಮನುಷ್ಯರಾದ ನಾವೆಲ್ಲರೂ ಭಾವಜೀವಿಗಳು. ಪ್ರೀತಿ ಪ್ರೇಮ, ಮರುಕ ಮಮತೆ, ದಯೆ, ಕರುಣೆ, ಅನುಕಂಪ ಇವು ನಮಗೆಲ್ಲರಿಗೂ ಸಾಮಾನ್ಯ

ರಾಗ ದ್ವೇಷಾದಿಗಳೂ ನಮ್ಮನ್ನು ಕಾಡಿಸದೆ ಇರುವುದಿಲ್ಲ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ-ಈ ಅರು ಶತ್ರುಗಳಿಂದ ನಮಗೆ ಅನೇಕ ವೇಳೆ ಬಾಧೆಯಾಗುತ್ತದೆ. ಮೊದಲನೆಯ ಗುಂಪಿನವುಗಳಿಂದ ಉದಿಸುವ ಸಂವೇದನೆಗಳು ಸಾಮಾನ್ಯವಾಗಿ ಸಾತ್ತ್ವಿಕ ಸ್ವರೂಪದವು. ಎರಡನೆಯ ಗುಂಪಿನವುಗಳಿಂದ ಉಂಟಾಗುವ ಪರಿಣಾಮ ರಾಜಸ, ತಾಮಸ.

ಮೂಲ ಕಾರಣವೇನೆ ಇರಲಿ, ಇಂಥ ಪರಿಣಾಮ ದಿಂದಾಗಿ ಉಂಟಾಗುವ ನೋವು ಮಾನವರಿಗೆ ಸಾರ್ವತ್ರಿಕ, ಸಾರ್ವಕಾಲಿಕ. ಬೇನೆ, ಭಾಧೆ, ವ್ಯಥೆ, ಶೂಲೆ, ದುಃಖ ಎಂದು ನಾನಾ ರೀತಿಯಾಗಿ ಇದನ್ನು ಅರ್ಥೈಸಬಹುದು. ವೇದನೆ ಸಂವೇದನೆ ಎಂಬುದಕ್ಕೆ ನೋವು ಪರ್ಯಾಯಪದ. ಸುತ್ತಣ ಪರಿಸರಕ್ಕೆ, ವಿದ್ಯಮಾನಗಳಿಗೆ ಸದಾ ಸ್ಪಂದಿಸುತ್ತಿರುವ ಮನಸ್ಸು ವೇದನೆಯನ್ನು, ನೋವನ್ನು ಅನುಭವಿಸುತ್ತಲೇ ಇರುತ್ತದೆ.

ಹುಟ್ಟಿನಿಂದ ಸಾವಿನವರೆಗೆ ನಮ್ಮೊಂದಿಗೆ ಸಾಗಿ ಬರುವ ಸಂಗಾತಿ ನೋವು. ನೋವಿಲ್ಲದೆ ಯಾವುದೂ ಈ ಲೋಕದಲ್ಲಿ ಜನಿಸಲಾರದು. ಮನುಷ್ಯರು ಹೆರವರ ನೋವಿನಲ್ಲಿ ಜನಿಸುತ್ತಾರೆ, ತಮ್ಮ ನೋವಿನಲ್ಲೇ ಸಾಯುತ್ತಾರೆ ಎಂದು ಒಬ್ಬ ಇಂಗ್ಲಿಷ್ ಕವಿ ಹೇಳಿದ್ದಾನೆ. ತಾಯಿಯಾಗುವವಳು ಹುಟ್ಟುವ ಮಗುವಿಗಾಗಿ ಅಪಾರ ವೇದನೆಯನ್ನು ಸಹಿಸಿಕೊಳ್ಳುತ್ತಾಳೆ. ಮಗುವಿನ ಮುದ್ದು ಮುಖವನ್ನು ನೋಡಿದೊಡನೆ ಆ ನೋವೆಲ್ಲ ಮರತೇ ಹೋಗುತ್ತದೆ ಅದು ಉದಾತ್ತವಾದುದು ಎನಿಸುತ್ತದೆ. ದಿವ್ಯ ಭವ್ಯವಾಗುತ್ತದೆ. ತಾಯಿಯ ನೋವಿನಲ್ಲಿ ಹುಟ್ಟಿದ ಮಗು ಬೆಳೆದು ದೊಡ್ಡವನಾಗಿ ಸಾವಿನ ಸಮ್ಮುಖಕ್ಕೆ ಬಂದಾಗ ತನ್ನ ನೋವಿನಲ್ಲೇ ಅವನು ಸಾಯುತ್ತಾನೆ. ಕೆಲವರು ಮಾತ್ರ ನಗು ನಗುತ್ತ ಇನ್ನೊಂದು ಜಗತ್ತಿಗೆ ಜಾರಿಕೊಳ್ಳಬಹುದು. ಅಂಥವರು ಪುಣ್ಯಜೀವಿಗಳು ಎನ್ನಬಹುದೇನೊ.

ಹುಟ್ಟು-ಸಾವುಗಳ ಈ ಎರಡು ಬಗೆಯ ನೋವುಗಳ ನಡುವೆ ಬದುಕು ಸಾಗುತ್ತದೆ. ಈ ಇಡೀ ಜೀವನವೇ ಸಾವಿನೆಡೆಗೆ ಬೆಳೆಸಿದ ನಿರಂತರ ಪ್ರಯಾಣ. ಹುಟ್ಟು ಸಾವುಗಳೆಂಬ ಎರಡು ತುದಿಗಳ ನಡುವಣ ಬಾಳು ಒಂದು ಸ್ವಪ್ನವೆಂದೇ ಭಾವಿಸುವುದುಂಟು. ಈ ಬಾಳು ನಶ್ವರವೆನಿಸಿದರೂ ಈ ಅಂತರದಲ್ಲಿ ನಾವು ಏನು ಸಾಧಿಸುತ್ತೇವೊ ಅದು ನಶ್ವರವಲ್ಲ. ಬದುಕಿನ ಸಾರ್ಥಕತೆ ಇರುವುದೇ ಇವರಲ್ಲಿ ಬೇಗ ಮಲಗಿ ಬೇಗ ಏಳುವವನು ಆರೋಗ್ಯವಂತ, ಐಶ್ವರ್ಯವಂತ, ಅವನೇ ಸುಖಿ ಎಂದು ಹೇಳುವುದುಂಟು. ಮಲಗಿದಾಗಿನಿಂದ ಏಳುವವರೆಗಿನ ಅವಧಿಗಿಂತ, ಎದ್ದಾಗಿನಿಂದ ಮಲಗುವವರೆಗಿನ ಅವಧಿಯಲ್ಲಿ ನಾವು ಏನು ಮಾಡುವವೆಂಬುದು ಅನೇ ಆರೋಗ್ಯ ಐಶ್ವರ್ಯ ಸೌಖ್ಯಗಳ ಸಾಧನ.

ಹೆರವರ ಕಷ್ಟ ಸುಖಗಳಿಗೆ ಸ್ಪಂದಿಸುವುದು ಒಂದು ಬಗೆಯ ನೋವಾದರೆ, ಯಾವುದಾದರೊಂದು [illegible] ಅನುಭವವನ್ನು ಪಡೆದ ಮೇಲೆ ಅದು ನಷ್ಟವಾದಾಗ ಉಂಟಾಗುವ ವೇದನೆ ಇನ್ನೊಂದು ಬಗೆಯದು. ಇದು ಆತ್ಮಸಂಬಂಧಿಯಾಗಿದ್ದು ಅನುದಾನುಭೂತಿಯ ಸ್ಥಿತಿಯಿಂದ ವಾಸ್ತವ ಲೋಕಕ್ಕೆ [illegible] ಬಂದ ಸಂದರ್ಭಕ್ಕೆ ಸಂಬಂಧಿಸಿದ್ದು. ಜಾನ್ ಕೀಟ್ಸ್ ಎಂಬ ಇಂಗ್ಲಿಷ್ ಕವಿ ನೈಟಿಂಗೇಲ್ ಎಂಬ ಹಾಡುವಕ್ಕಿಯನ್ನು ಕುರಿತು [illegible] ಕವನದಲ್ಲಿ ಇಂಥ ಅನುಭವವನ್ನು ಕಾಣಬಹುದು. [illegible] ನಡುವೆ ಕುಳಿತ ಹಕ್ಕಿಯ ಹಾಡನ್ನು ಕೇಳಿ [illegible] ಮರೆತು ಬೇರೊಂದು ಲೋಕದಲ್ಲಿ [illegible] ಮನಸ್ಸು ಆ ಹಾಡು ಮುಗಿದೊ[illegible] ಭಂಗವಾದಂತೆ ಎನಿಸುತ್ತದೆ. ಎಲ್ಲಿ [illegible]! ಎಂದು ನೋಯುತ್ತದೆ. [illegible] ವಾದ್ದು ಈ ನೋವು. ಇದು [illegible] ಸಂಬಂಧಿಯದು ಎನಿಸುವವರೆಗ[illegible]

ದಿವ್ಯ ಮ[illegible] ಪು.ತಿ.ನ. ಅವರು ಪಡೆಯು[illegible]ವಾದ್ದು. 'ಗಾನವಾವುದೊ' [illegible]. ಆತ್ಮ ವದನರಿತಿಹುದು, [illegible]' ಎಂದು ಅವರು ಕವನಿಸಿ[illegible] ಆನಂದವನ್ನು ಅನುಭವಿಸುತ್ತಿದ್ದ[illegible] ಅದನ್ನು [illegible]ಸಲಾಗದು ಎಂಬ ನೋವು ಇದು. [illegible] ಇಂದ್ರಿಯಾತೀತವಾದ್ದು.

ನಾವು ಯಾವುದನ್ನು [illegible] ಅದರಿಂದ ವಿಯೋಗ ಸಂಭವಿ[illegible] ಅದರ ವಿಯೋಗ ಸಂಭವಿಸುವುದೆಂಬ ಶಂಕೆ ಉಂಟಾದಾಗ, ಆ ಪ್ರೀತಿಯ ವಸ್ತುವಿಗೆ ಕೆಡುಕಾಗಬಹುದೆನಿಸಿದಾಗ [illegible] ನೊಂದುಕೊಳ್ಳುತ್ತದೆ. ದಯಾಮೂಲವಾದ ನೋವು ಒಂದು ಬಗೆಯಾದರೆ, ಪ್ರೇಮ ಅಥವಾ ವಾತ್ಸಲ್ಯಮೂಲವಾದ್ದು ಇನ್ನೊಂದು ಕಡೆ. ಜಗತ್ತಿನಲ್ಲಿಯ ಯಾವುದೇ ಜೀವಿಗೆ ಬಾಧೆಯಾಗುವಂತಾದಾಗ, ಆ ಜೀವಿಯ ನೋವು ನಮ್ಮದೆಂದೇ ಅನಿಸಿದಾಗ ಅದಕ್ಕಾಗಿ ಕನಿಕರ ಮೂಡುತ್ತದೆ. ಕಣ್ಣು ಹನಿಗೂಡುತ್ತದೆ, ದಯೆಯೆಂಬುದು ಮಾನವನಲ್ಲಿ ಇರಬೇಕಾದ ಉದಾತ್ತಗುಣ. 'ದಯವೇ ಧರ್ಮದ ಮೂಲವಯ್ಯ!' ಎನ್ನುತ್ತಾರೆ ಬಸವಣ್ಣ. ದಯೆಯ ನೋವು ಒಂದೇ ನಾಣ್ಯದ ಎರಡು ಬದಿಗಳಿದ್ದಹಾಗೆ. ಅವುಗಳದ್ದು ಅವಿನಾಭಾವ ಸಂಬಂಧ.

ವಾತ್ಸಲ್ಯಭಾವಕ್ಕೆ ಅಂಟಿಕೊಂಡಿರುವಂಥದು ಕೂಡ ನೋವೇ ಎನ್ನಬಹುದು. ತನ್ನ ಪ್ರೀತಿಯ ಮಗುವಿಗೆ ಏನು ಕೆಡುಕಾಗವುದೋ ಎಂದು ತಾಯಿ ನೋಯುತ್ತಾಳೆ. ಅತಿ ಪ್ರೇಮ ಇದ್ದಲ್ಲಿ ಪಾಪ ಶಂಕೆ. ಭಕ್ತನಾದವನು ತನ್ನ ಆರಾಧ್ಯ ದೈವವನ್ನು ತಾಯಿಯೆಂದೋ

20ನೇ ಪುಟಕ್ಕೆ

ಬಾಯಿಗೆ ರುಚಿಯಾಗಿರುವುದು ಹೊಟ್ಟೆಗಾಗದು, ಹೊಟ್ಟೆಗೆ ಒಳ್ಳೆಯದಾಗಿರುವುದು ಬಾಯಿಗೆ ರುಚಿ ಇರದು.

# ಪ್ರಥಮ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಟ್ರೋಫಿ ವಿನ್ನರ್ ಅಯ್ಯಂಡ್ರ ಸೀತಾರಾಮ



ನಂಜರಾಯ ಪಟ್ಟಣ ಅಂಚೆ, ಹೊಸ ಪಟ್ಟಣ ಗ್ರಾಮ ಅಯ್ಯಂಡ್ರ ದಿವಂಗತ ಪೂವಯ್ಯನವರ ಐದನೇ ಮಜ್ಜ ಸೀಮರಾಮ. ಇವರ ಮನೆಗೆ ಇನ್ನೊಂದು ಮನೆ ಹೆಸರು ಉಟ್ಟು ಅದು (ಎರಗದ್ದೆಂತ) ಆದನ್ನ ಹೆಚ್ಚಿಗೆ ರೂಡಿಲ್ಲಿ ಇಲ್ಲೇ. ಸೀತರಾಮನವರ ಅಪ್ಪ ಪೂವಯ್ಯ ಗೌಡಶಾಸ್ತ್ರಲ್ಲಿ ಸಮಕಟಲಿ ಭಾರಿ ಹೆಸರು ಪಡೆದಿದ್ದೋ ಇವರ ಪತ್ನಿ ಮುತ್ತವ್ವ, ಈ ದಂಪತಿಗಳಿಗೆ ನಾಲ್ಕು ಜನ ಗಂಡ್ ಮಕ್ಕ ಮತ್ತೆ ಎರಡ್ ಜನ ಹೆಣ್ಣ್ ಮಕ್ಕ. ಅವರಲ್ಲಿ ಐದನೇ ಮಜ್ಜ 7-11-1957 ರಲ್ಲಿ ಹೊಸ ಪಟ್ಟಣದ ಸ್ವಗೃಹದಲ್ಲಿ ಸೀತರಾಮ ಜನಿಸಿದೋ. ಸೀತರಾಮನವುಕ್ಕೇ ಎರಡು ಅಣ್ಣ ಒಂದು ತಮ್ಮ ಹಂಗೇ ಎರಡು ಅಕ್ಕಂದಿರು. ಇವರ ದೊಡ್ಡ ಅಣ್ಣ ಯಾದವ ಇವು ಶಾಂತಳ್ಳಿಲಿ ಫಾರೆಸ್ಟರ್ ಆಗಿ ಕಾರ್ಯ ನಿರ್ವಹಿಸುತ್ತಾ ಒಳೋ. ಇನ್ನೊಬ್ಬ ಅಣ್ಣ ದೈವಾದೀನರಾದೋ, ತಮ್ಮ ಬೋಪಯ್ಯ ವೆಟನರಿ ಇನ್ಸ್‌ಪೆಕ್ಟರ್ ಆಗಿ ಆಭ್ಯತ್‌ಮಂಗಲ ಗ್ರಾಮದಲ್ಲಿ ಕಾರ್ಯ ನಿರ್ವಹಿಸ್ತ್‌ಳೋ ಹಾಗೂ ಅಕ್ಕ ಬೀನಾ Staff Nurse ಆಗಿ ಚಿತ್ರದುರ್ಗಲ್ಲಿ ಕೆಲಸ ಮಾಡ್‌ತ್ತಾಒಳೋ. ಇನ್ನೊಬ್ಬ ಅಕ್ಕ ಬಾವ ಸನ್ನಿ ಮರೂರು ಗ್ರಾಮಲ್ಲಿ ಕೃಷಿಕರ್.

ಸೀತರಾಮನವರ ವಿದ್ಯಾಭ್ಯಾಸ ಒಂದನೇ ತರಗತಿಯಿಂದ 7ನೇ ತರಗತಿಯ ಗಂಟ ನಂಜರಾಯ ಪಟ್ಟಣ ಮಿಡ್ಲ್‌ಸ್ಕೂಲ್‌ಲ್ಲಿ 8ರಿಂದ 10ನೇ ತರಗತಿಯ ಗಂಟ ಚೆಟ್ಟಳ್ಳಿಯ ಹೈಸ್ಕೂಲ್‌ವರೆಗೆ ಮತ್ತೆ P.U.C.ನ್ನ ಮೈಸೂರು ಮಹಾರಾಜ ಜೂನಿಯರ್ ಕಾಲೇಜ್‌ನಲ್ಲಿ ಓದು ಮುಗಿಸಿದೋ. ಅಲ್ಲಿಂದ ವಿದ್ಯಕ್ಕೆ ವಿದಾಯ ಹಾಡಿ ಆ ಮೇಲೆ K.S.R.T.C. Busಲ್ಲಿ ಕಂಡಕ್ಟರ್ ಆಗಿ ಆರು ತಿಂಗಳ ಕಾಲ ಕೆಲಸ ಮಾಡಿಲೋ 9-8-1980ರಲ್ಲಿ ಸೀತರಾಮನವು ಪೋಲಿಸ್ ಇಲಾಖೆಗೆ ಸೇರ್ಪಡೆಯಾದೋ. ಇವು 3-4 ಕಡೆ ಪೋಲಿಸ್ ಠಾಣೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ್ 5-5-1988ರಲ್ಲಿ ಸುಂಟಿಕೊಪ್ಪ ನಾಡು ಉಲುಗುಲಿ ಗ್ರಾಮ ಒಡೆಪ್ಪನ ಲಕ್ಷ್ಮಣ ಮತ್ತು ರುಕ್ಮಿಣಿ ದಂಪತಿಯವರ ಎರಡನೇ ಮಗಳನ್ನ ಮದುವೆ ಆಗಿ ಸೀತರಾಮ ಪಾರ್ವತಿ ಸತಿ ಪತಿಗಳಾದೋ. ಈ ದಂಪತಿಗಳಿಗೆ ಎರಡು ಜನ ಮಕ್ಕ ಒಂದ್ ಗಂಡ್, ಒಂದು ಹೆಣ್ಣ್, ಮಜ್ಜ ಮನೋಜ್‌ಕುಮಾರ್ 6ನೇ ತರಗತಿಲಿ, ಮಗಳ್ ತೇಜಸ್ವಿನೀ (ತೃಪ್ತಿ) 3 ನೇ ತರಗತೀಲಿ ಕಲಿತ ಒಳೋ.

ಸೀತರಾಮನವು ಹೊಸಪಟ್ಟಣದ ಮನೆಯಲ್ಲಿ ವಾಸವಾಗಿದ್ದ್ ಮಡಿಕೇರಿ ಕೊಡಗು ಜಿಲ್ಲಾ ಅಪರಾಧ ಪತ್ತೆದಳಲಿ ಕರ್ತವ್ಯ ನಿರ್ವಹಿಸುತ್ತಾಒಳೋ. ಅವರನ್ನ ಈ ರೀತಿ ಪ್ರಶ್ನೆ ಮಾಡ್‌ಕನ?

1) ನಿಮಗೆ ಪೋಲಿಸ್ ಇಲಾಖೆಲಿ ಕೆಲಸ ಮಾಡಿಕೆ ತೊಂದರೆ ಆದುಲ್ಲೆನಾ ? ಮತ್ತೆ ಈ ಕೆಲಸಲ್ಲಿ ತೃಪ್ತಿ ಸಿಕ್ಕುಟ್ಟಾ?

ನಂಗೆ ಕೆಲಸ ಮಾಡಿಕೆ ತೊಂದ್ರೆ ಇಲ್ಲೇಂತಾ ಹೇಳಿಕೆ ಆದುಲ್ಲೇ ಆದರೆ ನಾವು ಕಷ್ಟ ಪಟ್ಟರೇ ತಾನೇ ಸುಖ ಸಿಕ್ಕುದು, ಮತ್ತೆ ಈಗ ಗಂಟ ನಾನ್ ಮಾಡ್ದ್ ಕೆಲಸಲಿ ನಂಗೆ ಆತ್ಮ ತೃಪ್ತಿ ಸಿಕ್ಕುಟ್ಟು.

2) ನಿಮಗೆ ಬಡ್ತಿ ಸಿಕ್ಕಿ ಎಷ್ಟು ವರ್ಷ ಆತ್? ಪತ್ತೆದಳ ಕಾರ್ಯಲಿ ನಿಮ್ಮ ಸಾಧನೆ ಏನ್?

ನಂಗೆ Head Constable ಪ್ರಮೋಶನ್ ಸಿಕ್ಕಿ 4 ವರ್ಷ ಆತ್ ಮತ್ತೆ ಈಗ ಜಿಲ್ಲಾ ಅಪರಾಧ ಪತ್ತೆದಳಲಿ ನನ್ನ ಸಾಧನೆ ದೊಡ್ಡದೊಂದು ಅಲ್ಲದಿದ್ದರು, ಅಂತು ಹೇಳುದಾದರೇ S.S.L.C.ಲೀ ಕಳ್ಳ Marks Card ಕೇಸ್, ಟ್ಯಾಕ್ಸಿ ಡ್ರೈವರ್ ಕೊಲೆ ಪತ್ತೆ, ಜೇಪುಕದ್ದವರ ಹಿಡ್‌ದದ್, ಗಂಧ ಕದ್ದವರ ಹಿಡ್‌ದದ್, ಹಿಂಗೇ ಸುಮಾರ್ 100-150 ಕೇಸ್ ಪತ್ತೆ ಮಾಡ್ಯೋಳೇ ಮತ್ತೆ ನನ್ನ ಈ ಕೆಲಸ ಗುರ್ತಿಸಿ ಆಕಾಶವಾಣಿ ಬೆಂಗಳೂರಿನವು "ಕಡತ ಹೇಳಿದ ಕಥೆ" ಪ್ರೋಗ್ರಾಂಗೆ ನನ್ನ ಸಂದರ್ಶನ ಮಾಡ್ಯೋಳೆ.

3) ಪತ್ತೆದಳ ಕೆಲಸದ ಬಗ್ಗೆ ನೀವು ಏನ್ ಹೇಳಿರೆ? ಅದ್ ಕಷ್ಟತ್ತಾ ಎನಿಸುದಿಲ್ಲೆನಾ? ಅಲ್ಲದೇ ನಿಮ್ಮ ವೈವಾಹಿಕ ಜೀವನಕ್ಕೆ ತೊಂದ್ರೆಯಾದುಲ್ಲೆನಾ?

ಈ ಕೆಲಸ ತುಂಬಾ ಅಪಾಯಕರ ನಾಜೂಕಾಗಿ ಜನರೊಟ್ಟಿಗೆ ಸ್ನೇಹ ಬೆಳಸಿ ಪ್ರೀತಿ, ತಾಳ್ಮೆ, ಸಹನೆಯಿಂದ ಬೆರ್‌ತ್ ಅವರ ಆಗ್ ಹೋಗ್‌ಗಳ ವಿಷಯನ್ನ ತಿಳ್‌ಕಂಡ್ ಚುರ್‌ಕ್ಕಾಗಿ ದಾಳಿಮಾಡ್ದು. ಪೋಲಿಸ್ ಕೆಲಸತ್ತಾ ಹೇಳಿರೆ, ಮೋಸ, ಧಗ, ಕಳ್ಳತನ ಇಂತದನ್ನ ಮಟ್ಟಹಾಕಿ ಒಬ್ಬರಿಂದ ಇನ್ನೊಬ್ಬರಿಗೆ ರಕ್ಷಣೆ ಕೊಟ್ಟ್ ಕಾಪಾಡ್ದ್. ಕೆಲಸನ್ನ ನಿರ್ವಹಿಸಿಕ್ಕೆ ಅನ್ನ, ನೀರ್, ನಿದ್ದೆ ಇವು ಸರಿಯಾದ ಸಮಯಕ್ಕೆ ಸಿಕ್ಕದಿದ್ದಲ್ಲಿ ಅದರ ಕಷ್ಟ ಹೇಳಿಕೆ ಆದುಲ್ಲೇ, ಅದ್ ಪತ್ತೆದಳ ಕಾರ್ಯ ಅಂದರೆ ಹೇಳಕಾ? ಅದರಲ್ಲಿ ಈಗಿನ ಜನ ಹೆಚ್ಚಿನ ಕಳ್ಳರ್ ಅವರ ಆತ್ಮರಕ್ಷಣೆಗೇಂತ್ತಾ ಚಾಕ್, ಚೂರಿ, ಪಿಸ್ತೂಲ್ ಇದನ್ನ ಉಪಯೋಗಿಸುವೇ ಅಂತಹವರನ್ನ ಹಿಡಿಯೋದ್ ತುಂಬಾ ಚಾಣಕ್ಯತನ ತೋರಿಸಿಕೆ ಆದೇ. ಮತ್ತೆ ಅಪಾಯಕರ, ಸಂದರ್ಭ ಬಂದದೇ ಹೆಚ್ಚಾಗಿ (ಯೂನಿಫಾರಂ) ಹಾಕದೆ ಮಪ್ತಿ ಬಟ್ಟೆ ಹಾಕಿ ಕಂಡ್ ಓಡಾಡಿರೆ ಕೆಲವುಕ್ಕೆ Dutyಲಿ ಇರುದೇ ಗೊತ್ತಾದುಲ್ಲೇ. ನನ್ನ ವೈವಾಹಿಕ ಜೀವನಕ್ಕೆ ಅಂತಹ ತೊಂದ್ರೆ ಇಲ್ಲೇ.

4) ನಿಮ್ಮ ಪತ್ನಿ (ಹೆಣ್ಣ್) ನಿಮ್ಮ Dutyಯ ಬಗ್ಗೆ ನಿಮಗೆ ಸಹಕರಿಸಿದೆಯಾ?

ನನ್ನ ಹೆಣ್ಣ್, ನಾನ್ ಹಗಲ್ ರಾತ್ರಿ Duty ಮಾಡಿ ಬಂದ್ರು ಸಿಡುಕಾಡದೆ, ಹಾಗೇ ಅವಳ ಸಹಕಾರ ಪ್ರೀತಿ, ತಾಳ್ಮೆ ಇರೋದರಿಂದ ನಂಗೆ ಕೆಲಸ ಮಾಡಿಕೆ ಧೈರ್ಯ ಮತ್ತೆ ನೆಮ್ಮದಿ ಸಿಕ್ಕಿದೇ.

5) ನಿಮಗೆ ಅನೇಕ ಪುರಸ್ಕಾರ (Award) ಸಿಕ್ಕುಟುತ್ತಾ ಗೊತ್ತಾತ್ ಯಾವ, ಯಾವ, ಸಾಧನೆ ಬಗ್ಗೆ ಮತ್ತೆ ಎಷ್ಟು ಪುರಸ್ಕಾರಗ ಲಭಿಸಿಟ್ಟು? ಎಲ್ಲಿ? ಯಾರಿಂದ?

ನಂಗೆ ನಮ್ಮ ಇಲಾಖೆಯಿಂದ ಸುಮಾರ್ ಬಹುಮಾನ "165" ಸಿಕ್ಕುಟ್ಟು, (Cash Awards) forest Department ಯಿಂದ ಎರಡು ಸಾರಿ 500ರೂಗಳ Cash Awards ಸಿಕ್ಕುಟ್ಟು. ಮತ್ತೆ ನಮ್ಮ ಕೊಡಗಿಗೆ ಅತ್ಯುತ್ತಮ ಪೋಲಿಸ್ ಅಂತ ಹೇಳಿ (field Marshal Cariappa) ಬೆಳ್ಳಿ ಟ್ರೋಫಿ ಮತ್ತು 5 ಸಾವಿರ ರೂ.ಗಳ ನಗದು ಬಹುಮಾನ 1995ರಲ್ಲಿ ಪ್ರಪ್ರಥಮವಾಗಿ ಸಿಕ್ಕುಟ್ಟು. ಮತ್ತೆ ರೋಟರಿ ಕ್ಲಬ್ ಅವರಿಂದ, ಗೌಡ ಸಮಾಜ ಮಡಿಕೇರಿ, ವಾಹನ ಚಾಲಕರ ಸಂಘ ಮಡಿಕೇರಿ, ಮತ್ತೆ ಸಿದ್ದಾಪುರ ನಾಗರಿಕರಿಂದ ಅಲ್ಲದೆ ಅಯ್ಯಂಡ್ರ ಲಕ್ಷ್ಮಿ ಧವಸ ಭಂಡಾರ ಮುಂತಾದವರಿಂದ ಸನ್ಮಾನ ಸಿಕ್ಕುಟ್ಟು, ಅಲ್ಲದೆ ಅಂತರ ರಾಜ್ಯ ವಿಗ್ರಹ ಕದಿಯುವ ಕಳ್ಳರನ್ನ ಹಿಡಿಯೋಕೆ ಸಹಾಯ ಮಾಡಿದಕ್ಕೆ ದಕ್ಷಿಣ ಕನ್ನಡ ಜಿಲ್ಲೆ S.P.ಯವು ಕೂಡ 250 ರೂಗಳ ಬಹುಮಾನ ಕೊಟ್ಟಳೊ.

6) ನೀವು ಈ ವರೆಗೆ ಕಳೆದ ದಿನಗಳಲ್ಲಿ Dutyಗೆ ಸಂಬಂಧ ಪಟ್ಟ ಹಾಗೆ ಯಾವುದಾದರ್ ಘಟನೆ ನಡೆದುಟ್ಟಾ? ಅವುಗಳ ವಿವರಣೆ ಹೇಳಿರೆ?

ನನ್ನ Dutyಲಿ ಮರೆಯಲಾಗದ ಘಟನೆ ಅಂದರೆ ಸುಮಾರ್ ಉಟ್ಟ್. ನಾನ್ ಒಂದು ಸಾರಿ ಕೇರಳಕ್ಕೆ ಹೋಗಿ ಮಟ್ಟನೂರಿಗೆ ಬಂದ್ ಬಸ್ಸ್ ಕಾಯ್ಕಂಡ್ ನಿಲ್ಲ್‌ಕನ ಒಂದು ಕಾರ್ (ಮಾರುತಿ) ಬಂದ್ ನನ್ನ ಹಕ್ಕಲೇ ನಿಂತತ್, ಕಾರ್‌ಲ್ ಇದ್ದ ಒಬ್ಬ ಧಡಿಯ ನಂಗೆ ನಮಸ್ಕಾರ ಮಾಡ್ತ್, ನಂಗೆ ಸ್ವಲ್ಪ ಭಯ ಆತ್, ಆಗ ಅಂವ ಹೇಳ್ತ್ ಮಲೆಯಾಳಂಲೀ ನನ್ನ ಗೊತ್ತಾತ್‌ಲೇ ನಿಮಗೆ, ನೀವು ಒಂದು ಟೈಮಲಿ ನಂಗೆ 9 ತಿಂಗಳ ಗರ್ಭಿಣಿ ನನ್ನ ಹೆಣ್ಣ್‌ಗೆ ಪೋನ್ ಮಾಡಿಕೆ ಅವಕಾಶ ಮಾಡಿಕೊಟ್ಟರೀ ನೀವು ಅಂದ್ ನನ್ನ ಕೂಸ್‌ನ ಹೆಣ್ಣ್‌ನ ಉಳಿಸಿದರಿ, ನೀವು ನಮ್ಮ ಮನೆಗೆ ಬಂದ್ ಹೆಣ್ಣ್ ಮತ್ತೆ ಕೂಸ್‌ನ ಮಾತಾನಾಡಿಸಿ ಊಟ ಮಾಡಿ ಹೋಕ್, ಹಾಗೇ ನಾನ್ ಅವರ ಕಾರ್‌ಲೀ ಹೋಗಿ ಅವರನ್ನ ಮಾತನಾಡಿಸಿ ಊಟ ಮಾಡಿ ಬಂದೇ, ಅಂದ್ ಅವೆಲ್ಲಾ ತೋರಿಸಿದ ಪ್ರೀತಿನ ಇಂದ್ ಮರಿಯಾಕೆ ಆದುಲ್ಲೆ.

("ಅಂತೂ ಕಳ್ಳರಲ್ಲಿ ಪ್ರೀತಿ ವಿಶ್ವಾಸ ಉಟ್ಟು ಅವರನ್ನ ಒಂದೊಂದು ಪರಿಸ್ಥಿತಿಗೆ ಅನುಗುಣವಾಗಿ ಅವರನ್ನ ಕಳ್ಳರ ಹಾಗೆ ಮಾಡಿ ಬುಟ್ಟವೇ ಅಲ್ಲಾ")

ಇನ್ನೊಂದು ಘಟನೆ ಒಂದು ಸಾರಿ ಮಂಗಳೂರಿನಿಂದ ನಾನ್ A.S.I. ಮತ್ತೆ P.C.ಕಳ್ಳನ ಹಿಡ್‌ಕಂಡ್ ಒಂದು ಬಸ್ಸ್ ಹತ್ತಿಸ್‌ಕನ ತಪ್ಪಿಸಿ ಓಡ್ದ್‌ವನ ಮಂಗಳೂರ್ Cityಲ್ಲಿ 2 ಕಿ.ಮೀ. ಚೇಸ್ ಮಾಡಿ ಹಿಡ್‌ದವ್, ಅದ್‌ಕೂಡ ಮರಿಯಕ್ಕೆ ಸಾಧ್ಯಯಿಲ್ಲೇ.

7) ನಿಮ್ಮ ನೆಚ್ಚಿನ ಹವ್ಯಾಸ ಬಗ್ಗೆ ವಿವರಣೆ ಹಾಗೂ ಇಷ್ಟಪಡುವ ಆಟ?

ನಂಗೆ ಕಥೆ ಕಾದಂಬರಿ ಓದುದು ಅದರಲ್ಲಿ ಮುಖ್ಯವಾಗಿ ಪತ್ತೆದಾರಿ ಕಾದಂಬರಿ ಓದುದು ಕೇರಂ ಆಟ ಮತ್ತೆ ಕ್ರಿಕೇಟ್, ಹಾಕಿ, ವಾಲಿಬಾಲ್ ನೋಡಿಕೆ ತುಂಬಾ ಇಷ್ಟ.

8) ಈಗ ನರಹಂತಕ ವೀರಪ್ಪನ್, ಡಾ. ರಾಜ್ ಕುಮಾರರನ್ನ ಅಪಹರಿಸಿ ತುಂಬಾ ದಿನ ಆತ್ ಸರಕಾರ ಪೋಲಿಸ್ ಪಡೆ ಬೇಡತ್ತಾ ಒಳೊ. ಆದರೆ ಪೋಲಿಸ್ ಪಡೆ ಇಲ್ಲದೇ ವೀರಪ್ಪನ್ ಹಿಡಿಯಕ್ಕೆ ಸಾಧ್ಯನಾ? ಅದರ ಬಗ್ಗೆ ಮತ್ತೆ ನಿಮ್ಮನ ಸರಕಾರವು ವೀರಪ್ಪನ ಹಿಡಿಯೋಕೆ ಅಯೋಜಿಸಿರೇ ನೀವು ಹೊರಡಿಕೆ ತಯಾರಾ?

ಪೋಲಿಸ್ ಪಡೆ ಇಲ್ಲದೆ ವೀರಪ್ಪನ ಹಿಡಿಯೋಕೆ ಸಾಧ್ಯ ಆದುಲ್ಲೇ. ಆದರೆ ಪೋಲಿಸ್ ಪಡೆ ಪಣ ತೊಟ್ಟದೇ ಆದರೇ ಒಂದು ವೀರಪ್ಪನ್ ಅಲ್ಲ ಅವರಂತಹ ಹತ್ತ್ ವೀರಪ್ಪನ್ ಹಿಡಿಯಕ್‌ತ್ತಾ ಧೈರ್ಯದಿಂದ ಹೇಳುವೆ. ಸರಕಾರದಿಂದ ನನ್ನನ್ನ ಅಯೋಜಿಸಿರೆ ಖಂಡಿತವಾಗಿ ಎದೆಗುಂದೆ ನಾನ್ ಹೋಗುವೆ.

ಈ ವರೆಗೆ ಅಪರಾಧ ಪತ್ತೆದಳ ಮಡಿಕೇರಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯ ಪೇದೆ (Head Constable) ಸೀತರಾಮನವರ ಕಾರ್ಯಸಾಧನೆ ಅಪಾರವಾಗಿದ್ದು ಕೊಡಗಿನ ಗೌಡ ಜನರ ಮನಸ್ಸಿಗೆ ಪಾತ್ರರಾಗಿ ಇಂತಹ ಸನ್ನಿವೇಶಗಳನ್ನ ಅನುಭವಿಸಿ ನಮ್ಮ ಕೊಡಗು ಗೌಡ ಜನರ ಹೆಮ್ಮೆಯ ದೀಮಂತ ವ್ಯಕ್ತಿಯಾಗಿ ಸೇವೆ ಸಲ್ಲಿಸಿ ಇನ್ನು ಮುಂದೆ ಕೂಡ ಕೊಡಗು ಅಲ್ಲದೆ, ರಾಜ್ಯ ಹಾಗೂ ರಾಷ್ಟ್ರಕ್ಕೆ ಕೀರ್ತಿವಂತರಾಗಿ ಎಂದು ನಿಮಗೂ ಹಾಗೂ ನಿಮ್ಮ ಕುಟುಂಬ ವರ್ಗಕ್ಕೂ ಆಯುಷ್ಯ ಆರೋಗ್ಯ ಕೊಟ್ಟು ವೆಂಕಟರಮಣ ದೇವರ ಕೃಪೆಯಿರಲಿ ಎಂದು ನಾನು ಹಾರೈಸುತ್ತೇನೆ.

**ಲೇಖಿನ : ಅಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ.**

---

## ಶುಭ ವಿವಾಹ

ಕೊಯನಾಡಿನ ಪೆರುಂಬಾರು ಗುತ್ತಿಮುಂಡನ ಚಂದ್ರಶೇಖರ್‌ರವರ ಮಗಳು ರಾಧ ಇವರ ವಿವಾಹವು ಸೋಮವಾರ ಪೇಟೆ ತಾಲ್ಲೂಕು ಮಾಲಂಬಿ ದಿ. ಪೊನ್ನಪ್ಪನವರ ಮಗ ರಾಜು ರವರೊಂದಿಗೆ ದಿನಾಂಕ 23-8-2000ನೇ ಬುಧವಾರ ವಧುವಿನ ಸ್ವಗೃಹದಲ್ಲಿ ನಡೆಯಿತು.

ಗಿರೀಶ್‌ಕುಮಾರ್, ಕೊಯನಾಡು.

---

## ಯಾರ ಬೇಟೆ?

– ಬಾಚಿಯಂಡ ಪೂವಪ್ಪ

ಸುಳುಗೋಡಿನ ಪಕ್ಕದ ಕಾಡಿನಲ್ಲಿ ಜೋಡುಬೆಟ್ಟಿ ಕೆರೆ. ಆನೆ, ಕಡವೆ, ಜಿಂಕೆ, ಕಾಡು ಹಂದಿ ಇವಕ್ಕೆಲ್ಲಾ ಬೇಸಿಗೆಯಲ್ಲೂ ತಂಪು ನೀಡುವ ತಾಣ. ಆ ಕೆರೆಯ ಪಕ್ಕದಲ್ಲೇ ಬೇಟೆಗಾರ ಮಣಿಯ ಮನೆ.

ಮಣಿ ಅಂಥ ಗಟ್ಟಿಮುಟ್ಟಾದ ಆಳಲ್ಲ. ಆದರೆ ಅವನ ಗುರಿ ಬಾನಲ್ಲಿ ಹಾರುವ ಸೂರ್ಯ ನಮಸ್ಕಾರದ ಹಕ್ಕಿಯನ್ನೂ ಬಿಡುವುದಿಲ್ಲ. ಇಂಥ ಗುರಿ ಅವನ ಸಂಸಾರಕ್ಕೆ ಮಾತ್ರ ಪ್ರಯೋಜನವಾಗಿಲ್ಲ. ಹೆಂಡತಿಯೇ ಸಂಸಾರ ನಿಬಾಯಿಸಬೇಕು.

ನಾಲಗೆಗೆ ಒಗ್ಗದ ಪ್ರಾಣಿಯನ್ನು ಇವನ ಕೋವಿಯೂ ಬಯಸುತ್ತಿರಲಿಲ್ಲ. ಕೋವಿ ಇವನದಲ್ಲದಿದ್ದರೂ ತನ್ನದೇ ಅನ್ನುವಂತೆ ಜೋಪಾನ ಮಾಡುತ್ತಿದ್ದ. ಒಂದು ರಾತ್ರಿ ಹಂದಿಯೆಂದು ತಪ್ಪು ತಿಳಿದು ಹುಲಿಯನ್ನು ಹೊಡೆದಿದ್ದ. ಅದಕ್ಕೆ ಅಂಥ ಖುಷಿ ಪಟ್ಟಿಲ್ಲ. 'ದರಿದ್ರದ್ದು ಬಂದು ಸಿಕ್ಕಿಕೊಂಡಿತು' ಅಂತ ಬಯ್ದ. ಗುಂಡು ಹೊಡೆದ ಅದೇ ಸ್ಥಳದಲ್ಲಿ ಮತ್ತೆ ಅಂದು ಬೇಟೆಯಾಗದೆಂದು ಗೊಣಗುತ್ತ ಮನೆಗೆ ಬಂದ. ತಾನು ಹೊಡೆದ ಆ ಹುಲಿಯ ಚರ್ಮ ಒಡೆಯನ ಮೇಜನ್ನಲಂಕರಿಸಿತು. ಅದರ ಉಗುರು ಮಕ್ಕಳ ಕೊರಳ ಆಭರಣವಾಯ್ತು!

ಒಂದು ರಾತ್ರಿ ಹೀಗಾಯ್ತು :

ಬೇಂಗೆ ಮರದ ಬೇರಿನ ಸೊನೆಯನ್ನು ನೆಕ್ಕಲು ಹಂದಿಗಳು ಬರುತ್ತಿದ್ದವು. ಅವುಗಳು ಸೊನೆಯನ್ನು ನೆಕ್ಕುವುದಲ್ಲದೆ ಅದೇ ಮರದ ಕಾಂಡಕ್ಕೆ ಮೈಯನ್ನು ಉಜ್ಜಿಕೊಳ್ಳುತ್ತಿದ್ದವು. ಇದನ್ನರಿತ ಮಣಿ ಆ ಮರದ ಒತ್ತಿನಲ್ಲಿದ್ದ ತಡ್ಲೆ ಮರದಲ್ಲಿ ಒಳೆ ಕಟ್ಟಿದ. ರಾತ್ರಿ ಕಾದು ಕುಳಿತ. ಕೋಳಿ ಕೂಗುವ ಹೊತ್ತಿರಬಹುದು. ಮಂಜಿನ ಹನಿಗಳು ತಟಪಟನೆ ಉದುರುತ್ತಿದ್ದವು. ಕುಳಿತಲ್ಲೇ ಸರಿದಾಡಿ ಕೊಂಡ. ನಳಿಕೆಯನ್ನು ಉಜ್ಜಿದ. ಚಳಿಯಾಗಲು ಇನ್ನೂ ಮುದ್ದೆಯಾಗಿ ಕುಳಿತ. 'ಬರ್ ಬರ್'ಅಂತ ಉಜ್ಜಿಕೊಳ್ಳುವ ಸದ್ದು ಮಣಿಯನ್ನು ಎಚ್ಚರಿಸಿತು. 'ಓ ಒಂಟಿಗ ಹಂದಿ ಬಂತೂಂತ ಕಾಣುತ್ತೆ' ಅವನ ಒಳಮನ ಉಬ್ಬಿತು. ಅತ್ತಕಡೆ ಕೋವಿಯನ್ನೆತ್ತಿಕೊಂಡ. ಹಂದಿ ಉಜ್ಜಿಕೊಳ್ಳುವಾಗ ಗುಂಡು ಹೊಡೆಯುವುದು ಕಷ್ಟ. ಈಗ ಅಷ್ಟು ಅರ್ಜೆಂಟಾಗಿ ಗುಂಡು ಹೊಡೆಯಬೇಕಾಗಿಲ್ಲ. ಏಕೆಂದರೆ ಅದು ಹಾಗೆ ಉಜ್ಜಿಕೊಂಡ ಬಳಿಕ ಬೇಂಗೆ ಸೊನೆ ನೆಕ್ಕಲು ಬಂದೇ ಬರುತ್ತದೆ. ಆ ಬೇರಿನತ್ತ ಹಂದಿ ಬಂದರೆ ಸರಿಯಾಗಿ ಹೊಡೆಯ ಬಹುದೆಂದುಕೊಂಡ. ಅದರ ಬೇರು ಬೆಳದಿಂಗಳಲ್ಲಿ ಚೆನ್ನಾಗಿ ಕಾಣುತ್ತಿತ್ತು.

ಹಂದಿ ಉಜ್ಜಿಕೊಳ್ಳುವ ಕಾರ್ಯವನ್ನು ಮುಗಿಸಿತು. ಒಂದೆರಡು ಬಾರಿ 'ಚೆಪ್ ಚೆಪ್' ಅಂತ ಬಾಯಿ ಚಪ್ಪಿತು. ಬೇಟೆಗಾರನ ಇರವನ್ನು ತಿಳಿದೋ ಅಥವಾ 'ನಾನು ಬರುತ್ತಿದ್ದೇನೆ ದಾರಿ ಬಿಡಿ' ಅಂತಲೋ ಏನೋ. ಅದು ಹಾಗೆ ಮಾಡಿ ಮೆಲ್ಲನೆ ಬೇರಿನತ್ತ ಬಂದಿತು. "ಅಬ್ಬಾ! ಮರಿ ಕೋಣದಂಥ ಹಂದಿ!" ಸಕತ್ತಾದ ಒಂಟಿಗ. ಅಡ್ಡಲಾಗಿ ನಿಂತು ಸೊನೆ ನೆಕ್ಕತೊಡಗಿತು. ಮಣಿ ಅತ್ತ ಗುರಿ ಹಿಡಿದ. ಕೋವಿಯ ತುದಿಯಲ್ಲಿ ಸುಣ್ಣದಿಂದ ಗುರುತು ಮಾಡಿದ 'ನೊಣ' ಮಂಜಿನ ಹನಿಯೊಡನೆ ಮಾಸಿಹೋಗಿತ್ತು. ಆದರೂ ಅಂದಾಜು ಮಾಡಿ ಗುರಿಯನ್ನು ಒಪ್ಪಿಸಿ ಟ್ರಿಗರನ್ನು ಅದುಮಿದ. ಅದರ ಗಾತ್ರವ ನೋಡಿ ಕೋವಿ ಹೆದರಿತೋ ಅಥವಾ ಮಣಿ ಹೆದರಿದನೋ! ಟ್ರಿಗರ್ ಬೀಳಲಿಲ್ಲ. ಮತ್ತೊಮ್ಮೆ ಅದುಮಿದ. ಅವನ ಎರಡೂ ಕಣ್ಣುಗಳು ಮುಚ್ಚಿ ಹೋದವು. ಅರೆ! ಇದೇನು ಅದುಮಿದರೂ 'ಕುದುರೆ' ಬೀಳಲಿಲ್ಲ ಲ್ಲೆಂದು ತಬ್ಬಿಬ್ಬಾದ. ಅಷ್ಟು ಹೊತ್ತಿಗೆ ಹಂದಿ ನೆಕ್ಕುತ್ತಿದ್ದುದನ್ನು ನಿಲ್ಲಿಸಿ ಮೈ ನಿಮಿರಿಸಿಕೊಂಡು ಬಾಯಿ ಚಪ್ಪರಿಸಿ ಕಟಕಟನೆ ಹಲ್ಲು ಕಡಿಯಿತು. ಅದರ ಬಾಯಿಂದ ಹೊರಟ ಕೋರೆಗಳು ತಿಂಗಳು ಬೆಳಕಿನಲ್ಲಿ ಹೊಳೆಯುತ್ತಿದ್ದವು. ಮಣಿ 'ಉಂಡೆ' ಹಾಕಿದ್ದ ತೋಟಾವನ್ನೇ ಲೋಡ್ ಮಾಡಿದ್ದ. ಆ ಲೋಡಿಗೆ ಹಂದಿಯೇ ಅಲ್ಲ, ಆನೆಯೂ ಉರುಳೀತು. ಇದರ ಆಟ ನಿಲ್ಲಿಸುತ್ತೇನೆಂದು ಮಣಿ ಮತ್ತೊಮ್ಮೆ ಗುರಿ ಹಿಡಿದು 'ಕೈ ಪಾರೆಗೆ' ಗುಂಡು ಹೊಡೆದ. ಗುಂಡು ಸಿಡಿಯುವುದಕ್ಕೂ ಹಂದಿಯ ಮೈಯಿಂದ ಬೆಂಕಿ 'ಬುಗ್' ಎಂದು ಮೇಲೇಳುವುದಕ್ಕೂ ಸರಿಯಾಯ್ತು. ಹಂದಿ ಬೆಂಕಿಯನ್ನು ತೋರಿ ಕಾಡನ್ನೆಲ್ಲಾ ನುಚ್ಚುನೂರು ಮಾಡುವಂತೆ ಕಚ್ಚಿ ಕಚ್ಚಿ ಹಾಕುತ್ತ ಕಟಕಟನೆ ಹಲ್ಲು ಕಡಿದುಕೊಳ್ಳುತ್ತ ಬಾಯಿ ಚಪ್ಪರಿಸಿತು. ಮಣಿ ಕುಳಿತಿದ್ದ ಮರಕ್ಕೆ ತಿವಿದು ಕಾಡಿನಲ್ಲಿ ಕಣ್ಮರೆಯಾಯಿತು.

ಮಣಿ ಚಳಿಯಲ್ಲೂ ಬೆವತ. ಹಂದಿಯ ಮೈ ಮೇಲೆ ಬೆಂಕಿ ಬರಲು ಕಾರಣವೇನು? ಒಂಟಿಗ ಹಂದಿಗಳ ಮೇಲೆ ಸಾಮಾನ್ಯವಾಗಿ 'ಚವುಂಡಿ' ಕುಳಿತಿರುತ್ತದೆ, ಗುಂಡು ಹಾರಿದಾಗ ತನ್ನ ಇರವನ್ನು ಅದು ಬೆಂಕಿಯ ರೂಪದಲ್ಲಿ ತೋರಿಸುತ್ತದೆ. ಅಂಥವಕ್ಕೆ ಗುಂಡು ತಾಗದು. ಈ ರೀತಿಯ ಮಾತುಗಳನ್ನು ಕೆಲವರು ಆಡಿದ್ದನ್ನು ಮಣಿ ಕೇಳಿದ್ದ. ಇಂದು ಅಂಥದ್ದೇ ನಡೆದು ಹೋಯಿತು. ಅದಕ್ಕೆ ಹೀಗಾಯ್ತು ಅಂದುಕೊಂಡು ಹಂದಿಯ ಒರಟು ಮೈಯಲ್ಲಿ ಒಸರುವ ಕೊಬ್ಬಿಗೆ ಗುಂಡು ತಾಗಿ ಜಾರುವಾಗ ಘರ್ಷಣೆಯಿಂದ ಬೆಂಕಿ ಹೊತ್ತುತ್ತದೆ. ಮಣಿ ಸ್ವಲ್ಪ ಕೆಳಗೆ ಕುಳಿತಿದ್ದರೆ ರೋಷಗೊಂಡ ಹಂದಿಯು ಅವನನ್ನು ಬಲಿ ತೆಗೆದುಕೊಳ್ಳುತ್ತಿತ್ತು.

ಇನ್ನು ಇಲ್ಲಿ ಕುಳಿತು ಪ್ರಯೋಜನವಿಲ್ಲವೆಂದು ಮರದಿಂದ ಇಳಿದ.

ಬೆಳಿಗ್ಗೆ ಕೋವಿಯ ಮಾಲೀಕನಿಗೆ ಸುದ್ದಿ ಮುಟ್ಟಿಸಿದ. ಆತ ಮಣಿಯ ನೆರವಿಗೆ ಮೂವರನ್ನು ಜೊತೆ ಮಾಡಿದ. ಕಾಡಿಗೆ ನುಗ್ಗಿ ಹಂದಿಯನ್ನು ಹುಡುಕುವ ಕೆಲಸಕ್ಕೆ ರೆಡಿಯಾದರು. ರಾತ್ರಿ ಗುಂಡು ಹೊಡೆದ ಜಾಗವನ್ನು ಪರೀಕ್ಷಿಸಿದ. ಗುಂಡು ತಪ್ಪಿರಲಿಲ್ಲ. ಸರಿಯಾಗಿ ಬಡಿದಿದೆ ಎಂದು ಖಾತರಿಯಾಯಿತು. 'ಹಂದಿ ಅರೆ ಜೀವವಾಗಿರಬಹುದು. ಜಾಗ್ರತೆ, ಕಂಡಾಕ್ಷಣ ಗುಂಡು ಹೊಡೆಯಿರಿ' ಎಂದು ಆ ಬಗ್ಗೆ ವಿವರಣೆ ನೀಡಿದ. ಮಣಿ ಕೋವಿಯನ್ನು ಅಣಿಮಾಡಿಕೊಂಡು ಕಳೆದ ರಾತ್ರಿ ಹಂದಿ ಓಡಿದ ಕಡೆ ಹೊರಟ. ಜೊತೆಗೊಬ್ಬನಿರಲಿ ಎಂದು ಗಣಿ ಎಬವನನ್ನು ಕರೆದುಕೊಂಡ.

ಗಣಿ ಬೇಟೆಯಲ್ಲಿ ನುರಿತವನಲ್ಲ. ಆದರೂ ಕೈಯಲ್ಲೊಂದು ಕೋವಿಯಿತ್ತು.

ಹಂದಿ ಓಡಿದ ದಾರಿಯಲ್ಲೇ ಇವರಿಬ್ಬರು ಹೊರಟರು. ಆ ತಡ್ಲೆ ಮರದಿಂದ ಸ್ವಲ್ಪ ದೂರದಲ್ಲಿ ರಕ್ತ ಬಿದ್ದಿದೆ. ಹಂದಿಗೆ ಗುಂಡು ತಾಗಿದ್ದಿರ ಸಾಕ್ಷಿ ಕಂಡು ಹಿಗ್ಗಿದ. ಇಲ್ಲೇ ಎಲ್ಲಾದರೂ ಮಲಗಿರಬಹುದು ಅಥವಾ ಸತ್ತಿರಬಹುದು. ಕಣ್ಣಲ್ಲಿ ಕಣ್ಣಿಟ್ಟು ಮುಂದೆ ಸಾಗಿದರು. ಮಣಿ ಬೇಟೆ ಕೊತ್ತಿಯನ್ನೆಳೆದುಕೊಂಡೇ ಇದ್ದಾನೆ. ಹಿಂದೆ ಇದ್ದ ಗಣಿಯೂ ಬೇಟೆ ಕೊತ್ತಿಯನ್ನೆಳೆದು ನಿಲ್ಲಿಸಿಕೊಂಡಿದ್ದಾನೆ. ಸದ್ದು ಬಂದೆಡೆ ಗುಂಡು ಹೊಡೆವ ಹುನ್ನಾರ ಗಣಿಯದು. ಅಂತೂ ಇಬ್ಬರ ತೋರು ಬೆರಳು ಟ್ರಿಗರಿನ ಮೇಲೆ. ಹೀಗೆ ಸಾಗುತ್ತಿರಲು ರಕ್ತದ ಕಲೆ ಒಂದು ಮುಳ್ಳು ಪೊದೆಯತ್ತ ಸಾಗಿದೆ. ರಕ್ತದ ಮಾಮೂಲಿ ಕಲೆಯಲ್ಲ, ಬದಲಿಗೆ 'ನಂಬುಗೆ' ಸುರಿದಂತಿದೆ. ಒಂದೋ ಅದು ಪೊದೆಯೊಳಗೆ ಅಥವಾ ಅದರಾಚೆ ಸತ್ತಿರಬಹುದು. ಇರಲಿ, ಈ ಪೊದೆಯನ್ನಂತೂ ನೋಡಲೇ ಬೇಕು. ಆದರೆ ನಡೆದು ಹೋಗಲಾಗದು. ಬಗ್ಗಿ ಹೋಗಬೇಕು. ಬಗ್ಗಿದರೂ ಆಗದು. ಕುಕ್ಕರ ಕಾಲಲ್ಲಿ ಕುಳಿತು ಸಾಗಬೇಕು. ಆದೂ ಆಗುತ್ತಿಲ್ಲ. ಮಲಗಬೇಕು. ತೆವಳಿ ತೆವಳಿ ಸಾಗಬೇಕು. ಅಂಥಾ ಜಿಗ್ಗಿನೊಳಗೆ ತೆವಳುತ್ತಾ ತೆವಳುತ್ತಾ ಮಣಿ ಮುಂದೆ ಹೋಗುತ್ತಿದ್ದಾನೆ. ಗಣಿಯೂ ಹಾಗೇ ಹಿಂಬಾಲಿಸುತ್ತಿದ್ದಾನೆ. ಪೊದೆಯ ನಡುಭಾಗಕ್ಕೆ ತಲುಪಿದರು. ಸುಸ್ತಾಯಿತು. ನಿಲ್ಲಬೇಕೆನಿಸಿತು. ಆದರೆ ಚೂರಿ ಮುಳ್ಳು ಮೇಲೇಳಲು ಬಿಡದು. ತೆವಳಿದಂತೆ ಒಣ ಮುಳ್ಳು ಮೊಣಕೈ, ಮಂಡಿಗೆ ಚುಚ್ಚಿಕೊಳ್ಳುತ್ತಿತ್ತು. 'ಹಾಳು ಹಂದಿ ಇಂಥ ಜಿಗ್ಗಿನೊಳಗೆ ಬರಬೇಕಿತ್ತಾ" ಎಂದುಕೊಂಡ. ತನ್ನ ಹಿಂದೆ ಇದ್ದ ಗಣಿಗಂತೂ "ಈ ನರಕದ ಬೇಟೆ ನನಗೇಕೆ ಬೇಕಿತ್ತು" ಅಂತ ಮಂತ್ರ ಹೇಳಿ ಕೊಳ್ಳುವಂತಾಗಿತ್ತು. ಕೋವಿಯನ್ನು ನೆಲದಲ್ಲಿ ಇಡುವಂತಿಲ್ಲ. ಮೊಣಕೈಗಳು, ಮಂಡಿಗಳು ಮುಂದೆ ಹೋಗಲು ಸಾಧ್ಯವೇ ಇಲ್ಲವೆಂದು ಸ್ಟ್ರೈಕ್ ಮಾಡುತ್ತಿದ್ದವು. ಆದರೇನು? ನಾಲಗೆಯ ರುಚಿ ಹಾಗೆ ನಿಲ್ಲಲು ಬಿಡುತ್ತಿರಲಿಲ್ಲ. ನೊರೆ ರಕ್ತವನ್ನು ಕಂಡು ಮನ ಕುಣಿಯುತ್ತಿತ್ತು.

ಗಣಿಯು ಚತುಷ್ಪಾದಿಯಾಗಿ ಕಾಲೆಳೆದು ಕೈಯೆಳೆದು ಸುಸ್ತಾದ. ಬಲಗೈಯ ತೋರುಬೆರಳು ಮಾತ್ರ ಟ್ರಿಗರಿನ ಮೇಲೆ ಅದುಮುವ ಸ್ಥಿತಿಯಲ್ಲೇ ಇದೆ. ಹೀಗೆ ಸಾಗುತ್ತಿರಬೇಕಾದರೆ ಗಣಿಯ ಬಲತೋಳಿನ ಮೇಲೊಂದು ಮುಳ್ಳು ಚುಚ್ಚಿತು. ಟ್ರಿಗರಿನ ಮೇಲಿದ್ದ ಬೆರಳು ಅದುಮಿ ಹೋಯಿತು ! ಗುಂಡು ಸಿಡಿದೇ ಬಿಟ್ಟಿತು. ಸಿಡಿದ ಗುಂಡು ಮುಂದೆ ತೆವಳಿ ಸಾಗುತಿದ್ದ ಮಣಿಗೆ ಬಡಿಯಬೇಕೆ?

ಗುಂಡಿನ ಸದ್ದು ಕೇಳಿ ದೂರದಲ್ಲಿದ್ದ ಇನ್ನೊಂದು ತಂಡ ಸಧ್ಯ ಹಂದಿಗೆ ಗುಂಡು ಹೊಡೆದರಲ್ಲ ಅಂದುಕೊಂಡರು. ಪೊದೆಯತ್ತ ನುಗ್ಗಬೇಕೆನ್ನುವಾಗ "ಅಯ್ಯೋ.... ಅಯ್ಯಯ್ಯೋ... ಅಯ್ಯೋ...." ಎಂಬ ಆರ್ತನಾದ! ಇವರು ಪೊದೆಯೊಳಗೆ ಸರಸರನೆ ನುಗ್ಗಿದರು. ಮಣಿ ಉರಿ ತಾಳಲಾರದೆ ಉರುಳಾಡಿ ರೋದಿಸುತ್ತಿದ್ದ. ಇವನ ಸ್ಥಿತಿಯನ್ನು ಕಂಡ ಉಳಿದವರು ಚಿಂತೆಗೀಡಾದರು.

ಪಂಚೆಯನ್ನು ಹರಿದು ಗಾಯಕ್ಕೆ ಕಟ್ಟಿದರು. ಮಣಿ ಪ್ರಜ್ಞೆ ಕಳೆದುಕೊಂಡ. ಅವನನ್ನು ಹೊತ್ತು ಹೊರತರಲಾರದೆ ಮುಳ್ಳಿನ ಪೊದೆಯಿಂದ ದರದರನೆ ಎಳೆದರು. ಮುಳ್ಳು ದಾರಿಯ ಮೇಲೆ ಬಿದ್ದಿದ್ದ ಹಂದಿಯ ರಕ್ತದ ಜೊತೆ ಮಣಿಯ ರಕ್ತ ಕೂಡ ಬೆರೆತು ಹೋಯಿತು.

---

## ಭಾರತ ಸ್ವಾತಂತ್ರವಾದಾಗ

ಜೈ ಶ್ರೀವರ ದೈವವೆ ಜೈ ಪಾವನ ರಂಗಿನ ವರ್ಣಚ್ಛಾದಿತ
ತ್ರಿವರ್ಣ ರಂಜಿತ ಚ್ಯೋದ ಕವೀ ಜೈ ಶ್ರೀವರ ದೈವವೆ ಜೈ||
ಸಸ್ಯಶ್ಯಾಮಲ ವರ್ಣಚ್ಛಾದಿತ ಪಚ್ಚೆಯ ಬಣ್ಣ|
ಸಿರಿಯನು ತೋರುಘ ಹೊಂಬಣ್ಣವಿದೂ||
ಕೇಂದ್ರ ವಿರಾಜಿತ ಅಶೋಕ ಚಕ್ರ
ರಾರಾಜಿಸಲಿ ದಿವ್ಯ ಪತಾಕೆ ಜೈ||
ಭಾರತ ಮಾತೆಯ ಘನತೆಯ ಸಾರಿ
ಭಾರತೀಯರೊಳು ಹರುಷವ ಬೀರಿ
ಹಿಂದೂ ಮುಸ್ಲಿಂ ಐಕ್ಯವ ಹರಸಿ
ಅಖಂಡ ಹಿಂದು ಸ್ಥಾನವ ಗಳಿಸಿ ಜೈ||
ಭಾರತ ವೀರರ ಪ್ರತಿಭೆಯ ಬೀರಿ
ಪದಾಧಿಕಾರವ ಹೋರಾಡಿ
ಸ್ವಾತಂತ್ರೋದಯವನು ಸಾರಿ
ನವ ಚೈತನ್ಯವನು ಜನತೆಯೊಳು ಹರಡಿ ಜೈ||
ಜೈ ಶ್ರೀವರ ದೈವವೆ ಜೈ ಪಾವನ ರಂಗಿನ ವರ್ಣಚ್ಛಾಧಿತ
ತ್ರಿವರ್ಣ ರಂಜಿತ ಚ್ಯೋದ ಕವೀ ಜೈ ಶ್ರೀವರ ದೈವವೆ ಜೈ||

– ರಚನೆ ಬೈತಡ್ಕ ಜಾನಕಿ

## ನಮ್ಮೆಲ್ಲರ ಕೊಡಗು ಸಂಗಾತಿ

ಹೊರ ನಾಡಿನ ಮಧ್ಯದಲ್ಲಿ
ಹೊನ್ನು ನಾಡಿನ ತೀರದಲ್ಲಿ
ಪಕ್ಷಿಗಳ ಚಿಲಿಪಿಲಿ ಸದ್ದಲ್ಲಿ
"ಬೆಳಗಿತು ನಮ್ಮ ಸಂಗಾತಿ"
ಕವಿ ಕೋಗಿಲೆಯ ಇಂಪಾದ ಧ್ವನಿಯಲ್ಲಿ
ನೀರಿನ ಝುಳ ಝುಳ ಸದ್ದಲ್ಲಿ
ಸಿಂಹ ರಾಜನ ಗರ್ಜನೆಯಲ್ಲಿ
"ಬೆಳಗಿತು ನಮ್ಮ ಕೊಡಗು ಸಂಗಾತಿ"
ಹೂ ಗಿಡಗಳ ಸೊಗಸಾದ ತೋಟದಲ್ಲಿ
ಹೊನಲ ಜಲಪಾತದಲ್ಲಿ
ಬೆಟ್ಟ ಗುಡ್ಡಗಳ ಮಧ್ಯದಲ್ಲಿ
ಹೆದರದೆ ಬರೆದೆವು ಕವಿತೆಯ
ಬೆಳಗಲಿ ನಮ್ಮ ಸಂಗಾತಿ
ನಮ್ಮೆಲ್ಲರ ಕೊಡಗು ಸಂಗಾತಿ

– ಆನೇರ ಶೋಭಾ ಬಾಲಕೃಷ್ಣ,
ಚೇರಂಬಾಣೆ.

---

ಹೇಳುವುದು ಆಚಾರ, ಮಾಡುವುದು ಅನಾಚಾರ

## ಕಾಲೇಜಿಗೋದ ಚೋಮುಣಿ ಹೈದ

ಚೋಮುಣಿ ಹೈದಂವ ಹೈಸ್ಕೂಲ್ ಮುಕ್ಸಿದ್ ಕಾಲೇಜಿಗೋತಿತ್ತ್|
ಶಾಲೆಲಿ ಕೂಡಾ ಓದಿಕೆ ಚೋಮುಣಿ ಬಾರಿ ಹುಷಾರಿತ್ತ್|
ಅಂವ ಕ್ಲಾಸಿಗೆ ಫಸ್ಟಿತ್ತ್| ಅಂವನ ಗುಣನು ಲ್ಯಾಕಿತ್ತ್||
ಆಟ ಓಟಲಿಕೂಡಾ ಚೋಮುಣಿ ಎಲ್ಲಾ ಗೆಲ್‌ತಿತ್ತ್|
ಶಾಲೆಗೆ ಹೋಕನ ಚೋಮುಣಿ ಹೈದಂಗೆ ಬಾರಿ ಹೆಸರಿತ್ತ್|
ಹಾಂಗೆ ಶಾಲೆಗು ಹೆಸರಿತ್ತ್| ಹೆಸರ್ ಊರ್‌ಲುಹರ್ಡಿತ್ತ್|| ಚೋ||

ಚೋಮುಣಿ ಕಾಲೇಜ್‌ಗೋಗಿದ್ ಒಳ್ಳೊಳ್ಳೆ ಗೂಡೆಗಳ ಕಂಡತ್ತ್|
ಗೂಡೆಗಳ ಕಂಡ್‌ದ್ ಹೈದಂಗೆ ಅವಂಗೆ ಬಾರಿ ಕುಸಿ ಆತ್|
ಅವೆರನೋಡಿಕೆ ಸುರ್‌ಮಾಡ್ತ್| ಅವಂಗೆ ಓದುದೆ ಮರ್‍ತ್ತೋತ್||
ಅವೆನಾ ಕ್ಲಾಸ್‌ಲಿ ಗೂಡೆಗ ಇದ್ದದ್ ಒಟ್ಟಿಗೆ ಬರಿ ಹತ್ತ್|
ಚೋಮುಣಿ ಗೂಡೆಗಳ ಹಿಂದೆನೆ ಹೋಗಿದ್ ಒಂದಕೆ ಬಲೆ ಬೀಸ್ತ್|
ಆ ಗೂಡೆನು ಒಪ್ಪಿತ್ತ್| ಇಬ್ಬರ ಲವ್‌ನು ಬೆಳ್ದೋತ್...||ಚೋ||

ಬೆಳ್ಳಂಗೆ ತೆಳ್ಳಂಗೆ ಎತ್ತರ ಇರುವ ಗೂಡೆನು ಪೊರ್ಲಿತ್|
ಎತ್ತಂದ ನೋಡಿರು ಗೂಡೆನ ಪೊರ್ಲು ಎದ್ದ್ ಕಾಣ್ತಿತ್ತ್|
ಗೂಡೆ ಮಣ ಮಣ ಹೊಳೆತಿತ್ತ್| ಇಂವ ಲವ್‌ಲಿ ಪಾಸಾತ್|
ಅಂತೂ ಚೋಮುಣಿ ಕಾಲೇಜ್ ಸೇರಿದ್ ಮನ್‌ಸ್‌ಗೆ ಕುಸಿ ಆತ್|
ಗೂಡೆಗೆ ಬೇಕಾಗಿ ಅಪ್ಪನ ಜೇಬುಂದ ದುಡ್ಡನು ಕದಿತ್ತಿತ್ತ್||ಚೋ||
ವಿಷಯ ಮನೆವ್ಕೂ ಗೊತ್ತಾತ್| ಅಪ್ಪನ ಪೆಟಿಗೆನು ಕಾಲ್ಯಾತ್||

ಕಾಲೇಜಿಗೋನೆಂತ ಚೋಮುಣಿ ಪಕ್ಕದ ತೋಟಕು ನುಗ್ಗ್‌ತಿತ್ತ್|
ತೋಟಂದ ಬಾಕನ ಜೋಬುಲಿ ತುಂಬಾ ಯಾಲಕ್ಕಿ ತಾ ತಿತ್ತ್|
ಮಾರಿದ್ ಬೈನೆಕಳ್ಳ್ ಕುಡಿತಿತ್ತ್| ಮತ್ತೆ ಬೀಡಿ ಸೇದ್‌ತ್ತಿತ್ತ್||
ಚೋಮುಣಿನ ಕಾಲೇಜಿಗೆ ಕಳ್ಸಿದ್ ಪಾಪ ಅಪ್ಪಂಗೆ ಬೇಜರಾತ್|
ಚೋಮುಣಿ ಮಾಡಿದ ಕೆಲ್ಸನ ನೋಡಿದ್ ಕಾಲೇಜ್ ಬುಡ್ಸಾತ್|
ಆ ವರ್ಸನು ಫೈಲಾತ್| ಮತ್ತೆ ಗೂಡೆನು ತೊಪ್ಪ್ಯೋತ್||ಚೊ||

ಚೋಮುಣಿ ಈಗ ಊರ್‌ಗೆ ಬಂದ್‌ದ್ ಗದ್ದೆಲಿ ಹೂಡ್ತುಟ್ಟು|
ಕೆಸರ್‌ಲಿ ಕಷ್ಟ ಬಂದ್‌ದ್ ಚೋಮುಣಿ ನಾಟಿಮಾಡ್ತುಟ್ಟು|
ಲ್ಯಾಕ್‌ಲಿ ಬೆಳೆನು ತೆಗಿತುಟ್ಟು| ಈಗ ಲವುನು ಮರ್ತ್ತೋಗ್ಟು||
ಚೋಮುಣಿ ಪಾಪ ಹಳ್ಯವ ಹೆಂಗೊ ತೊಪ್ಪ್ಯೋಗಿ ಲವ್ ಮಾಡ್ತ್|
ಗೂಡೆಗಳ ಲವ್ ಮಾಡಿರೆ ಆಗುವ ಕರ್ಚನು ಗೊತ್ತಾತ್|
ಊರೆಲ್ಲಾ ಸಾಲಾತ್|ಅವನ ಹೆಸರೂ ಹಾಳಾತ್||ಚೋ||

ಊರ್‌ಗೆ ಬಂದಾ ಚೋಮುಣಿಗೊಂದು ಗೂಡೆನ ನೋಡ್ಯಾತ್ತ್|
ನೋಡಿದ ಗೂಡೆನ ಚೊಮ್ಮಿಗೆ ತಂದ್ ಮದುವೆನು ಮಾಡ್ಯಾತ್|
ಈಗ ಮಕ್ಕಳು ಮೂರಾತ್| ಅದರ್ಲಿ ಎರ್ಡ್ ಹೆಣ್ಣಾತ್|
ಕಾಲೇಜಿಲಿ ಲವ್ ಮಾಡ್ದಾ ತೊಪ್ಪಿಗೆ ಹಳ್ಳಿಗೆ ಬಾಕಾತ್|
ಓದುದು ಬುಟ್ಟು ಚೋಮ್ಮಿಗೆ ಲವ್ ಎಂತಕೆ ಬೇಕಾತ್|
ಅಂವ ಸುಮ್ಮನೆ ಇರಕಾತ್| ಇಲ್ಲೆ ಪಾಠ ಓದುಕಾತ್||ಚೋ||

**ರಚನೆ : ಹೊದ್ದೆಟ್ಟಿ ಭವಾನಿ ಶಂಕರ್.**

## ನಿರ್ಗತಿಕ

ರಸ್ತೆಯ ಉದ್ದಕ್ಕೂ ಒಬ್ಬನೇ ಹಾಗೆಯೇ ಯೋಚಿಸುತ್ತಾ
ನಡೆದು ಹೋಗುತ್ತಿದ್ದೆ ನಾನು
ಓಡಾಡಲು ಒಂದು ಕಾರು ಇಲ್ಲ. ನನ್ನ ಹೆಸರಿನಲ್ಲಿ ಒಂದು
ಬಂಗ್ಲೆಯೂ ಇಲ್ಲ ಎಂದೆನುತ ನಾನು
ಎಂಥ ಕಷ್ಟದ ಜೀವನ್ನ ಈ ತರ ಬದುಕಿ ಏನೂ
ಪ್ರಯೋಜನವಿಲ್ಲ ಎಂದು ಯೋಚಿಸುತ್ತಿದ್ದೆನು.
ಆವಾಗ ನನ್ನ ಕಣ್ಣಿಗೆ ಒಬ್ಬ ವ್ಯಕ್ತಿ ಅಂದರೆ ಒಬ್ಬ
"ನಿರ್ಗತಿಕ "ನನ್ನ ಕಣ್ಣ ಮುಂದೆ ನಿಂತನು.
ನನಗೆ ಬಂಗ್ಲೆ ಇಲ್ಲ. ಆದರೆ ಕೊನೆ ಪಕ್ಷ
ನನಗೆ ಇರಲು ಒಂದು ಮನೆಯಾದರೂ ಇದೆ.
ಆದರೆ - ಆ " ನಿರ್ಗತಿಕ" ಒಬ್ಬಂಟಿಗನಾಗಿ ಅಲೆದಾಡುತ್ತಿದ್ದಾನೆ.
ನನಗೆ ಆಡಂಬರದ ಉಡುಗೆ ಇಲ್ಲದಿದ್ದರೂ,
ಮೈ ಮುಚ್ಚಲು ಬಟ್ಟೆಯಾದರೂ ಇದೆ.
ಆದರೆ ಆ ಪಾಪ ನಿರ್ಗತಿಕನಿಗೆ ಅದು ಇಲ್ಲ
ಓ ದೇವರೆ, ಎಂದು ಆನಂದದ ನಿಟ್ಟುಸಿರು ಬಿಟ್ಟೆ ನಾನು
ನನ್ನ ಜೀವನ ಪರಿಪೂರ್ಣ ಎಂದು ಭಾವಿಸಿದೆ ನಾನು
ಅಂದರೆ ಅದರಲ್ಲಿ ಏನೂ ಕೊರತೆ ಇಲ್ಲ ಎಂದೆಣಿಸಿದೆ ನಾನು

**ಬರೆದವರು : ಬಾರಿಕೆ ಮನೆ ತೀರ್ಥಕುಮಾರ, ಭಾಗಮಂಡಲ.**

---

## ತಿದ್ದು ಪಡಿ

ಕೊಡಗು ಸಂಗಾತಿ ಸಂಪುಟ 4 ಸಂಚಿಕೆ 19ರ ಮುಖ ಪುಟದಲ್ಲಿ ಮಿಲ್ಲೆನಿಯಂ 2000ದ ಸಿಡ್ನಿ ಒಲಂಪಿಕ್ಸ್‌ನಲ್ಲಿ 69ಕೆ.ಜಿ. ಭಾರ ಎತ್ತಿ ಭಾರತ ಮಹಿಳೆ ಅನ್ನುವುದನ್ನು 69ಕೆ.ಜಿ. ವರ್ಗದಲ್ಲಿ ಭಾರತ ಮಹಿಳೆ ಎಂದು ಓದಿಕೊಳ್ಳುವುದು. ತಾಂತ್ರಿಕ ಮುದ್ರಣ ದೋಷಕ್ಕೆ ವಿಷಾದಿಸುತ್ತೇವೆ.

**– ಸಂಪಾದಕಿ.**

---

## ನಿಧನ

ಕಾರುಗುಂದ ಗ್ರಾಮದ ಪಾಣತ್ತಲೆ ದಿ|| ಕಾರ್ಯಪ್ಪನವರ ಧರ್ಮಪತ್ನಿ ಮಾಯಮ್ಮನವರು ದಿನಾಂಕ 20-9-2000ರ್ಲಿ ವೈಕುಂಠವಾಸಿಯಾದರು. ಇವರಿಗೆ 87 ವರ್ಷ ಪ್ರಾಯವಾಗಿತ್ತು. ಇವರು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ ಎಂದು ತಿಳಿದು ಬಂದಿದೆ.

---

## ಸೂಕ್ತಿ

ಕೊಡಗು ಜಿಲ್ಲೆಯೇ ನಮ್ಮ ಬಾಳಿನ ಮುನ್ನುಡಿ
ಕೊಡಗು ಸಂಗಾತಿಯೇ ನಮ್ಮ ಹೃದಯದ ಕನ್ನಡಿ...

**ಸಬ್ಬಂಡ್ರ, ಚಿತ್ರಾ, ಕುಶಾಲಪ್ಪ**

---

**ದೊಡ್ಡವರು ಮಾಡಿದರೆ ಆಚಾರ, ಬಡವರು ಮಾಡಿದರೆ ವ್ಯಭಿಚಾರ**

## ಸಂಗಾತಿ ಭವಿಷ್ಯ : ಅಕ್ಟೋಬರ್ 16 ರಿಂದ 31, 2000 ಜ್ಯೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

ಮೇಷ ರಾಶಿ : ದೈವಾನುಕೂಲವಿದೆ. ಶತ್ರುಗಳು ದೂರವಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುತ್ತದೆ. ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ ಇದೆ. ದೇವತಾರಾಧನೆ ಮಾಡಿ.

ವೃಷಭ ರಾಶಿ : ಗೃಹ ವಲಯದಲ್ಲಿ ನವಗ್ರಹದ ಪೂಜೆ ಮಾಡಿಕೊಂಡು ಬನ್ನಿ. ಸಂಸಾರವಲಯದಲ್ಲಿ ಆರೋಗ್ಯವು ಹದಗೆಡುವುದು. ಹಣಕಾಸಿನ ವ್ಯವಹಾರದಲ್ಲಿ ತುಸು ನೆಮ್ಮದಿ ಉಂಟಾದಿತು.

ಮಿಥುನ ರಾಶಿ : ಗೃಹ ವಲಯದಲ್ಲಿ ತುಸು ನೆಮ್ಮದಿ. ಶತ್ರುಗಳಿಂದ ಉಪಟಳ ತಪ್ಪಿದ್ದಲ್ಲ. ವ್ಯವಹಾರ ಉದ್ಯೋಗದಲ್ಲಿ ಸಾಧಾರಣ ಅಭಿವೃದ್ಧಿ ದೇವತಾರಾಧನೆ ಮಾಡಿಕೊಂಡು ಬನ್ನಿ.

ಕರ್ಕಾಟಕ ರಾಶಿ : ದೈವಾನುಕೂಲವಿಲ್ಲ. ಉದ್ಯೋಗ, ವ್ಯವಹಾರದಲ್ಲಿ ಸಾಧಾರಣ ಪ್ರಗತಿ. ಗೃಹ ವಲಯದಲ್ಲಿ ತುಸು ನೆಮ್ಮದಿ ಇರುವುದು. ಮಿತ್ರರಿಂದ ಹೊಸ ಸಮಾಚಾರ ಕೇಳಲಿದ್ದೀರಿ. ನವಗ್ರಹಗಳ ಆರಾಧನೆ ಮಾಡಿ.

ಸಿಂಹ ರಾಶಿ : ದೈವಾನುಕೂಲವಿದೆ. ಗೃಹ ವಲಯದಲ್ಲಿ ಸುಖ ಸಿಗುವುದು. ಹಣಕಾಸು ಸ್ವಲ್ಪ ಮಟ್ಟಿಗೆ ಕೈಗೂಡುವುದು. ಆರೋಗ್ಯದ ಬಗ್ಗೆ ಎಚ್ಚರವಿರಲಿ. ವಿಘ್ನೇಶನನ್ನು ಆರಾಧಿಸುವುದರಿಂದ ಸರ್ವ ಕಾರ್ಯಗಳಲ್ಲಿ ಯಶಸ್ಸು.

ಕನ್ಯಾ ರಾಶಿ : ದೈವಾನುಕೂಲವಿದೆ. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ. ಗೃಹ ವಲಯದಲ್ಲಿ ಕಿರಿಕಿರಿ ತಪ್ಪಿದ್ದಲ್ಲ. ಹೊಸ ವಾಹನ ಖರೀದಿಸುವ ಯೋಗವಿದೆ. ವಿಷ್ಣುವಿನ ಆರಾಧನೆ ಮಾಡಿರಿ.

ತುಲಾ ರಾಶಿ : ದೈವಾನುಕೂಲವಿದೆ. ಗೃಹ ವಲಯದಲ್ಲಿ ಕಿರಿ ಕಿರಿ ಉಂಟಾದೀತು. ಕೈಗೊಂಡ ಕಾರ್ಯಗಳಲ್ಲಿ ಸ್ವಲ್ಪ ಮಟ್ಟಿಗೆ ಸಫಲತೆಯನ್ನು ಕಾಣುವಿರಿ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಸಂಭವಿಸಬಹುದು.

ವೃಶ್ಚಿಕ ರಾಶಿ : ಈಗ ರವಿ ಬಲವಂತೂ ಚೆನ್ನಾಗಿಯೇ ಇದೆ. ಇರುವ ಉದ್ಯೋಗದಲ್ಲಿ ಸುಧಾರಣೆ. ಹಿರಿಯರ ಸಹಕಾರ ನಿಮ್ಮ ಕಾರ್ಯ ಸಾಧನೆಗೆ ಅನುಕೂಲ. ಆದಾಯವೂ ಒದಗಿ ಸಂತಸಕ್ಕೂ ಕಾರಣ. ಕೆಲವೊಂದು ನಿಧಾನವೆಂದೆನಿಸೀತು ಬೇಸರಕ್ಕೆ ಕಾರಣವಿಲ್ಲ. ಅವಿವಾಹಿತರಿಗೆ ಗುರುಬಲ ಸಂಪೂರ್ಣ ನಿಧಾನ ಬೇಡ.

ಧನಸ್ಸು ರಾಶಿ : ದೈವಾನುಕೂಲವಿಲ್ಲ. ಆರೋಗ್ಯ ಹದಗೆಡುವ ಸಂಭವವಿದೆ ಹಣಕಾಸಿನ ವ್ಯವಹಾರದಲ್ಲಿ ನಷ್ಟ, ಕಿರಿಕಿರಿ ತಪ್ಪಿದ್ದಲ್ಲ. ಅಪಘಾತ ಸಂಭವವಿದೆ. ಹೊಸ ವ್ಯವಹಾರಕ್ಕೆ ಇದು ಸಕಾಲವಲ್ಲ.

ಮಕರ ರಾಶಿ : ದೈವಾನುಕೂಲವಿದೆ. ಹಲವು ರೀತಿಯಿಂದ ಹಣಕಾಸು ಕೈಗೂಡಿ ನೆಮ್ಮದಿ ಆಗುವುದು. ಗೃಹ ವಲಯದಲ್ಲಿ ಕಿರಿ ಕಿರಿ ಇದೆ. ಹೊಸ ವಾಹನ ಖರೀದಿ ಯೋಗವಿದೆ. ಶನಿಯಾರಾಧನೆ ಮಾಡಿರಿ.

ಕುಂಭ ರಾಶಿ : ದೈವಾನುಕೂಲವಿಲ್ಲ. ಗೃಹ ವಲಯದಲ್ಲಿ ತುಸು ನೆಮ್ಮದಿ. ವ್ಯಾಪಾರ ಉದ್ಯೋಗದಲ್ಲಿ ಸ್ವಲ್ಪ ಮಟ್ಟಿಗೆ ನೆಮ್ಮದಿ. ಆರೋಗ್ಯದ ಬಗ್ಗೆ ನಿಗಾ ಇರಲಿ. ಶನಿಯಾರಾಧನೆಯಿಂದ ನೆಮ್ಮದಿ.

ಮೀನ ರಾಶಿ : ದೈವಾನುಕೂಲವಿಲ್ಲ. ಅನಾವಶ್ಯಕ ಪ್ರಯಾಣದಿಂದ ನೆಮ್ಮದಿ ಇಲ್ಲ. ಮಿತ್ರರೇ ಶತ್ರುವಾಗುವ ಕಾಲ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ. ಗುರುವಿನ ಆರಾಧನೆಯಿಂದ ನೆಮ್ಮದಿ.

---

12ನೇ ಪುಟದಿಂದ

| | | | |
|---|---|---|---|
| 41) | ವಂಶಿ | - | ಎಂ. ಜಿ. ಭೀಮರಾವ್ |
| 42) | ವೀಸಿ | - | ವೀ. ಸೀತರಾಮಯ್ಯ |
| 43) | ತ್ರಿವೇಣಿ | - | ಎಚ್. ಎಸ್. ಅನಸೂಯ |
| 44) | ಸಿ. ಪಿ. ಕೆ | - | ಸಿ. ಪಿ. ಕಷ್ಣಕುಮಾರ್ |
| 45) | ಭಾರತೀ ಸುತ | - | ಎಸ್. ಆರ್. ನಾರಾಯಣ ರಾಯರು |
| 46) | ಸುಜನ | - | ಎಸ್. ಜೆ. ನಾರಾಯಣ ಶೆಟ್ಟಿ |
| 47) | ಕಾಕೆಮಾನಿ | - | ಬಿ. ಡಿ. ಸುಬ್ಬಯ್ಯ |
| 48) | ಕಾವ್ಯಾನಂದ | - | ಡಾ. ಸಿದ್ಧಯ್ಯ ಪುರಾಣಿಕ |
| 49) | ಮದುರ ಚೆನ್ನ | - | ಸಿದ್ದಗಂಗಪ್ಪ ಚೆನ್ನಮಲ್ಲಪ್ಪ ಗಲಗಲಿ |
| 50) | ಅಂಬಿಕಾತನಯದತ್ತ | - | ದತ್ತಾತ್ರೇಯ ರಾಮಚಂದ್ರ ಬೇಂದ್ರೆ |
| 51) | ಜ್ಯೋತಿ ಹೊಸೂರು | - | ಜೋತಪ್ಪ ಶಿವಪ್ಪ ಹೊಸೂರ |

ಗೋವಿಂದ ಅ. ಪುನೀತಾಕುಮಾರ

---

ಊಟಕ್ಕೆ ಇಲ್ಲದಿದ್ದರೂ ಉಪಚಾರಕ್ಕೆ ಕಮ್ಮಿ ಇಲ್ಲ

8ನೇ ಪುಟದಿಂದ

ಮುಖ್ಯ ಅತಿಥಿಯವರಾದ ಶ್ರೀಮಾನ್ ಪಡ್ನಂಬೈಲು ವೆಂಕಟ್ರಮಣಗೌಡರು ತಮ್ಮ ಭಾಷಣದಲ್ಲಿ ತಾನು ಪ್ರಥಮ ಬಾರಿಗೆ 1970ರಲ್ಲಿ ಈ ಸಮಾಜದ ಪ್ರಥಮ ಅಧ್ಯಕ್ಷರಾದ ಸಂದರ್ಭ ಮತ್ತು ಅಂದಿನಿಂದ ಇಂದಿನವರೆಗೆ ಸಮಾಜವು ಹಂತ ಹಂತವಾಗಿ ಬೆಳೆದು ಬಂದ ರೀತಿಯನ್ನು ಮೆಲುಕು ಹಾಕಿ ಈ ಸಮಾಜದ ಸಾಧನೆಗಾಗಿ ಸಂತೋಷ ವ್ಯಕ್ತ ಪಡಿಸಿದರು. ತನಗೆ ಈ ಸಮಾರಂಭದಲ್ಲಿ ಭಾಗಿಯಾಗಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ಸಮಾಜವನ್ನು ಅಭಿನಂದಿಸಿದರು.

ಕೊಡಗು ಮತ್ತು ದ. ಕ. ಗೌಡ ಸಮಾಜವು ದಾಸರ ಹಳ್ಳಿಯಲ್ಲಿ ಖರೀದಿಮಾಡಲು ಉದ್ದೇಶಿಸಿದ ನಿವೇಶನದ ಮಾಲಿಕರಾದ ಶ್ರೀಮಾನ್ ಸಿದ್ಧಗಂಗಯ್ಯನವರನ್ನು ಸಭೆಗೆ ಪರಿಚಯಿಸಿ ಹಾರಾರ್ಪಣೆ ಮಾಡಿ ಗೌರವಿಸಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಮ್ಮ ಸಮಾಜಕ್ಕೆ ಖರೀದಿಸಲು ಉದ್ದೇಶಿಸಿರುವ ನಿವೇಶನಕ್ಕೆ ಪಾವತಿಸುವಲ್ಲಿ ತಮ್ಮ ಶಕ್ತಿಯನುಸಾರ ಧನ ಸಹಾಯ ಮಾಡುವಂತೆ ಕೋರಿದರು ಮತ್ತು ಈ ಸಮಾರಂಭವು ಯಶಸ್ವಿಯಾಗಿ ನಡೆಯಲು ಸಹಕರಿಸಿದ ಎಲ್ಲರಿಗೂ ಅಭಿನಂದಿಸಿದರು.

ಅಧ್ಯಕ್ಷರಾದ ಶ್ರೀ ದಂಬೆಕೋಡಿ ಆನಂದನವರಿಗೆ, ಅವರು ಅಧ್ಯಕ್ಷರಾಗಿದ್ದು ಪ್ರತಿಯೊಂದು ಕಾರ್ಯಚಟುವಟಿಕೆಗಳಲ್ಲೂ ತನ್ನನ್ನು ತೊಡಗಿಸಿಕೊಂಡುದನ್ನು ಪರಿಗಣಿಸಿ ಒಂದು ಟ್ರೋಫಿಯನ್ನಿತ್ತು ಗೌರವಿಸಲಾಯಿತು. ಮುಖ್ಯ ಅತಿಥಿಯವರಿಗೆ ಶ್ರೀಮಾನ್ ಕೋಳಿಬೈಲು ಚೆನ್ನಪ್ಪನವರ ಕೈಯಿಂದ ನೆನಪಿನ ಕಾಣಿಕೆ ಕೊಡಲಾಯಿತು.

ಕೊನೆಯದಾಗಿ ಕಾರ್ಯದರ್ಶಿಯವರು ಧನ್ಯವಾದ ಸಮರ್ಪಣೆ ಮಾಡಿದರು.

ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು. ಮಧ್ಯಾಹ್ನ ಭೋಜನದ ಬಳಿಕ ಆಟೋಟ, ಪಂದ್ಯಾಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಿಗೆ ಮುಖ್ಯ ಅತಿಥಿ ಮತ್ತು ಇತರ ಗಣ್ಯರ ಕೈಯಿಂದ ಬಹುಮಾನ ವಿತರಿಸಲಾಯಿತು.

ವರದಿ : ದಿನಕರ ಗೌಡ ನೂಜಿ, ಕಾರ್ಯದರ್ಶಿ

---

## ದೇಶಾಭಿಮಾನ

ಒಮ್ಮೆ ರಜಿತ, ಉಮೇಶ , ಚರಣ್ ದೇಶಾಭಿಮಾನದ ಬಗ್ಗೆ ಹರಟೆಕೊಂಡಿತ್ತಿದ್ದೊ.

ನಾನ್ ವಿದೇಶಿ ವಸ್ತುಗಳನ್ನ ನನ್ನ ಜೀವಮಾನಲಿ ತಕಂಬದುಲೆ, ತೇಳಿ ಚರಣ್ ಹೇಳ್ತ್.

ನಾನ್ ವಿದೇಶಿ ಭಾಷೆ ಸಿನಿಮಾನ ಖಂಡಿತ ನೋಡ್ಲೆ ಉಮೇಶ ಹೇಳ್ತ್.

ಆಗ ರಜಿತ್ ಹೇಳ್ತ್ ನಾನ್ 10ನೇ ತರಗತಿಲಿ ಚಪ್ಪನಾಕೆಗೂ ಇಂಗ್ಲಿಷ್ ಬಾಷೆಲಿ ಪಾಸಾದು ಇಲ್ಲೆ.

ನೈಯಣ್ಣೀರ ರಶ್ಮಿ, ಕಡಿಯತ್ತೂರು.

6ನೇ ಪುಟದಿಂದ

ಸೀಲ್ ಮಾಡಿ ಸುಭದ್ರವಾಗಿ ಇರಿಸಿದ್ದನು.

ಸೇಡಿನ ಕತೆಯ ಪ್ರಾರಂಭ !

ನರೇಂದ್ರನಾಯಕನನ್ನು ಎಡತೊರೆಯವರ್‍ಯಾರು ಸರಿಯಾಗಿ ನೋಡಿರಲಿಲ್ಲ. ಅವನು ಓದಿನ ಕಾರಣದಿಂದ ಸದಾ ನಗರದಲ್ಲೇ ಇರುತ್ತಿದ್ದನು.

ಇದೊಂದು ರೀತಿ ಅನುಕೂಲವಾಯಿತು.

ನರೇಂದ್ರ ನಾಯಕನಿಗೆ ಸಂಪಿಗೆ ಪುರದ ದೇವಾಲಯದ ಗರ್ಭಗುಡಿಯಲ್ಲಿ ರಹಸ್ಯ ನೆಲ ಮಾಳಿಗೆ ಇರುವ ಸಂಗತಿ ತಿಳಿದಿತ್ತು !

ಪಾಳೆಯಗಾರರ ವಂಶದವನಲ್ಲವೆ?

ಮೂರು ತಿಂಗಳುಗಳ ಹಿಂದೆ ಅವನು ಸಂಪಿಗೆ ಪುರದ ದೇವಸ್ಥಾನದಲ್ಲಿ ಪೂಜಾರಿಯಾಗಿ ಸೇರಿಕೊಂಡನು.

ಯಾರಿಗೂ ಅನುಮಾನ ಬರಲಿಲ್ಲ !

ರಾತ್ರಿಯ ಹೊತ್ತು ಗಾಳಿ, ಬೆಳಕು ಬಾರದ ನೆಲಮಾಳಿಗೆಯಲ್ಲಿ ಸರ್ಪಗಂಧ ತಯಾರಿಸಿದನು.

ಗಾಳಿ ಬರುತ್ತಿರಲಿಲ್ಲವಾದ್ದರಿಂದ ಹೆಚ್ಚು ಹೊತ್ತು ಗಂಧ ತೇಯಲು ಆಗುತ್ತಿರಲಿಲ್ಲ ! ಬಹು ಬೇಗ ಆಯಾಸವಾಗಿ ಬಿಡುತ್ತಿತ್ತು !

(ಮುಂದುವರೆಯುತ್ತದೆ)

---

13ನೇ ಪುಟದಿಂದ

ಮಗುವೆಂದೋ, ಗಂಡನೆಂದೋ ಭಾವಿಸಿ ಪೂಜಿಸುವುದುಂಟು. ಪ್ರೀತಿಸುವುದುಂಟು. ಶ್ರೀ ವೈಷ್ಣವ ಆಳ್ವಾರರುಗಳಲ್ಲಿ ಒಬ್ಬರಾದ ಪೆರಿಯಾಳ್ವಾರರು ದೇವರನ್ನು ಮಗುವೆಂದು ಭಾವಿಸಿ ಪ್ರೀತಿಸಿದರು. ತಮ್ಮ ದಿವ್ಯ ಮಂಗಳ ಮೂರ್ತಿಗೆ ಏನು ಕೇಡಾಗುವುದೋ ಎಂದು ನೊಂದುಕೊಂಡು ಅವನಿಗೆ, ಕ್ಷೇಮವನ್ನು ಕೋರಿ ಪದ್ಯವನ್ನು ಕಟ್ಟಿ ಹಾಡಿದರು. ಹಲಕಾಲ ಹಲವು ಸಾವಿರ ಕಾಲ ಹಲಕೋಟಿ ನೂರು ಕಾಲ, ಮಲ್ಲನನುಗೆಲಿದ ನಿಡುದೋಳ ಮಣಿವರ್ಣಾ, ನಿನ್ನ ಕನ್ನಡಿಯ ಕೆಂಪಿಗೆ ರಕ್ಷೆಯಿರಲಿ ಎಂದು ಹಾರೈಸಿದರು.

ಕೃಷ್ಣ - ಗೋಪಿಯರ ಸಂಬಂಧವನ್ನು ಕುರಿತದ್ದೂ ಇನ್ನೊಂದು ಬಗೆಯ ನೋವು. ಕೃಷ್ಣ ಅಗಲಿದಾಗ ಅವರು ಆ ವಿರಹತಾಪವನ್ನು ತಾಳಲಾರದೆ ಪರಿತಪಿಸಿದರು. ಇಂದ್ರಿಯಾತೀತವಾದ ಆ ಮಧುರ ವೇದನೆಗೆ ಸಾಟಿಯೇ ಇರಲಾರದು.

ಅಂತೂ ದೇಹದ ನೋವನ್ನು ಮೀರಿ, ಜಗತ್ತಿನ ಜೀವಿಗಳಿಗೆಲ್ಲ ಅನುಕಂಪ ಕೋರುವ ಹೃದಯದ ನೋವಿನ ಸೀಮೆಯನ್ನು ನಿಲುಕಿ, ಅಲ್ಲಿಂದಲೂ ಏರಿ ಇಂದ್ರಿಯಾತೀತವಾದ ಆನಂದಾನುಭೂತಿಗಾಗಿ ತುಡಿಯುವವರೆಗೆ ನೋವು ಹರಡಿಕೊಂಡಿದೆ. ಭವದಿಂದ ಭವ್ಯದವರೆಗೆ ದಿವ್ಯದವರೆಗ ಹಬ್ಬಿದ ನೋವಿನ ಸ್ವರೂಪವನ್ನು ಅರಿತು ಅನುಭವಿಸುವುದರಲ್ಲೇ ಜೀವನದ ಸಾರ್ಥಕತೆಯಿದೆ ಯೆನಿಸುತ್ತದೆ.

– ಕೆದಂಬಾಡಿ ಆರ್. ವಿನೋದ್. ಮೇಕೇರಿ.

---

## 2ನೇ ಹುಟ್ಟುಹಬ್ಬದ ಶುಭಾಶಯಗಳು



ಮೊಟ್ಟೇರ ರಿಯಾ ವಾಸುದೇವ

ಮುಂಬಾಯಿಯ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಮಾಸ್ಟರ್ ಆಫ್ ಟೆಕ್ನಾಲಜಿ ವ್ಯಾಸಂಗ ಮಾಡುತ್ತಿರುವ ಮೇಜರ್ ಮೊಟ್ಟೇರ ನಂಜಪ್ಪ ವಾಸುದೇವ ಹಾಗೂ ಮಾಲಿನಿ ವಾಸುದೇವ ದಂಪತಿಗಳ ಪುತ್ರಿ. ಮುಂಬಾಯಿಯಲ್ಲಿ ತನ್ನ ತಂದೆ-ತಾಯಿಗಳ ಜತೆ ಹುಣ್ಣಿಮೆಚಂದ್ರನಂತೆ ಬೆಳಗುತ್ತಿರುವ ಮುದ್ದಿನ ಕಂದ ರಿಯಾಳಿಗೆ ನಮ್ಮ ಶುಭಾಶಯ ಹಾಗೂ ಆಶೀರ್ವಾದಗಳು.

ಅಜ್ಜಿ : ಶ್ರೀಮತಿ ಪಾಡಿಚೆಟ್ಟೀರ ಜಯಲಕ್ಷ್ಮಿ ಮಂದಣ್ಣ
ಮತ್ತು ಮಕ್ಕಳು, ಬೆಂಗಳೂರು.

ಮಾವ, ಅತ್ತೆ : ಬೈತಡ್ಕ ಜೋಯಪ್ಪ ಡಿ ಯಸ್ಪಿ,
ಡಾಕ್ಟರ್ ಎಂ. ಎನ್. ಬೋಜಮ್ಮ ಮತ್ತು ಮಕ್ಕಳು, ಬೆಂಗಳೂರು.

---

## ಹುಟ್ಟು ಹಬ್ಬದ ಶುಭಾಶಯಗಳು



ಪಟ್ಟಡ ಅಭಿನಂದನ
ಜನ್ಮ ದಿನಾಂಕ : 28-10-1996

ನಿನ್ನ 4ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು ಮತ್ತು ಶ್ರೀವೆಂಕಟರಮಣ ಸ್ವಾಮಿಯ ಹಾಗೂ ಶೃಂಗೇರಿ ಶಾರದಾಂಬೆಯ ಕೃಪೆಯಿಂದ ಆಯುರಾರೋಗ್ಯ, ಐಶ್ವರ್ಯವನ್ನು ದಯಪಾಲಿಸಲಿ ಎಂದು ಹಾರೈಸುವ

ನಿನ್ನ ತಾತಂದಿರಾದ : ಪಟ್ಟಡ ಹೊನ್ನಪ್ಪ ಮತ್ತು ಕೆಂಚಪ್ಪ
ಅಜ್ಜಿಯಂದಿಯರಾದ : ರಾಧಮ್ಮ, ಭಾಗೀರಥಿ
ತಂದೆ, ತಾಯಿ : ಪಟ್ಟಡ ದೇವಯ್ಯ, ಪದ್ಮಾವತಿ
ಅತ್ತೆಯವರಾದ : ಶಶಿ, ಕಲಾ, ಪ್ರೇಮಾ, ಚಂದ್ರಾವತಿ,
ಮಾವಂದಿರಾದ : ಹರೀಶ್, ರಮೇಶ್ ರಾಜಮಣಿ, ಜಯಮಣಿ, ಉದಯ
ಚಿಕ್ಕಪ್ಪ : ಚಂದ್ರಶೇಖರ, ಆಂಟಿ : ಪ್ರೇಮ
ಪ್ರಕಟಣೆ : ಪಟ್ಟಡ ಹೊನ್ನಪ್ಪ, ಯಡುಂಡೆ ಗ್ರಾಮ,
ಗೋಣಿಮಾರೂರು, ಸೋಮವಾರ ಪೇಟೆ ತಾ., ಕೊಡಗು - 571 236.

---


## ನಿವೇಶನ ಲಭ್ಯವಿದೆ

ಮೈಸೂರು ನಗರದ ಹೆಬ್ಬಾಳ, ಬಡಾವಣೆಯ (ಮೊದಲಹಂತದ ಸೂರ್ಯಬೇಕರಿ ಸಮೀಪ) 30 × 20 ಅಳತೆಯ ಮೂಲೆ ನಿವೇಶನ ಲಭ್ಯವಿದೆ. ಹಾಗೆಯೇ ವಿಜಯನಗರದ 3ನೇ ಹಂತದ ಕೊನೆಯಲ್ಲಿ (ಹಿನಕಲ್‌ನಿಂದ ¾ km ಅಂತರ) 30 × 40ರ ನಿವೇಶನ ಮಾರಾಟಕ್ಕೆ. ಮತ್ತು ಲಭ್ಯವಿದೆ ಪಕ್ಕದಲ್ಲಿಯೇ 30 × 40' ಅಳತೆಯ ಮನೆಯೂ ಸಹ ಲಭ್ಯವಿದೆ

**Please contact : 0821/513348, 516771**

---

## ಚಿರಸ್ಮರಣೆ




ದಿ॥ ದೇವಜನ ಎಂ. ಗಣಪತಿ
ನಿಧನ : 7-10-1996

ನೀವು ನಿಧನರಾಗಿ 4 ವರ್ಷಗಳು ಸಂದರು ನಿಮ್ಮ ಸವಿನೆನಪು ನಮ್ಮ ಮನದಾಳದಲ್ಲಿ ಅಚ್ಚಹಸುರಾಗಿ ಉಳಿದಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಸದಾ ನೀಡಲಿ ಎಂದು ಪ್ರಾರ್ಥಿಸುವ.

ದುಃಖ ತಪ್ತ ಪತ್ನಿ : ದೇವಜನ ಪೊನ್ನಮ್ಮ ಗಣಪತಿ.

ಪುತ್ರ : ಗೋಕುಲ (ಸತ್ಯ) ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಮತ್ತು ಕುಟುಂಬಸ್ಥರು, ಬಂಧು ಮಿತ್ರರು.

**ಕಿರುಪರಿಚಯ :** ಇವರು 30 ವರ್ಷಗಳ ಕಾಲ ಸರಕಾರಿ ಶಿಕ್ಷಕರಾಗಿ ಹಲವಾರು ಶಾಲೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ. 8 ವರ್ಷಗಳ ಕಾಲ ಸರಕಾರಿ ಪ್ರಾಥಮಿಕ ಶಾಲೆ ಹೊದವಾಡದಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ, 1992 ಡಿಸಂಬರ್ ತಿಂಗಳಿನಲ್ಲಿ ಸೇವೆಯಿಂದ ನಿವೃತ್ತರಾಗಿ, ನಿವೃತ್ತಿ ವೇತನವನ್ನು ಪಡೆಯುತ್ತಿದ್ದರು.




ದಕ್ಷಿಣ ಕಾಶಿ ತಲಕಾವೇರಿ ಕ್ಷೇತ್ರ ಹಾಗೂ ಕುಂಡಿಕೆ ಎದುರು ಕುಳಿತಿರುವ ಪುರೋಹಿತ




ತೀರ್ಥವನ್ನು ತೆಗೆದುಕೊಳ್ಳುವ ಭರದಲ್ಲಿ ಭಕ್ತಾದಿಗಳು

ಚಿತ್ರ ಕಳುಹಿಸಿದವರು : ಹೆಚ್. ಟಿ. ಅನಿಲ್, ಉದಯ ಟಿ. ವಿ. ಕರೆಸ್ಪಾಂಡೆಂಟ್, ಮಡಿಕೇರಿ.



ಕಾವೇರಿ ತೀರ್ಥೋದ್ಭವದ ಸಂದರ್ಭ ಪೂಜಾ ಕಾರ್ಯದಲ್ಲಿ ನಿರತರಾದ ಪುರೋಹಿತರು.



ಕುಂಡಿಕೆಯ ಹತ್ತಿರದಲ್ಲಿರುವ ಪುಷ್ಕರಣಿ

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.